ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 23

ಐಕ್ಯರಂಗ

ರೂ. 2.00
4 ಜೂನ್ 1995



ಜೂನ್ ತಿಂಗಳಲ್ಲಿ ರಾಜ್ಯಾದ್ಯಂತ ರಾಜಕೀಯ ಪ್ರಚಾರ

-ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಜೂನ್ ತಿಂಗಳು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ದೇಶದ ರಾಜಕೀಯ, ರಾಜ್ಯದ ರಾಜಕೀಯದ ಬಗ್ಗೆ ಜನತೆಗೆ ಪಕ್ಷದ ನಿಲುವನ್ನು ತಿಳಿಸಿ ಹೊಸ ಆರ್ಥಿಕ ನೀತಿಗಳ ವಿರುದ್ಧ ಕೋಮುವಾದಿ ಶಕ್ತಿಗಳ(ಮುಖ್ಯವಾಗಿ ಬಿಜೆಪಿ) ಅಪಾಯದ ವಿರುದ್ಧ ಮತ್ತು ಭ್ರಷ್ಟಾಚಾರದ ವಿರುದ್ಧ ಪ್ರಚಾರ ಸಭೆಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಈ ಎಲ್ಲಾ ಧೋರಣೆಗಳನ್ನು ಮುಂದಿಟ್ಟು ಕಾಂಗ್ರೆಸ್(ಐ) ಈಗ ಇಬ್ಭಾಗವಾಗಿರುವುದರಿಂದ ಈ ಮೂರು ವಿಷಯಗಳನ್ನು ಕುರಿತು ನಮ್ಮ ಚಳುವಳಿಗಳನ್ನು ಇನ್ನೂ ವಿಶಾಲಗೊಳಿಸಲು ದೊರೆತ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು, ಕಾಂಗ್ರೆಸ್(ಐ)ಗೆ ಬಿಜೆಪಿಯೇತರ ಪರ್ಯಾಯವನ್ನು ಕಟ್ಟುವುದು ದೇಶದ ಐಕ್ಯತೆಗೆ, ಸಮಗ್ರತೆಗೆ ಮತ್ತು ಮುಂದಿನ ಬೆಳವಣಿಗೆಗೆ ಅವಶ್ಯಕವೆಂದು ಈ ಪ್ರಚಾರ ಸಭೆಗಳಲ್ಲಿ ವಿವರಿಸಬೇಕು ಎಂದು ರಾಜ್ಯ ಸಮಿತಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬೆಂಗಳೂರಿನಲ್ಲಿ ಮೇ 20 ರಿಂದ 22ರವರೆಗೆ ಸಭೆ ಸೇರಿತು. ಕಾಂ. ನಿತ್ಯಾನಂದ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಪಿ.ರಾಮಚಂದ್ರನ್ ಮಾರ್ಗದರ್ಶನ ನೀಡಿದರು.

ಮೇ 19 ರಂದು ನಡೆದ ಭಿನ್ನ ಮತೀಯ ಕಾಂಗ್ರೆಸ್ಸಿಗರ ಸಮಾವೇಶ ಆರ್ಥಿಕ ಸುಧಾರಣೆಗಳಿಗೆ ಮಾನವೀಯ ಮುಖವಿರಬೇಕೆಂದು ಹೇಳಿದರಷ್ಟೇ ಸಾಲದು ಎಂದುಕೊಂಡು ಬಹುರಾಷ್ಟ್ರೀಯ ಕಂಪೆನಿಗಳಿಗೆ ಮನಬಂದಂತೆ ಅವಕಾಶ, ಸಾರ್ವಜನಿಕ ವಲಯ ಖಾಸಗೀಕರಣ ಇತ್ಯಾದಿಗಳನ್ನು ವಿರೋಧಿಸಿದೆಯಲ್ಲದೆ ಭೂ ಸುಧಾರಣೆಗಳ ಮಹತ್ವವನ್ನೂ ಗಮನಿಸಿದೆಯಾದ್ದರಿಂದ ನಮ್ಮ ಹೋರಾಟಗಳನ್ನು ಇನ್ನಷ್ಟು ವ್ಯಾಪಕಗೊಳಿಸಲು ಅವಕಾಶವಾಗಿದೆ ಎಂದು ಕಾಂ. ಪಿ.ಆರ್.ಸಿ. ಹೇಳಿದರು.

ಪಕ್ಷದ ನಿಧಿಗೆ ಕರೆ

1995ರ ಪಕ್ಷದ ನಿಧಿಗೆ 3 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಪಕ್ಷದ ರಾಜಕೀಯ ಚಟುವಟಿಕೆಗಳನ್ನು ವಿಸ್ತರಿಸಲು ನೆರವಾಗಬೇಕು ಎಂದು ರಾಜ್ಯ ಸಮಿತಿ ಕರೆ ನೀಡಿತು.

ಸಮಾವೇಶಗಳು

ಈ ಹಿಂದೆ ರಾಜ್ಯ ಸಮಿತಿ ರಾಜ್ಯದ ನಿರ್ದಿಷ್ಟ ಸಮಸ್ಯೆಗಳ ಮೇಲೆ ಸಮಾವೇಶಗಳನ್ನು ನಡೆಸಬೇಕೆಂದು ಕರೆ ನೀಡಿದ್ದು ಈ ಸಭೆಯಲ್ಲಿ ಅದನ್ನು ಕಾರ್ಯಗತಗೊಳಿಸುವ ನಿರ್ದಿಷ್ಟ ವಿಧಾನಗಳ ಬಗೆ ನಿರ್ಧರಿಸಿತು. ಬೆಂಗಳೂರಿನಲ್ಲಿ 'ವಿದ್ಯುತ್' ಸಂಬಂಧಪಟ್ಟಂತೆ ಹಾಗೂ ಕನಿಷ್ಠ ಕೂಲಿ ಕುರಿತಂತೆ ಸಮಾವೇಶಗಳನ್ನು ನಡೆಸಲಾಗುವುದು. ಹುಬ್ಬಳ್ಳಿಯಲ್ಲಿ 'ಭೂಮಿ' ಪ್ರಶ್ನೆಯ ಕುರಿತು ಸಮಾವೇಶ ನಡೆಯುತ್ತದೆ. ಗುಲ್ಬರ್ಗಾದಲ್ಲಿ ಭೀಮಾರಾಯನ ಗುಡಿಯಲ್ಲಿ ನೀರಾವರಿ ಬಗೆ ಹಾಗೂ ಬೆಂಗಳೂರಿನಲ್ಲಿ ಉದ್ಯೋಗ ಕುರಿತು ಸಮಾವೇಶಗಳು ನಡೆಯಲಿವೆ.

ಕ್ಯೂಬಾಕ್ಕೆ ಸೌಹಾರ್ದತೆ

ಹೋರಾಟನಿರತ ಕ್ಯೂಬಾದ ಜನತೆಗೆ ನಮ್ಮ ಬೆಂಬಲ ವ್ಯಕ್ತಪಡಿಸಲು ಸಿಪಿಐ(ಎಂ) ಪೊಲಿಟ್ ಬ್ಯೂರೋ ನೀಡಿರುವ ಕರೆಯಂತೆ ರಾಜ್ಯದಲ್ಲಿ 50 ಸಾವಿರ ರೂ. ಸಂಗ್ರಹಿಸಿ ನೀಡಲು ರಾಜ್ಯ ಸಮಿತಿ ಕರೆ ನೀಡಿದೆ. ಪಕ್ಷದ ಸಂಗಾತಿಗಳು ತಂತಮ್ಮ ಆರ್ಥಿಕ ಶಕ್ತ್ಯನುಸಾರವಾಗಿ ಈ ನಿಧಿಗೆ ಕಾಣಿಕೆ ನೀಡಬೇಕು ಎಂದು ರಾಜ್ಯ ಸಮಿತಿ ಕೋರಿದೆ.

ಬೆಂಗಳೂರಿನಲ್ಲಿ ಕೃಷಿಕೂಲಿಕಾರರ ಅಖಿಲ ಭಾರತ ಸಭೆ

ಅಖಿಲ ಭಾರತ ಕೃಷಿಕೂಲಿಕಾರರ ಮಂಡಳಿ ಸಭೆ ಜುಲೈ 1 ಹಾಗೂ 2 ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಅದನ್ನು ಯಶಸ್ವಿಗೊಳಿಸಲು ನೆರವಾಗಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಬಾಲ ಕಾರ್ಮಿಕರ ಸಮಸ್ಯೆ ಕುರಿತು ವರ್ಕ್‌ಶಾಪ್

ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ)ಯ ಸಹಯೋಗದೊಂದಿಗೆ ಸಿಐಟಿಯು ಹೋಟೆಲುಗಳಲ್ಲಿ ಕೆಲಸ ಮಾಡುವ ಬಾಲಕಾರ್ಮಿಕರ ಸಮಸ್ಯೆ ಕುರಿತು ಒಂದು ಅಖಿಲ ಭಾರತ ಕಮ್ಮಟವನ್ನು ನಡೆಸಲಿದ್ದು ಅದು ಬೆಂಗಳೂರಿನಲ್ಲಿ ಜೂನ್ 29 ರಿಂದ ಜುಲೈ 2 ರ ವರೆಗೆ ನಡೆಯಲಿದೆ. ಇದನ್ನು ಯಶಸ್ವಿ ಮಾಡಲು ನೆರವಾಗಬೇಕೆಂದೂ ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಜನತಾದಳ ಸರಕಾರ ಎತ್ತ ಸಾಗಿದೆ?

-ಪಿ.ರಾಮಚಂದ್ರರಾವ್

ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಜನತಾದಳ ಸರಕಾರವು ಪಿ.ವಿ.ನರಸಿಂಹರಾಯರ ನೂತನ ಆರ್ಥಿಕ ಧೋರಣೆಯನ್ನು ಜ್ಯಾರಿ ಮಾಡುವ ದಿಕ್ಕಿನಲ್ಲಿ ಭರದಲ್ಲಿ ಹೆಜ್ಜೆ ಇಡುವಾಗಲೇ ರಾಜ್ಯದ ಬಹುಭಾಗದ ಸಾಮಾನ್ಯ ಜನರ ಜೀವನಕ್ಕೆ ಸಂಬಂಧಪಟ್ಟ ಹತ್ತು ಹಲವಾರು ಪ್ರಶ್ನೆಗಳ ವಿಚಾರದಲ್ಲಿ ಯಾವುದೇ ರೀತಿಯಲ್ಲಿ ತಲೆ ಕೆಡಿಸಿಕೊಳ್ಳದ 'ಸ್ಥಿತಪ್ರಜ್ಞ'ನಂತೆ ವರ್ತಿಸುತ್ತದೆ.

ಅದು ಅನುಸರಿಸುತ್ತಿರುವ ಈ ಧೋರಣೆಗಳು ಅಂತಹವು.


1. ವಿದ್ಯುಚ್ಛಕ್ತಿ ಉತ್ಪಾದನೆ ಹೆಚ್ಚಿಸಿ ರಾಜ್ಯದಲ್ಲಿರುವ ವಿದ್ಯುಚ್ಛಕ್ತಿ ಬೇಡಿಕೆಯನ್ನು ಪೂರೈಸುವುದಕ್ಕೆ ಜನತಾದಳದ ಸರಕಾರಕ್ಕೆ ಕಾಂಗ್ರೆಸ್(ಐ) ಸರಕಾರಕ್ಕಿಂತ ಭಿನ್ನವಾದ ಧೋರಣೆ ಇಲ್ಲ. ಅದೇ ಕೊಜೆಂಟ್ರಿಕ್ಸ್ ಕಂಪೆನಿಯೊಡನೆ ಒಪ್ಪಂದ, ಅದೇ ಕೆ.ಇ.ಬಿ. ಖಾಸಗೀಕರಣದ ಬೆದರಿಕೆ, ಅದೇ ರೈತರ ಮೇಲಿನ ವಿದ್ಯುತ್ ರಿಯಾಯಿತಿ ರದ್ಧತಿಯ ಬೆದರಿಕೆ ಇತ್ಯಾದಿ. ಕೆ.ಇ.ಬಿ.ಗೆ ಬಂಡವಾಳ ಒದಗಿಸಿಕೊಟ್ಟು, ಅದರ ಆಡಳಿತೆಯನ್ನು ಸುಸ್ಥಗೊಳಿಸಿ, ಈಗಾಗಲೇ 50 ಶೇಕಡಾಕ್ಕೂ ಹೆಚ್ಚು ವಿದ್ಯುಚ್ಛಕ್ತಿ ಉತ್ಪತ್ತಿಗೆ ಅನುವು ಮಾಡಿಕೊಡುವ ಯೋಜನೆಗಳನ್ನು ಪೂರ್ತಿ ಮಾಡುವ ದಿಕ್ಕಿನಲ್ಲಾಗಲೀ, ಪಶ್ಚಿಮ ಬಂಗಾಳ ಸರಕಾರ ಮಾಡಿದಂತೆ ಜಂಟೀ ಕ್ಷೇತ್ರದಲ್ಲಿ ಮುಂದಕ್ಕೆ ಇಡೀ ಯೋಜನೆಯನ್ನೇ ರಾಜ್ಯಕ್ಕೆ ಬಿಟ್ಟು ಕೊಡಲು ಬದ್ಧವಾದ ಕಂಪೆನಿಗಳ ಜತೆ ಒಪ್ಪಂದವಾಗಲೀ.. ಈ ಕುರಿತು ಯಾವುದೇ ಮಾತು ಈ ಸರಕಾರ ಆಡುತ್ತಿಲ್ಲ, ಹಾಗೂ ಅಂತಹ ಧೋರಣೆ ವಹಿಸುತ್ತಿಲ್ಲ.

2. ಸರಕಾರವೇ ನಡೆಸುತ್ತಿರುವ ಕೈಗಾರಿಕೆಗಳಲ್ಲಿ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವುಗಳ ನಿರ್ದಿಷ್ಟ ಮೇನೇಜ್‌ಮೆಂಟ್ ಗಳಲ್ಲಿರುವ ಅವ್ಯವಹಾರಗಳನ್ನು ತೆಗೆದು ಹಾಕುವ ಮೂಲಕ ಹಾಗೂ ಯೋಗ್ಯ ನೂತನ ತಂತ್ರಜ್ಞಾನವನ್ನು ಪಡೆಯುವ ದಿಕ್ಕಿನಲ್ಲಿ ಶ್ರಮಿಸಿ ಉತ್ಪಾದನೆಯನ್ನು ಹೆಚ್ಚಿಸುವ ಹಾಗೂ ಹೊಸ ಮಾರ್ಕೆಟುಗಳನ್ನು ಪಡೆಯುವ ದಿಕ್ಕಿನಲ್ಲಿ ಸರಕಾರವು ಯೋಚನೆಯನ್ನೇ ಮಾಡುತ್ತಿಲ್ಲ. ಬದಲು, ಕಾಂಗ್ರೆಸ್(ಐ) ಮಂತ್ರಿಗಳು ಹೇಳುತ್ತಾ ಬಂದ ರೀತಿಯಲ್ಲಿ 'ಖಾಸಗೀಕರಣ' ಮಾಡಲಾಗುವುದು ಎಂಬ ಬೆದರಿಕೆಯನ್ನೇ ಒಡ್ಡುತ್ತಿದ್ದಾರೆ ಜನತಾದಳದ ಮಂತ್ರಿಗಳು.

3. ನೀರಾವರಿ ಯೋಜನೆಗಳು ಒಂದೇ ಒಂದು ಕ್ಷಣ ನಿಲ್ಲದಂತೆ ನೋಡಿ, ಅವುಗಳು ನಡೆಯುತ್ತಿರುವಾಗಲೇ ಅವುಗಳಲ್ಲಿ ವರ್ಷಗಟ್ಟಲೆಯಿಂದ ಸೋರಿ ಹೋದ "ಭ್ರಷ್ಟಾಚಾರದ ಹೆಗ್ಗಣಗಳನ್ನು ಹೊರಗೆ ಹಾಕಬೇಕಾದ ಕ್ರಮ" ವಹಿಸುವ ಬದಲು ದೇವೇಗೌಡರು ನೀರಾವರಿ ಯೋಜನೆಗಳ ಕೆಲಸವನ್ನೇ ಹಲವು ಕಡೆ ನಿಲ್ಲಿಸಿದ್ದಾರೆ. ಭ್ರಷ್ಟಾಚಾರದ ತನಿಖೆಗಳಿಗೆ ಆಜ್ಞೆ ಇತ್ತಿದ್ದಾರೆ. ಮಾತ್ರವಲ್ಲ 1995-96ರ ಬಜೆಟಿನಲ್ಲಿ ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸುವುದಕ್ಕೆ ಏನೇನೂ ಮೊಬಲಗನ್ನು ಒದಗಿಸದೆ, ಎಲ್ಲವನ್ನೂ ಸಾರ್ವಜನಿಕರಿಂದ ಬಾಂಡು ರೂಪದಲ್ಲಿ ವಸೂಲಿ ಮಾಡಿದ ಹಣದಿಂದ ಯೋಜನೆಗಳನ್ನು 2000ನೇ ಇಸವಿಯ ಒಳಗೆ ಪೂರ್ತಿಗೊಳಿಸುವ ಆಶ್ವಾಸನೆ ಈಯುತ್ತಿದೆ. ಬದಲು, ರಾಜ್ಯದ ಎಲ್ಲಾ ಪಕ್ಷಗಳ ಸಹಕಾರವನ್ನು ಪಡೆಯಲು ಮುಂದಾಗಿ, ಒಂದು ವಿಶೇಷ ಪರಿಣತರ ಕಮಿಟಿಯ ಮೇಲ್ವಿಚಾರಣೆಯಲ್ಲಿ ಯುದ್ಧೋಪಾದಿಯಲ್ಲಿ ಯೋಜನೆ ಪೂರೈಸುವ ದೃಢ ನಿರ್ಧಾರ ಮಾಡಲು ಸರಕಾರ ಹಿಂಜರಿಯುತ್ತಿದೆ. ಇಲ್ಲಸಲ್ಲದ ಖರ್ಚುಗಳನ್ನು ಕಡಿಮೆ ಮಾಡಿ, ಯೋಜನೆಗಳ ಪೂರೈಕೆಗೆ ಆದ್ಯ ಗಮನ ಕೊಡಲು ಸರಕಾರ ಮುಂದಾಗುತ್ತಿಲ್ಲ!

ಪುಟ 8ಕ್ಕೆ

ಕಾಂ.ಎ.ವಿ. ಅಪ್ಪಾಸ್ವಾಮಿ ರೆಡ್ಡಿ ನಿಧನ



• ಕೋಲಾರ ಜಿಲ್ಲೆಯಲ್ಲಿ ಹಲವು ರೈತ ಹೋರಾಟಗಳಲ್ಲಿ ಭಾಗವಹಿಸಿದ್ದ, ಹಲವಾರು ಹೋರಾಟಗಳಿಗೆ ನೇತೃತ್ವ ವಹಿಸಿದ್ದ ಹಿರಿಯ ರೈತ ಮುಖಂಡ ಹಾಗೂ 1983-85ರ ಅವಧಿಯಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಸಿಪಿಐ(ಎಂ)ನ ವಿಧಾನಸಭಾ ಸದಸ್ಯರಾಗಿದ್ದ ಎ.ವಿ.ಅಪ್ಪಾಸ್ವಾಮಿ ರೆಡ್ಡಿಯವರು ಇದೇ ಮೇ 23ರಂದು ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು.

1913ರಲ್ಲಿ ಆಚೆಪಲ್ಲಿ ಗ್ರಾಮದಲ್ಲಿ ಜನಿಸಿದ ಅಪ್ಪಾಸ್ವಾಮಿ ರೆಡ್ಡಿಯವರು 1952ರಲ್ಲಿ ರೈತ ಹೋರಾಟಕ್ಕೆ ಧುಮುಕಿದರು. ಇದಕ್ಕೆ ಮೊದಲು ಕ್ವಿಟ್ ಇಂಡಿಯಾ ಚಳುವಲಿಯಲ್ಲಿ ಬಾಗವಹಿಸಿ ಬ್ರಿಟಿಷ್ ಜೈಲುವಾಸದ ಅನುಭವ ಪಡೆದ ಸ್ವಾತಂತ್ರ್ಯ ಹೋರಾಟಗಾರರು.

ಕೋಲಾರ ಜಿಲ್ಲೆ ಪಕ್ಕದ ಆಂಧ್ರಪ್ರದೇಶದ ತೇಲಂಗಾಣಾ ರೈತರ ಹೋರಾಟದಿಂದ ಸ್ಫೂರ್ತಿ ಪಡೆದು ಜೋಡಿದಾರರ ವಿರುದ್ಧ ರೈತರ ಹೋರಾಟವನ್ನು ಸಂಘಟಿಸಿದವರಲ್ಲಿ ಅಪ್ಪಾಸ್ವಾಮಿ ರೆಡ್ಡಿಯವರು ಪ್ರಮುಖರು. ಈ ಹೋರಾಟದ ಪರಿಣಾಮವಾಗಿ ಜೋಡಿ ಇನಾಂ ರದ್ದು ಶಾಸನ ಜಾರಿಗೆ ಬಂತು. ಆದರೆ ಪರಿಹಾರ ತೆತ್ತು ರೈತರು ಜಮೀನು ಪಡೆಯುವುದು ದುಸ್ತರವಾಗಿ ಆಗಲೂ ರೈತರ ಪರವಾಗಿ ದನಿಯೆತ್ತಿದ ರೈತ ಮುಖಂಡರಿವರು. ಇದೇ ರೀತಿ 1964ರಲ್ಲಿ ಬಂಜರು ಭೂಮಿ ಹಂಚಿಕೆಗಾಗಿ ರೈತರ ಹೋರಾಟ, 1967-68ರಲ್ಲಿ ಕೋಲಾರ ಜಿಲ್ಲೆಯ ಭೂಕಂದಾಯ ರದ್ದು ಮಾಡಬೇಕೆಂದು ಒತ್ತಾಯಿಸಿ 60 ದಿನಗಳ ಪಾದಯಾತ್ರೆ, 1973ರಲ್ಲಿ ಕೋಲಾರ ಜಿಲ್ಲೆಯಲ್ಲಿ ತೀವ್ರವಾಗಿ ನಡೆದ ಭೂ ಆಕ್ರಮಣ ಚಳುವಳಿ ಇತ್ಯಾದಿಹೋರಾಟಗಳೂ ಅಪ್ಪಾಸ್ವಾಮಿ ರೆಡ್ಡಿಯವರು ಒಬ್ಬ ಪ್ರಮುಖ ಮುಖಂಡರಾಗಿದ್ದರು.

1980ರ ಆಗಸ್ಟ್‌ನಲ್ಲಿ ನರಗುಂದ-ನವಲಗುಂದದಲ್ಲಿ ರೈತರ ಮೇಲೆ ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ ಬಾಗೇಪಲ್ಲಿಯಲ್ಲಿ ಸುಮಾರು 10 ಸಾವಿರ ರೈತರ ಬೃಹತ್ ಪ್ರತಿಭಟನಾ ಮತಪ್ರದರ್ಶನದ ನೇತೃತ್ವ ವಹಿಸಿದ್ದಾಗ ಪೋಲೀಸರ ಆಕ್ರಮಣದಿಂದ ಸ್ವಲ್ಪದರಲ್ಲಿ ಪಾರಾದ ಅವರನ್ನು ಹಾಗೂ ಇತರ ಮುಖಂಡರನ್ನು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಜೈಲಿಗಟ್ಟಿದರು. ಈ ಬಂಧನ ರಾಜ್ಯಾದ್ಯಂತ ಖಂಡನೆಗೊಳಗಾಯಿತು. ಆಳುವ ಪಕ್ಷದ ಚಿತಾವಣೆಯಿಂದ ನಡೆದ ಗೋಲೀಬಾರಿನಲ್ಲಿ ಇಬ್ಬರು ರೈತ ಕಾರ್ಯಕರ್ತರು ಹುತಾತ್ಮರಾದರು. ನಂತರ ಇದೇ ಪ್ರಶ್ನೆಯ ನೆತ್ತಿ ಬೆಂಗಳೂರಿನಲ್ಲಿ ನಡೆದ ಬೃಹತ್

ಪುಟ 8ಕ್ಕೆ

ಕೆಲವು ಸಂಚಿಕೆಗಳ ಹಿಂದೆ (ಏಪ್ರಿಲ್ 23, 1993) ಈ ಅಂಕಣದಲ್ಲಿ ಮಹಾರಾಷ್ಟ್ರದ ಬಾಳಠಾಕ್ರೆ ಯವರ 'ಪರ್ಮಿಟ್ ವ್ಯವಸ್ಥೆ' ಅದಕ್ಕೆ ಕರ್ನಾಟಕದ ಡಾ. ಚಿದಾನಂದಮೂರ್ತಿಯವರ ಬೆಂಬಲದ ಬಗ್ಗೆ ಒಂದು ಟಿಪ್ಪಣಿ ಓದಿರುವಿರಿ. ನರಸಿಂಹರಾವ್ ಕಂಪೆನಿಯ "ಉದಾರೀಕರಣ"ದ ವಿರುದ್ಧ ತುಟಿಪಿಟಿಕ್ಕೆನ್ನದವರು ವಾಸ್ತವವಾಗಿ ಜನರ ಒಂದು ಸ್ತರ ಪರೋಕ್ಷವಾಗಿಯಾದರೂ ಎಲ್ಲಾ ಭಾಷೆಗಳ, ಧರ್ಮಗಳ ಜನರನ್ನು 'ಹೊರಗಿಡುತ್ತಾರೆ' ಎಂದು ಆ ಲೇಖನದಲ್ಲಿ ಹೇಳಲಾಗಿತ್ತು. ಜನರ ಒಂದು ಸ್ತರ ಪ್ರಶ್ನೆಯನ್ನೆತ್ತಿ ಅದಕ್ಕೆ ವಸ್ತುನಿಷ್ಠವಾಗಿ ಯೋಚಿಸಬೇಕಾದ ವಿದ್ವಾಂಸರೂ ಸಂಕುಚಿತ 'ಪರಿಹಾರ' ಸೂಚಿಸುವಾಗ ಖೇದವಾಗುವುದು ಸಹಜ. ಈ ಖೇದವನ್ನು ವ್ಯಕ್ತಪಡಿಸಿದ ಗಿರೀಶ್ ಕಾರ್ನಾಡರನ್ನು ಕನ್ನಡ ಸಾಹಿತ್ಯ ಲೋಕದ ಇನ್ನಿಬ್ಬರು ದಿಗ್ಗಜಗಳು ಡಾ. ಹಾ.ಮಾ. ನಾಯಕ್ ಹಾಗೂ ಚಂದ್ರಶೇಖರ ಪಾಟೀಲರು ಹೀಯಾಳಿಸಿದ್ದಾರೆಂಬ ಸುದ್ದಿಗೆ ಸಾಹಿತಿಗಳಿಂದಲೂ ಪ್ರತಿಕ್ರಿಯೆ ಬಂದಿದೆ. ಅದಕ್ಕೂ ಹೆಚ್ಚಾಗಿ ಪತ್ರಿಕೆಗಳಲ್ಲಿ ವಾಚಕರದ ಪ್ರತಿಕ್ರಿಯೆಗಳೂ ಸಾಕಷ್ಟು ಬಂದಿವೆ. ಈ ಪ್ರಮುಖ ಪ್ರಶ್ನೆಯ ವಿವಿಧ ಆಯಾಮಗಳ ಬಗ್ಗೆ ಕನ್ನಡದ ಚಿಂತನಶೀಲರು ಹೇಗೆ ಯೋಚಿಸುತ್ತಿದ್ದಾರೆ ಎಂಬುದರ ಒಂದು ಚಿತ್ರವನ್ನು ನೀಡುತ್ತದಾದ್ದರಿಂದ ಅದನ್ನಿಲ್ಲಿ ಸಂಗ್ರಹಿಸಿಕೊಟ್ಟಿದ್ದೇವೆ.

ಬಾಳಠಾಕ್ರೆ ಮತ್ತು ಚಿದಾನಂದಮೂರ್ತಿ: ಕನ್ನಡದ ಚಿಂತನಶೀಲರು ಕಂಡಂತೆ

ಆಳನೋಡುವ ಹುನ್ನಾರ

ಕನ್ನಡದ ಇಬ್ಬರು ಸಾಹಿತಿಗಳಾದ ದೇವನೂರು ಮಹಾದೇವ ಹಾಗೂ ಪ್ರೊ.ಕೆ. ರಾಮದಾಸ್ ಮೈಸೂರಿನಿಂದ ಪ್ರತಿಕ್ರಿಯಿಸುತ್ತಾ "ಚಿದಾನಂದ ಮೂರ್ತಿಯವರು ಬಾಳಾಠಾಕ್ರೆಯಂತಾಗಬೇಕೆಂದು ಬಯಸುತ್ತಿರುವುದು ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಹುನ್ನಾರವಾಗಿದೆ" ಎಂದಿದ್ದಾರೆ. "ಕೊಂಕಣಿ, ತುಳು, ಕೊಡವ ಮುಂತಾದ ಕನ್ನಡ ನಾಡಿನ ಭಾಷೆಗಳು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿರುವುದು ಅವರ ಅರಿವಿಗೆ ಬಾರದೇ ಹೋದದ್ದು ದಿಗ್ಭ್ರಮೆ ಉಂಟುಮಾಡುತ್ತದೆ" ಎಂದಿದ್ದಾರೆ.

ನಿಜವಾಗಿ ಕನ್ನಡ ವಿರೋಧಿ ಯಾರು?

ಶೂದ್ರ ಶ್ರೀನಿವಾಸ, ಪ್ರೊ.ವ್ಯಾ.ಶ್ರೀ., ರಂಜಾನ್ ದರ್ಗಾ ಹಾಗೂ ಮಾಜಿ ಶಿಕ್ಷಣ ಸಚಿವ ಬಿ. ಸುಬ್ಬಯ್ಯ ಶೆಟ್ಟಿಯವರ 'ಪ್ರಜಾವಾಣಿ' (11.5.95) ವಾಚಕರ ಪತ್ರ ಪ್ರಶ್ನೆಯನ್ನೆತ್ತಿದೆ.

ಅದು ಹೀಗಿದೆ "ತುಳುವ, ಕೊಡವ, ಮಲೆಯಾಳಿ, ಮರಾಠಿ, ತಮಿಳು, ತೆಲುಗು, ಹಿಂದೂಸ್ತಾನಿ, ಉರ್ದು, ಕೊಂಕಣಿ ಮೊದಲಾದ ಮಾತೃಭಾಷೆಯುಳ್ಳ ಮುಸ್ಲಿಮರು, ಸಿದ್ಧಿಗಳು, ಮೊಗವೀರರು, ಬಿಲ್ಲವರು, ಬಂಟರು, ಬಹುತೇಕ ದಲಿತರು ಮತ್ತು ಗಿರಿಜನರು ಮುಂತಾದ ಕನ್ನಡಿಗರು ಶುದ್ಧ ಕನ್ನಡಿಗರಲ್ಲವೆಂದೇ ಇವರ ವಾದದ ತಿರುಳು.

ಈ ವಾದವನ್ನೇ ಅನುಸರಿಸಿದರೆ 'ಶುದ್ಧ ಕನ್ನಡಿಗರೇ' ಕನ್ನಡ ನಾಡಿನಲ್ಲಿ ಅಲ್ಪಸಂಖ್ಯಾತರಾಗುವುದರಿಂದ ಇವರ ವಾದ ಮೂಲತಃ ಕನ್ನಡ ವಿರೋಧಿ ಎನ್ನುವುದರಲ್ಲಿ ಸಂಶಯ ವಿಲ್ಲ.



"ಕತ್ತಲು ಕವಿದಂತಿದೆ. ಆದರೆ ಬಾಳಠಾಕ್ರೆಯವರದೊಂದು ಆಶಾಕಿರಣವಿರ ಬಹುದು" ಎನ್ನುತ್ತಾರೆ ಎನ್ರೋನ್ ಪ್ರತಿನಿಧಿ. 'ಇಕಾನಾಮಿಕ್ ಟೈಮ್ಸ್'ನಲ್ಲಿ ಉನ್ನಿಯವರ ಈ ವ್ಯಂಗ್ಯ ದುಡಿಯುವ ಜನರಿಗೆ 'ಪರ್ಮಿಟ್ ವ್ಯವಸ್ಥೆ' ಹಾಕಬೇಕೆನ್ನುವವರ ಆಳುವ ವರ್ಗಗಳ ಪರವಾದ ನಿಲುವನ್ನು ಸಂಕೇತಿಸುತ್ತದೆ.

ಕನ್ನಡಿಗರಿಗೆ ಉಪಕಾರ ಹೇಗೆ?

ಶಿವಸೇನೆಯ ಮನೋಭಾವನೆ ಬಿಟ್ಟರೆ ಕನ್ನಡಿಗರಿಗೆ ಬಹಳ ಉಪಕಾರವಾದೀತು ಎನ್ನುತ್ತಾರೆ -ಶಿಬ್ಬಳ್ಳಿ ಗಣಪತಿ ಶರ್ಮ (ಪ್ರಜಾವಾಣಿ 11.5.95). ಅನ್ಯಭಾಷಿಕರನ್ನು ಹೊರದೂಡುವ ನೀತಿ ಎಷ್ಟು ಸಮಂಜಸ ಅವರು ಪ್ರಶ್ನಿಸಿದ್ದಾರೆ. ಅವರ ಪತ್ರದ ಕೆಲ ಅಂಶಗಳು.

"...ಕರ್ನಾಟಕದಲ್ಲಿ ಕನ್ನಡಿಗರಿಗೆ ಮಾತ್ರ ಕೆಲಸ ನೀಡಬೇಕು ಎನ್ನುವ ವೀರ ಘೋಷಣೆಯಲ್ಲಿ ಭಾರತದ ಇತರ ಕಡೆಗಳಲ್ಲಿ ವಾಸಿಸುವವರ ಹಿತವನ್ನೇ ಮರೆತಿರುವಂತೆ ಕಾಣುತ್ತದೆ. ಸಾಮಾನ್ಯವಾಗಿ ಬ್ಯಾಂಕ್, ಹೋಟೆಲ್, ಉದ್ಯೋಗಗಳಲ್ಲಿ ಹೆಚ್ಚಾಗಿ ಕನ್ನಡಿಗರು ಎಲ್ಲಾ ರಾಜ್ಯಗಳಲ್ಲಿ ಹರಡಿಕೊಂಡಿದ್ದಾರೆ. ವಿಜ್ಞಾನಿಗಳಲ್ಲೂ, ಇತರೆ ಕೆಲಸಗಳಲ್ಲಿ ನಿಷ್ಣಾತರಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕದ ಹೊರಗೆ ಈ ಜನರು ಇದ್ದಾರೆ. ಬೊಂಬಾಯಿಯಲ್ಲೇ ಹತ್ತು ಲಕ್ಷ ಜನರಿದ್ದಾರೆಂದು ಹೇಳುತ್ತಾರೆ. ಈ ಲಕ್ಷಾಂತರ ಜನರನ್ನು ಆಯಾಯ ರಾಜ್ಯಗಳಿಂದ ಓಡಿಸಿದರೆ ಕನ್ನಡ ನೆಲದಲ್ಲೇ ಅವರವರ ವಿದ್ಯಾರ್ಹತೆ, ಕಾರ್ಯ ದಕ್ಷತೆಗೆ ತಕ್ಕಂತೆ ಉದ್ಯೋಗ ಒದಗಿಸಲು ಕರ್ನಾಟಕ ಸರಕಾರಕ್ಕೆ ಸಾಧ್ಯವೇ? ಹೊರ ಕನ್ನಡಿಗರ ಹಿತರಕ್ಷಿಸುವ ಈ ವೀರ ಕನ್ನಡಾಭಿಮಾನಿಗಳ ಕನ್ನಡ ನೆಲದಿಂದ ಅನ್ಯ ಭಾಷಿಕರನ್ನು ಹೊರದೂಡುವ ನೀತಿ ಎಷ್ಟು ಸಮಂಜಸ?

.......ಕರ್ನಾಟಕದಲ್ಲಿ ಪರರಾಜ್ಯದವರು ಸಾಕಷ್ಟು (ಅಗತ್ಯವಾಗಿರುವದಕ್ಕಿಂತ) ಹೆಚ್ಚು ಬಂದಿದ್ದರೂ ನಮ್ಮವರೂ ಸಹ ತಮ್ಮ ತಮ್ಮ ಅನುಕೂಲ, ಅರ್ಹತೆಗೆ ಯೋಗ್ಯ ಆದಾಯಕ್ಕಾಗಿ ಕೆಲಸ ಅರಸಿ ಹೋಗಿದ್ದಾರೆ. ಅಲ್ಲಿ ತಮ್ಮ ಜೀವನವನ್ನು ಇತರರಿಗೆ ಕಡಿಮೆ ಇಲ್ಲದಂತೆ ಸುಖವಾಗಿ ಬಾಳುವುದಕ್ಕಾದರೂ ನಾವು ಶಿವಸೇನೆಯ ಮನೋಭಾವನೆ ಬಿಟ್ಟು ನಡೆದುಕೊಂಡರೆ ಕನ್ನಡಿಗರಿಗೆ ಬಹಳ ಉಪಕಾರವಾದೀತು.

ಕನ್ನಡಿಗರಿಗೆ ಅಪಾಯ ಯಾರಿಂದ?

ಇದು 13.5.95ರಂದು 'ಪ್ರಜಾವಾಣಿ'ಯ ವಾಚಕರವಾಣಿಯಲ್ಲಿ ಕನಕಪುರದ ಸಿದ್ದುರವರ ಪತ್ರದ ಶಿರೋನಾಮೆ. ಇದು ಈ ಸಮಸ್ಯೆಯ ಇನ್ನೊಂದು ಆಯಾಮದತ್ತ ಕನ್ನಡಿಗರ ಗಮನಸೆಳೆದಿದೆ ಎಂಬ ಕಾರಣಕ್ಕಾಗಿ ಆ ಪತ್ರದ ಕೆಲವು ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ

".....ಇವತ್ತು ವಲಸೆ ಎಂಬುದು ಜಾಗತಿಕ ಸಮಸ್ಯೆ. ಅತ್ಯಂತ ಸೂಕ್ಷ್ಮವಾದ ಈ ಸಮಸ್ಯೆಯ ಬಗ್ಗೆ ವಿವೇಕದಿಂದ ಎಚ್ಚರದಿಂದ ಚಿಂತಿಸಿ ಚರ್ಚಿಸಿ ಜನಪರವಾದ ನಿರ್ಣಯಕ್ಕೆ ಬರುವುದು ಅತ್ಯಾವಶ್ಯಕವಾಗಿದೆ. ಯಾರ ವಲಸೆ, ಯಾವ ಪ್ರಮಾಣದ ವಲಸೆ ಅಪಾಯಕಾರಿ ಅಥವಾ ಪ್ರಯೋಜನಕಾರಿ ಎಂಬುದನ್ನು ಯಾವುದೇ ಒಂದು ಸಮುದಾಯ ಸಮಗ್ರ ದೃಷ್ಟಿಯಿಂದ ವಿವೇಚಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಕರ್ನಾಟಕದ ಬಗ್ಗೆ ಹೇಳುವುದಾದರೆ ಇಲ್ಲಿ ಕೂಲಿ ನಾಲಿ ಮಾಡಿ ಜೀವನೋಪಾಯಕ್ಕೆ ಬರುತ್ತಿರುವ ತಮಿಳರು ಮತ್ತಿತರ ಅನ್ಯಭಾಷಿಕರು ನಾಡಿನ ಆರ್ಥಿಕತೆಗೆ ಎಷ್ಟರ ಮಟ್ಟಿಗೆ ಪೂರಕವಾಗಿ ನಿರ್ಮಾಣದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆಂಬುದನ್ನು ಪೂರ್ವಗ್ರಹವಿಲ್ಲದೆ ನೋಡಬೇಕು. ಹಾಗೆಯೇ ಇಲ್ಲಿನ ಶ್ರಮ ಸಂಪತ್ತು ಸಂಪನ್ಮೂಲಗಳನ್ನೆಲ್ಲ ದೋಚುತ್ತಾ ಕನ್ನಡಿಗರ ಬದುಕಿಗೆ ಕಂಟಕವಾಗಿರುವ ಹೊರರಾಜ್ಯದ (ಉತ್ತರದ) ಬಂಡವಾಳಿಗರ ಶೋಷಣೆಯ ಬಗೆಗೆ ಚಿದಾನಂದ ಮೂರ್ತಿಯವರ ಬಳಗ ಚಕಾರವೆತ್ತುವುದಿಲ್ಲ, ಯಾಕೆಂಬುದನ್ನು ಕೂಡ ಗಂಭೀರವಾಗಿ ಆಲೋಚಿಸಬೇಕಾಗಿದೆ......ನಮ್ಮ ಕನ್ನಡ ರಾಷ್ಟ್ರೀಯತೆಗೆ ಬಹುಮುಖ್ಯವಾಗಿ ಎದುರಾಗಿರುವ ಆಪತ್ತುಗಳೆಂದರೆ ಪ್ರವಾಹದ ರೀತಿಯಲ್ಲಿ ಹರಿದು ಬರುತ್ತಿರುವ ವಿದೇಶಿ ಬಂಡವಾಳದ ಹೂಡಿಕೆ, ಲೂಟಿಕೋರ ಬಹುರಾಷ್ಟ್ರೀಯ ಕಂಪೆನಿಗಳ ಕಾರ್ಯಾಚರಣೆ ಮತ್ತು ಉತ್ತರ ಭಾರತದ ದೊಡ್ಡ ಬಂಡವಾಳಿಗರ ಪಾಲು ವಾಟು, ವ್ಯಾಪಾರದ ಮೇಲಿನ ನಿಯಂತ್ರಣ ಹೆಚ್ಚಾಗುತ್ತಿರುವುದು.

ಈ ಯಾವುದರ ಬಗ್ಗೆಯೂ ಮಾತನಾಡದೆ ಅತಿಭಾವುಕ ನೆಲೆಯಲ್ಲಿ ಅನ್ಯಭಾಷಿಕರ ವಿರುದ್ಧ ಕಿಡಿಕಾರುತ್ತಿರುವುದು ನಾಡಿನ ಏಳಿಗೆಯ ದೃಷ್ಟಿಯಿಂದ ಸರಿಯಾದುದಲ್ಲ, ನಾಡಬಾಂಧವರು ಎದುರಿಸುತ್ತಿರುವ ನಿಜವಾದ ಅಪಾಯಗಳ ಬಗ್ಗೆ ಎಚ್ಚರಿಸದೆ, ಆ ದಿಕ್ಕಿನಲ್ಲಿ ಹೋರಾಟಗಳನ್ನು ರೂಪಿಸದೆ ಕನ್ನಡ ನಾಡಿನ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯವಿಲ್ಲ.

ಓಂ, ಕನ್ನಡಿಗರು: ಒಂದು ಅನುಭವ

ತಾನು 'ಹಾಗ ಹೇಳಿಲ್ಲ' ಎಂದು 'ಪ್ರಜಾವಾಣಿ'ಯ 'ವಾಚಕರ ವಾಣಿ'ಯಲ್ಲಿ (12.5.95) ಬರೆದಿರುವ ಚಂಪಾರವರು 'ಮಣ್ಣಿನ ಮಗನ ಸಿದ್ಧಾಂತವನ್ನು ಅದರ ಅನಿವಾರ್ಯತೆಯನ್ನು ಸ್ವಾಗತಿಸುತ್ತಲೇ ನಾನು ಅದೇ ಸಮಾವೇಶದಲ್ಲಿ ಬಾಳಠಾಕ್ರೆ ಅಂಥವರ ಸರ್ವಾಧಿಕಾರೀ ಮನೋಭಾವವನ್ನು, ಭಾಷಾ ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆಯನ್ನು, ಆರ್.ಎಸ್.ಎಸ್.- ಬಿಜೆಪಿಯಂಥ ಕೋಮುವಾದಿ ಶಕ್ತಿಗಳೊಂದಿಗಿನ ಒಡನಾಟದವನ್ನು ಖಂಡಿಸಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ನನ್ನನ್ನು ಟೀಕಿಸುವ ಗೆಳೆಯರು ಈ ಅಂಶವನ್ನು ಮರೆಮಾಚುತ್ತಿರುವುದು ಅವರ ಕೊಳಕು ಮನಸ್ಸುಗಳಿಗೆ ಸಾಕ್ಷಿಯಾಗಿದೆ" ಎಂದು ಹೇಳಿದ್ದಾರೆ. ಆದರೆ ಅದರ ಹಿಂದಿನ ದಿನ (11.5.95) ಅದೇ ವಾಚಕರ ವಾಣಿಯಲ್ಲಿ ಪ್ರಕಟವಾದ ಎಸ್. ಶ್ರೀನಿವಾಸ್ ರಂಗನ್ ರವರ ಪತ್ರವನ್ನು "ನೀವು ನಿಶ್ಚಿಂತೆಯಿಂದ ಕನ್ನಡದ ಕೆಲಸ ಮಾಡಿ" ಎಂದು ಡಾ. ಚಿಮೂ.ರವರಿಗೆ ಚಂಪಾ. ಅವರ ಸಾಂತ್ವನ (ಪ್ರಜಾವಾಣಿ, 6.5.95) ದೊಂದಿಗೆ ಓದಿದಾಗ ಅವರ ಈ ರೇಗಾಟ ಎಷ್ಟು ಸರಿ ಎಂದು ಪ್ರಶ್ನೆ ಏಳುವುದಿಲ್ಲವೇ? ಎಸ್. ಶ್ರೀನಿವಾಸ್ ರಂಗನ್‌ರವರ ಪತ್ರ ಹೀಗಿತ್ತು-

"ಡಾ. ಚಿದಾನಂದಮೂರ್ತಿ, ಹಾ.ಮಾ. ನಾಯಕ ಮತ್ತಿತರರು ಬಾಳ ಠಾಕ್ರೆಯ ಫ್ಯಾಸಿಸ್ಟ್ ಚಿಂತನೆಯನ್ನು ಬೆಂಬಲಿಸಿ ಮಾತನಾಡುತ್ತಿರುವುದು ಮತ್ತು ಅದೇ ಉಸಿರಿನಲ್ಲಿ ಪ್ರಬಲ ಜಾತ್ಯತೀತ ನಿಲುವಿನ ಡಾ. ಗಿರೀಶ್ ಕಾರ್ನಾಡರನ್ನು ಖಂಡಿಸಿರುವುದು ಕೇವಲ ಕಾಕತಾಳೀಯವಾಗಿರದೆ ಒಂದಕ್ಕೊಂದು ಪೂರಕವಾಗಿದೆ. ಈ ನಾಡಿನ ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ನಮ್ಮ ಕನ್ನಡ ಚಳವಳಿ ಹಿಡಿದಿರುವ ಆತ್ಮಘಾತಕ ದಿಕ್ಕನ್ನು ಇದು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಒಂದು ಅನುಭವ ನೆನಪಿಗೆ ಬರುತ್ತದೆ.

ಕಾವೇರಿ ಗಲಾಟೆ ಸಂದರ್ಭದಲ್ಲಿ ಮೈಸೂರು ಜಿಲ್ಲೆಯ ಗಡಿ ತಾಲ್ಲೂಕುಗಳ ತಮಿಳರ ಆಸ್ತಿ-ಪಾಸ್ತಿ ಲೂಟಿಯಾಗಿದ್ದ ಸಮಯ, ನಮ್ಮೂರ ರಸ್ತೆ ಬದಿಯ ಚಿಲ್ಲರೆ ಅಂಗಡಿಯೊಂದರ ಮುಂದೆ ಕೆಲ ಅಪರಿಚಿತ ಯುವಕರು ಈ ಬಗ್ಗೆ ಚರ್ಚೆ ನಡೆಸಿದ್ದರು. ಕನ್ನಡಮ್ಮನ ಪರಮ ಭಕ್ತರೂ ಆಗಿದ್ದ ಅವರ ಹಣೆ ಮೇಲೆ ಕುಂಕುಮ ರಾರಾಜಿಸುತ್ತಿತ್ತು. ಹಣೆ ಮೇಲೆ ಕುಂಕುಮ ಧರಿಸುವುದು ಒಂದು ರಾಜಕೀಯ ಫ್ಯಾಷನ್ ಆಗಿದ್ದ ಕಾಲ ಅದು ಎಂದ ಮೇಲೆ ಅವರ ರಾಜಕೀಯ ಒಲವು ನಿಲುವುಗಳ ಬಗ್ಗೆ ಪ್ರತ್ಯೇಕ ಹೇಳಬೇಕಿಲ್ಲ.

ಚರ್ಚೆಯ ಒಂದು ಹಂತದಲ್ಲಿ 'ತಮಿಳರ ವಿರುದ್ಧ ನಾವು ಎಸಗಿದ ಈ ದೌರ್ಜನ್ಯ ತಪ್ಪಲ್ಲವೆ' ಎಂದು ನಾನು ಅನುಮಾನ ವ್ಯಕ್ತಪಡಿಸಿದಾಗ ಬಂದೂಕಿನಿಂದ ಗುಂಡು ಸಿಡಿದಂತೆ ಒಬ್ಬನ ಪ್ರತಿ ಪ್ರಶ್ನೆ ಎದುರಾಯಿತು. "ಹಾಗಾದರೆ ಅವರು ಊಟಿಯಲ್ಲಿ ನಮ್ಮ ಹಿಂದೂಸ್ತ್ರೀಯರ ಮಾನಭಂಗ ಮಾಡಿದ್ದು ಸರಿಯೇ?"

ಯಾವುದೇ ಪೂರ್ವ ಚಿಂತನೆಯಿಲ್ಲದೆ ಆತನ ಸುಪ್ತ ಪ್ರಜ್ಞೆಯೊಳಗಿನಿಂದ ಅತ್ಯಂತ ಸಹಜವಾಗಿ ಹೊರಟ ಈ ಪ್ರಶ್ನೆಗೆ ಏನು ಉತ್ತರಿಸಬೇಕೋ ತೋಚಲಿಲ್ಲ!

ಈಗ ಹೇಳಿ, ಪರಭಾಷಾ ಜನಾಂಗದ ಅಪ್ಪಟ ದ್ವೇಷಿಯೂ, ಪ್ರಖರ ಕೋಮುವಾದಿಯೂ ಆದ ಬಾಳ ಠಾಕ್ರೆಯನ್ನು ಬೆಂಬಲಿಸುವ ಚಿದಾನಂದಮೂರ್ತಿಯಂಥ ಪಂಡಿತೋತ್ತಮರ ನಿಲುವಿಗೂ ಮೇಲೆ ಉದಾಹರಿಸಿದ ಕನ್ನಡಮ್ಮ ಹಾಗೂ ಭಾರತಾಂಬೆಯ 'ಭಕ್ತ'ರ ನಿಲುವಿಗೂ ಏನಾದರೂ ವ್ಯತ್ಯಾಸವಿದೆಯೇ?

ಪ್ರಸಕ್ತ ಕನ್ನಡ ಚಳುವಳಿಯಲ್ಲಿ ನುಸುಳಿರುವ ಓಂ-ಕನ್ನಡಿಗರನ್ನು ಹೊಸಕಿ ಹಾಕದಿದ್ದರೆ ದಲಿತರು, ಶೂದ್ರರು, ಅಲ್ಪಸಂಖ್ಯಾತರನ್ನೊಳಗೊಂಡ ಬಹು ಸಂಖ್ಯಾತ ಕನ್ನಡಿಗರೇ ಚಳುವಳಿಯಿಂದ ದೂರ ಸರಿದಾರು! ಹಾಗಾದಲ್ಲಿ ಅದು ನಮ್ಮ ಕನ್ನಡ ನಾಡಿನ ಸಾಂಸ್ಕೃತಿಕ ದುರಂತವಾದೀತು.

ಬಾಲಂಗೋಚಿ

ಕನ್ನಡದ ಅಭಿಮಾನ ಹೇಗಿರಬೇಕೆಂಬ ಬಗ್ಗೆ ಪ್ರತಿಕ್ರಿಯೆಗಳು ಪ್ರಕಟವಾದ 'ಪ್ರಜಾವಾಣಿ' ಸಂಚಿಕೆಯಲ್ಲೇ (11.5.95) ಇನ್ನೊಂದು ಪತ್ರ ಇತ್ತು. ದೂರದರ್ಶನದಲ್ಲಿ ಕನ್ನಡ ಚಿತ್ರ 'ಮೈಸೂರ ಮಲ್ಲಿಗೆ' 'ಮೈಸೂರು ಮಿಲಿಗೆ' ಎಂದಾದುದಕ್ಕೆ ವ್ಯಥೆ ವ್ಯಕ್ತಪಡಿಸುತ್ತಾ 'ಯಾವ ಜನ್ಮದಲ್ಲಿ ದೂರದರ್ಶನದವರಿಗೆ (ಕನ್ನಡಿಗರು) ಏನು ಅನ್ಯಾಯ ಮಾಡಿದ್ದೆವೋ? ಎಂಬ ಅನುಮಾನ ಬಂದಿತು" ಎನ್ನಲಾಗಿದೆ.

ಅದರ ನಂತರದ ವಾರದಲ್ಲಿ ಅದೇ ದೂರದರ್ಶನದಲ್ಲಿ ಅದೇ ವೇಳೆಯಲ್ಲಿ ಮಲೆಯಾಳಂ ಚಿತ್ರ ಇತ್ತು "ಕಡಲ್...." ಇತ್ಯಾದಿ ಅದು ದೂರದರ್ಶನದವರ ಬಾಯಲ್ಲಿ "ಕಾದಲ್ ....." ಆಗಿತ್ತು. ಇದೇ ರೀತಿ ತಮಿಳು ತೆಲುಗು, ಒರಿಯಾ, ಬಂಗಾಲಿ, ಕಾಶ್ಮೀರಿ, ಗುಜರಾತಿ, ಅಸ್ಸಾಮಿ ಪದೋಚ್ಚಾರಣೆಗಳು ಇರಬಹುದಲ್ಲವೆ? ಆದ್ದರಿಂದ 'ಕನ್ನಡಿಗರಿಗೆ ಅನ್ಯಾಯ' ಎಂಬ ಭಾವುಕ ನಿಲುವು ಇಂತಹ ಸಮಸ್ಯೆಗಳ ಮೂಲವನ್ನು ಹುಡುಕಬಲ್ಲುದೇ!

-ಕೆ.ವಿ

ಅಸಮಾನತೆಯಿಂದ ಅಪರಾಧ ಹೆಚ್ಚಳ

"ಶ್ರೀಮಂತ-ಬಡವರ ನಡುವೆ ಅಂತರ ಹೆಚ್ಚಾದಂತೆಲ್ಲ ಅಪರಾಧಗಳು ಹೆಚ್ಚಾಗಿರುವುದು ಸಹಜ. ಇದನ್ನು ನಾವು ಒಪ್ಪಿಕೊಳ್ಳದೆ ಅಪರಾಧಗಳು ಇಳಿಮುಖವಾಗುತ್ತಿವೆ ಎಂದರೆ ನಮ್ಮನ್ನು ನಾವೇ ಮೋಸಮಾಡಿಕೊಂಡಂತೆ...."

ಸಮಾಜವನ್ನು ತೀಕ್ಷ್ಣ ವಿಶ್ಲೇಷಕ ದೃಷ್ಟಿಯಿಂದ ಪರಿಶೀಲಿಸುವ ಯಾರೋ ಒಬ್ಬ ಸಮಾಜ ವಿಜ್ಞಾನಿಯೋ ಕ್ರಾಂತಿಕಾರಿಯೋ ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೇನೋ ಎಂಬ ಭಾವನೆ ಬರುವುದು ಸಹಜ. ಆದರೆ ಈ ಮಾತನ್ನು ಆಡಿರುವುದು ಬೇರಾರೂ ಅಲ್ಲ; ಕರ್ನಾಟಕದ ಪೋಲೀಸ್ ಮಹಾ ನಿರ್ದೇಶಕ (ಡಿ.ಜಿ.ಪಿ.) ಹಾಗೂ ಮಹಾ ನಿರೀಕ್ಷಕ (ಐ.ಜಿ.ಪಿ.) ಆರ್. ರಾಮಲಿಂಗಂ. ಮೇ 19 ರಂದು ಪೋಲೀಸ್ ಇಲಾಖೆಗೆ ಸಂಬಂಧಿಸಿದ ಒಂದು ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ರಾಮಲಿಂಗಂ ಮೇ 31 ರಂದು ಹುದ್ದೆಯಿಂದ ನಿವೃತ್ತರಾಗಲಿದ್ದಾರೆ. ತಮ್ಮ ೩೫ ವರ್ಷಗಳ ಪೋಲೀಸ್ ಸೇವೆಯ ದೀರ್ಘ ಅವಧಿಯ ಕೊನೆಯಲ್ಲಿ ರಾಮಲಿಂಗಂ, ಜನರ ಆರ್ಥಿಕ ಪರಿಸ್ಥಿತಿಗೂ ಅಪರಾಧಕ್ಕೂ ಸಂಬಂಧವನ್ನು ಕಲ್ಪಿಸಿ ವಿಶ್ಲೇಷಣೆ ಮಾಡಿರುವುದು ಗಮನಾರ್ಹವಾಗಿದೆ.

ಆದರೆ ಇಲ್ಲಿ ಒಂದು ಮುಖ್ಯ ಪ್ರಶ್ನೆ ಉದ್ಭವವಾಗುತ್ತದೆ. ರಾಮಲಿಂಗಂ ನಾನಾ ಹುದ್ದೆಗಳಲ್ಲಿದ್ದಾಗ ವೈಯುಕ್ತಿಕವಾಗಿ ಹಾಗೂ ಇಡೀಯಾಗಿ ಅವರ ಇಲಾಖೆ ಹೇಗೆ ನಡೆದುಕೊಂಡಿದೆ? ಭಾರತದ ಜನರನ್ನು ದಿವಾಳಿಯ ಅಂಚಿಗೆ ತಳ್ಳುವ ಗ್ಯಾಟ್ ಒಪ್ಪಂದದ ವಿರುದ್ಧ ನಡೆದ ಚಳುವಳಿಯ ಬಗ್ಗೆ ರಾಜ್ಯ ಪೋಲೀಸರ ಧೋರಣೆ ಏನಾಗಿತ್ತು ಎಂಬ ಕಹಿ ಅನುಭವ ನಮ್ಮ ಮುಂದಿದೆ. ಡಿ.ಜಿ.ಪಿ.ಯವರ ಮೂಗಿನ ಅಡಿಯಲ್ಲೇ ಬೆಂಗಳೂರಿನ ಗ್ಯಾಟ್ ವಿರೋಧಿ ಹೋರಾಟಗಾರರ ಮೇಲೆ ದಬ್ಬಾಳಿಕೆ ನಡೆದಿತ್ತು.

ಶ್ರೀಮಂತ-ಬಡವರ ಅಂತರವೆಂಬ ಸಾಮಾಜಿಕ-ಆರ್ಥಿಕ ಅಸಮಾನತೆಯನ್ನು ತೊಡೆದು ಹಾಕಲು ಸತತವಾಗಿ ಶ್ರಮಿಸುತ್ತಿರುವ ದುಡಿಯುವ ವರ್ಗದ ಆಂದೋಲನವನ್ನು ರಾಜ್ಯದ ಪೋಲೀಸ್ ಇಲಾಖೆ ಹೇಗೆ ನಿರ್ವಹಿಸಿದೆ? ಇವಕ್ಕೆಲ್ಲ ಹೆಚ್ಚಿನ ವಿವರಣೆ ಅನಗತ್ಯ ಅನಿಸುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಪೋಲೀಸರಿಗೆ ಮಾಲೀಕರ ಹಿತರಕ್ಷಣೆಯೇ ಪ್ರಧಾನವಾಗುತ್ತದೆ ಎಂದಷ್ಟೇ ಹೇಳಬಹುದು.

ಖಾಕಿ ಬಟ್ಟೆ ಧರಿಸಿದ ಜನರು ಹೆಚ್ಚಾದರೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ ಎಂಬ ಭಾವನೆ ಕೆಲವರಲ್ಲಿ ಇದೆ. ಆದರೆ ನಮ್ಮ ಸಂಖ್ಯೆ ಅತಿಯಾದರೆ ಅದು ಹೊಸ ರೀತಿಯಲ್ಲಿ ಭಯದ ವಾತಾವರಣ ಸೃಷ್ಟಿಸುತ್ತದೆ. ಆದ್ದರಿಂದ ಅಪರಾಧಗಳನ್ನು ತಡೆಯಲು ಪೋಲೀಸರ ಸಂಖ್ಯೆಯನ್ನು ಹೆಚ್ಚಿಸುವುದೊಂದೇ ಮಾರ್ಗವಲ್ಲ ಎಂದೂ ರಾಮಲಿಂಗಂ ಹೇಳಿದ್ದಾರೆ.

ಇದು ಒಪ್ಪುವಂಥ ಮಾತೇ ಆದರೆ ಪೋಲೀಸರ ಸಂಖ್ಯೆ ಅತಿಯಾದರೇ ಭಯದ ವಾತಾವರಣ ಸೃಷ್ಟಿಯಾಗದು. ಪೋಲೀಸರ ವರ್ತನೆಯಿಂದ ಹಾಗಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕಾನೂನು ರಕ್ಷಣೆ ಮಾಡಬೇಕಾದ ಪೋಲೀಸರು ಕೀಚಕರಾದ ಪ್ರಕರಣಗಳು ಹತ್ತಾರು ನೂರಾರು ಇವೆ. ಹಠ ಮಾಡುವ ಮಕ್ಕಳನ್ನು ನಿಯಂತ್ರಿಸಲು 'ಪೋಲೀಸ್ ಗುಮ್ಮ'ವನ್ನು ಬಳಸುವಂಥ ಸನ್ನಿವೇಶ ನಿರ್ಮಾಣವಾಗಿದೆಯೆಂದರೆ ಪೋಲೀಸರ ನಡವಳಿಕೆ ಹೇಗಿರುತ್ತದೆಂದು ಅಂದಾಜು ಮಾಡಬಹುದು.

ಅಪರಾಧಗಳೇ ಇಲ್ಲದ ಸಮಾಜ ನಿರ್ಮಾಣ ಮಾಡುವುದು ಅಸಾಧ್ಯ ಎಂದು ರಾಮಲಿಂಗಂ ಹೇಳಿರುವುದು ಒಂದು ರೀತಿಯಲ್ಲಿ ಅವರ ವಿಶ್ಲೇಷಣೆಗೇ ವಿರುದ್ಧವಾದ ಅಭಿಪ್ರಾಯವಾಗಿದೆ. ದುಡಿಯುವ ಸಾಮರ್ಥ್ಯ ಇರುವ ಎಲ್ಲರಿಗೂ ಕೆಲಸ ಸಿಕ್ಕಿ ಎಲ್ಲರ ಮನೆಯಲ್ಲೂ ಸಂತಸದ ಹೊನಲು ಹರಿಯುತ್ತಿದ್ದರೆ ಅಪರಾಧ ಎಂಬ ಪದಕ್ಕೆ ಸ್ಥಾನ ಸಿಗದು.

-ದೀಪು

ಕರ್ನಾಟಕ
ಸುದ್ದಿ
ಸಮಾಚಾರ

ಹೊಸ ಆರ್ಥಿಕ ನೀತಿಯ ವಿರುದ್ಧ ಇಂದು ಹೋರಾಡದವರು ನಾಳೆಪಶ್ಚಾತ್ತಾಪ ಪಡೆಬೇಕಾದೀತು.

-ಸುಕೋಮಲ್ ಸೇನ್

ಮಂಗಳೂರು: ಭಾರತ ಸರಕಾರವು ಕಳೆದ ನಾಲ್ಕು ವರ್ಷಗಳಿಂದ ಜಾರಿ ಮಾಡುತ್ತಿರುವ ಹೊಸ ಆರ್ಥಿಕ ನೀತಿಯ ಅಂಗವಾಗಿ ದೇಶದ ಜನಜೀವನದ ಎಲ್ಲಾ ರಂಗಗಳಲ್ಲಿಯೂ ವಿದೇಶೀ ಬಹುರಾಷ್ಟ್ರೀಯ ಸಂಸ್ಥೆಗಳು ಪ್ರವೇಶಿಸಲು ಸಿದ್ಧತೆ ನಡೆಸುತ್ತಿವೆ. ಈಗ ಸಣ್ಣ ಪ್ರಮಾಣದಲ್ಲಷ್ಟೇ ಕಂಡು ಬರುತ್ತಿರುವ ಈ ಪ್ರಕ್ರಿಯೆಯು ಮುಂದಿನ ಐದಾರು ವರ್ಷಗಳಲ್ಲಿ ದೈತ್ಯ ರೂಪವನ್ನು ತಾಳಲಿದ್ದು ದೇಶದ ಎಲ್ಲಾ ರಂಗಗಳಲ್ಲೂ ಬಹುರಾಷ್ಟ್ರೀಯ ಸಂಸ್ಥೆಗಳು ಪ್ರಳಯದಂತೆ ನುಗ್ಗಿ ಬರುವಾಗ ಭಾರತದ ಪ್ರಜೆಗಳು ತಮ್ಮ ಸ್ವಾತಂತ್ರ್ಯವನ್ನು ರಾಷ್ಟ್ರೀಯ ಸಾರ್ವಭೌಮತೆಯನ್ನೂ ಕಳಕೊಳ್ಳುವ ಗಂಭೀರ ಅಪಾಯ ವಿದೆ. ಆಕ್ರಮಣಕಾರಿಗಳು ಈಗಿನ್ನೂ ಸಿದ್ಧತೆಯ ಹಂತದಲ್ಲಿರುವಾಗ ಭಾರತದ ಕಾರ್ಮಿಕರು ನೌಕರರು ಮತ್ತು ಎಲ್ಲಾ ವಿಭಾಗಗಳ ಜನರು ತೀವ್ರ ಹೋರಾಟವನ್ನು ನಡೆಸಿ ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಲು ಸಾಧ್ಯವಿದೆ. ಇಂದು ಹೋರಾಡದಿದ್ದರೆ ಮುಂದಿನ ವರ್ಷಗಳಲ್ಲಿ ಇಡೀ ದೇಶವನ್ನು ಕಬಳಿಸಲಿರುವ ಬಹುರಾಷ್ಟ್ರೀ ಸಂಸ್ಥೆಗಳ ದಾಳಿಗಳ ಮುಂದೆ ಅಸಹಾಯಕರಾಗಿ ನಾವು ಪಶ್ಚಾತ್ತಾಪ ಪಡಬೇಕಾದೀತು ಎಂದು ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯೂ ಮಾಜಿ ರಾಜ್ಯ ಸಭಾ ಸದಸ್ಯರೂ ಆದ ಸುಕೋಮಲ್ ಸೇನ್ ಅವರು ಹೇಳಿದ್ದಾರೆ.

ಮೇ 15 ರಂದು ಮಂಗಳೂರಿನ ರಾಜ್ಯ ಸರಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಸರಕಾರಿ ನೌಕರರು, ವಿಮಾ ನೌಕರರು, ಬ್ಯಾಂಕ್ ನೌಕರರು ಮತ್ತು ವಿದ್ಯಾರ್ಥಿ -ಯುವ ಜನರೂ ಬುದ್ಧಿ ಜೀವಿಗಳು ಭಾಗವಹಿಸಿದ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಒಂದು ಶತಮಾನದ ಹಿಂದೆ ಕಾರ್ಮಿಕರು ತಮ್ಮ ಕೆಲಸದ ಅವಧಿ ದಿನಕ್ಕೆ ಎಂಟು ಗಂಟೆಗಳಿಗೆ ಮೀರಬಾರದೆಂದು ಒತ್ತಾಯಿಸಿ ಹೋರಾಟ ನಡೆಸಿದ್ದರು.ಇಂದು ಬಂಡವಾಳಶಾಹಿ ದೇಶಗಳಲ್ಲಿ ದಿನಕ್ಕೆ ಬರೇ ನಾಲ್ಕು ಗಂಟೆಗಳ ಕೆಲಸ ಕೊಟ್ಟು, ಅರ್ಧ ಸಂಬಳದಲ್ಲಿ ದುಡಿಯುವ ಪದ್ಧತಿ ಆರಂಭವಾಗಿದೆ. ನೂರು ವರ್ಷ ಹಿಂದಿನ ಬೇಡಿಕೆಯ ವಿಪರ್ಯಾಸವೆಂಬಂತೆ ಇಂದು ಆ ದೇಶಗಳ ಕಾರ್ಮಿಕರು ದಿನಕ್ಕೆ ನಾಲ್ಕು ಗಂಟೆಗಳ ಕೆಲಸವನ್ನು ವಿರೋಧಿಸಿ ಎಂಟು ಗಂಟೆಗಳ ಕೆಲಸ ಕೊಡಬೇಕೆಂದು ಹೋರಾಡುವ ಸ್ಥಿತಿ ಬಂದಿದೆ ಎಂದು ಅವರು ವಿವರಿಸಿದರು. ಆಧುನಿಕ ತಂತ್ರಜ್ಞಾನಗಳ ಅಭೂತಪೂರ್ವ ಬೆಳವಣಿಗೆಯಿಂದಾಗಿ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಉತ್ಪಾದನೆಯು ಬೃಹತ್ ಪ್ರಮಾಣದಲ್ಲಿ ಹೆಚ್ಚುತ್ತಿರುವಾಗ ಅವುಗಳು ಭಾರತದಂತಹ ತೃತೀಯ ಜಗತ್ತಿನ ದೇಶಗಳ ಮಾರುಕಟ್ಟೆಗಳನ್ನು ಸ್ವಾಧೀನ ಪಡಿಸಲು ತಂತ್ರಗಳನ್ನು ರೂಪಿಸುತ್ತಿವೆ. ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕಿನ ಮೂಲಕ ಬಡ ರಾಷ್ಟ್ರಗಳ ಮೇಲೆ ಅವುಗಳ ಒತ್ತಡ ಹೇರುತ್ತಿವೆ. ಭಾರತ ಸರಕಾರವು ಯಾವುದೇ ಪ್ರತಿರೋಧವನ್ನು ನೀಡದೆ ಒತ್ತಡಗಳಿಗೆ ಬಲಿಬಿದ್ದಿದೆ ಎಂದು ಅವರು ವಿವರಿಸಿದರು.

ಭಾರತದ ದುಡಿಯುವ ಜನತೆ ಕಳೆದ ನಾಲ್ಕು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳ ಮೂಲಕ ಪ್ರಬಲ ವಿರೋಧ ವ್ಯಕ್ತಪಡಿಸಿದುದರಿಂದ ಹೊಸ ಆರ್ಥಿಕ ನೀತಿಯ ದಾಳಿಗಳ ವೇಗವನ್ನು ಸ್ವಲ್ಪ ಮಟ್ಟಿಗೆ ತಡೆಯಲು ಸಾಧ್ಯವಾಯಿತೆಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿದ ಅವರು, ಮುಂದಿನ ದಿನಗಳಲ್ಲಿ ಕಾರ್ಮಿಕ ವರ್ಗವು ತನ್ನ ತಿಳುವಳಿಕೆಯನ್ನು ಇನ್ನಷ್ಟು ಹೆಚ್ಚಿಸಿಕೊಂಡು ಬೃಹತ್ ಚಳುವಳಿಗೆ ಸಿದ್ಧತೆಗೊಳ್ಳಬೇಕೆಂದು ಕರೆ ನೀಡಿದರು.

ಹಿರಿಯ ಕಾರ್ಮಿಕ ಮುಂದಾಳು ಬಿ. ಮಾಧವನವರು ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ರಾಜ್ಯ ಸರಕಾರಿ ನೌಕರರ ಮುಂದಾಳು ಕೆ. ರಾಮಯ್ಯ ಹೆಗಡೆಯವರು ಸ್ವಾಗತಿಸಿದರು. ಕೊನೆಯಲ್ಲಿ ವಾಸುದೇವ ಉಚ್ಚಿಲ್ ಅವರು ವಂದಿಸಿದರು.

ಕೋಮುವಾದದ ವಿರುದ್ಧ ಹೋರಾಡಲು ಮೇ ದಿನದ ಪ್ರತಿಜ್ಞೆ

ಹುಬ್ಬಳ್ಳಿ: ಮುಗ್ಧ ಜನರಲ್ಲಿ ಕೋಮು ದ್ವೇಷದ ಬೀಜ ಬಿತ್ತಿ ದುಡಿಯುವ ಜನತೆಯ ಐಕ್ಯತೆಯನ್ನು ನಾಶಮಾಡಲು ಹವಣಿಸುತ್ತಿರುವ ಶಕ್ತಿಗಳ ವಿರುದ್ಧ ಹೋರಾಡುವ ಪ್ರತಿಜ್ಞೆ ಮಾಡಬೇಕೆಂದು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕಾಂ. ನಿತ್ಯಾನಂದಸ್ವಾಮಿಯವರು ಮನವಿ ಮಾಡಿದರು. ಅವರು ಮೇ ದಿನಾಚರಣೆಯ ಅಂಗವಾಗಿ ಹುಬ್ಬಳ್ಳಿಯ ಗಾಜಿನ ಮನೆಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ನಗರದಲ್ಲಿ ಮೇಲಿಂದ ಮೇಲೆ ಗಲಭೆಗಳನ್ನುಂಟುಮಾಡಿ ಜನರ ನೆಮ್ಮದಿಯನ್ನು ಹೊಸಕಿ ಹಾಕುವ ಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಬೇಕೆಂದು ಸರ್ಕಾರವನ್ನು ಆಗ್ರಹಿಸಿದ ಅವರು ನಗರದಲ್ಲಿ ನಕಲಿ ಸಾರಾಯಿ ತಯಾರಿಕೆ, ಅದರ ಅಕ್ರಮ ಸಾಗಾಟ ಮತ್ತು ಮಾರಾಟ ಮೊದಲಾದ ಭೂಗತ ಚಟುವಟಿಕೆಗಳನ್ನು ತಡೆಗಟ್ಟಲು ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದರು. ನಗರದ ಕೆಲವೊಂದು ಹೋಟೆಲುಗಳಲ್ಲಿ ಕೈಗಾರಿಕಾ ಬಡಾವಣೆಗಳ ಕೆಲವೊಂದು ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಪ್ರತಿ ದಿನ 8 ಗಂಟೆಗಳಿಗಿಂತಲೂ ಹೆಚ್ಚು ಕಾಲ ಅಕ್ರಮವಾಗಿ ದುಡಿಸಲಾಗುತ್ತಿದೆ ಎಂದು ಆರೋಪಿಸಿದ ಅವರು ಇಂತಹ ಅಸಂಘಟಿತ ಕಾರ್ಮಿಕರನ್ನು ಸಂಘಟಿಸಲು ಸಂಘಟಿತ ಕಾರ್ಮಿಕರು ಮುಂದಾಗಬೇಕೆಂದು ಕರೆ ನೀಡಿದರು.

ಸಭೆಯ ಆರಂಭದಲ್ಲಿ ಕಾಮ್ರೇಡ್ ಅಬ್ದುಲ್ ರಜಾಕ್ ಮತ್ತು ಕಾಮ್ರೇಡ್ ಗಂಗಾಧರ ಗಾಡದ್ ಕ್ರಾಂತಿಗೀತೆಗಳನ್ನು ಹಾಡಿದರು. ಕಾಂ. ಡಿ.ಜೆ. ಗೋಂದಕರ್ ಸ್ವಾಗತಿಸಿದರು. ಕೊನೆಯಲ್ಲಿ ಕಾಂ. ಎಂ.ಹೆಚ್. ಮುಲ್ಲಾ ವಂದಿಸಿದರು.

ಇದಕ್ಕೂ ಮೊದಲು ಹಳೆ ಹುಬ್ಬಳ್ಳಿಯಲ್ಲಿ ಸಿಐಟಿಯು ಕಾರ್ಯಾಲಯದಿಂದ ಕಾರ್ಮಿಕರ ಮೆರವಣಿಗೆಯನ್ನು ಸಂಘಟಿಸಲಾಗಿತ್ತು. ಬೀಡಿ ಕಾರ್ಮಿಕ ಮಹಿಳೆಯರು, ಕಿರ್ಲೋಸ್ಕರ್ ಕಾರ್ಮಿಕರು ಕೈ ಮಗ್ಗದ ನೇಕಾರರು ಕೈಗಾರಿಕಾ ಬಡಾವಣೆಗಳ ಸಿಐಟಿಯು ನೇತೃತ್ವದ ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕಾಂ. ವಿ.ಎಂ. ಪೂಜಾರ್, ಕೃಷ್ಣ ಪ್ರಭು, ಕೆ.ಪಿ. ಜೋಶಿ, ಪುತ್ತಾರ್ ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಮೈಸೂರು ಮಿನರಲ್ಸ್‌ನಲ್ಲಿ ಕಾರ್ಮಿಕರ ಹೊರಾಟಕ್ಕೆ ಜಯ

ರಾಜ್ಯ ಸರಕಾರದ ಒಡೆತನಕ್ಕೆ ಸೇರಿದ ಮೈಸೂರು ಮಿನರಲ್ಸ್‌ಗೆ ಸೇರಿದ ಗಣಿಯೊಂದು ಮೈಸೂರು ಜಿಲ್ಲೆ ನಂಜನಗೂಡುತಾಲೂಕ್ ಹುಲ್ಲಹಳ್ಳಿಯಲ್ಲಿದ್ದು ಸುಮಾರು 250 ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಂಘಟಿತರಾಗಿ ಆಡಳಿತ ವರ್ಗದ ವಿರುದ್ಧ ಹೋರಾಟದಲ್ಲಿ ಯಶಸ್ಸುಗಳಿಸಿದ್ದಾರೆ, ಸಂಸ್ಥೆಯಲ್ಲಿದ್ದ ಬಾಲಬಡುಕ ಸಂಘದಲ್ಲಿದ್ದ ಕಾರ್ಮಿಕರು ಹೊರಬಂದು ಸಿಐಟಿಯು ನೇತೃತ್ವದಲ್ಲಿ ಸಂಘ ರಚಿಸುತ್ತಿದ್ದಂತೆ ಸುಮಾರು 10 ಕಾರ್ಮಿಕ ಮುಖಂಡರನ್ನು ರಾಜ್ಯದ ಬೇರೆ ಸ್ಥಳಗಳಿಗೆ ವರ್ಗಮಾಡಿ, ಕಾರ್ಮಿಕರ ಮೇಲೆ ಏಕ ಪಕ್ಷೀಯವಾಗಿ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಿ, ಅದನ್ನು ವಿರೋಧಿಸುವ ಕಾರ್ಮಿಕರಮೇಲೆ ದೌರ್ಜನ್ಯ ನಡೆಸಲಾಗುತ್ತಿತ್ತು. ಸ್ಥಳೀಯ ವ್ಯವಸ್ಥಾಪಕರು ಕಾರ್ಮಿಕರ ಮೇಲೆ ಗೂಂಡಾ ದಾಳಿ ನಡೆಸುವುದು ಹಾಗೂ ಕಾರ್ಮಿಕರಲ್ಲಿ ಸಣ್ಣ ಜಗಳಗಳಿಗೆ ಪೋಲೀಸರ ಮೂಲಕ ಬೆದರಿಸುವಂತಹ ಕಾರ್ಮಿತ ವಿರೋಧಿ ನೀತಿ ಅನುಸರಿಸುತ್ತಿದ್ದರು. ಮೇ 8 ರಿಂದ ಗಣಿಗೆ ಅಕ್ರಮವಾಗಿ ಬೀಗ ಮುದ್ರೆ ಘೋಷಿಸಿದ್ದಲ್ಲದೆ ಕಾರ್ಮಿಕರನ್ನು ಬೆದರಿಸಲು 21 ಜನ ಕಾರ್ಮಿಕ ಮುಂದಾಳುಗಳನ್ನು ಅಮಾನತ್ತುಗೊಳಿಸಲಾಗಿತ್ತು.

ಆಡಳಿತವರ್ಗದ ಅಕ್ರಮ ಬೀಗ ಮುದ್ರೆ, ಅದರಿಂದ 250 ಕಾರ್ಮಿಕರಿಗೆ ಕೆಲಸ ವಿಲ್ಲದಂತಾಗುವುದರ ವಿರುದ್ಧ ಪ್ರತಿಭಟಿಸಲು ಎಲ್ಲ ಕಾರ್ಮಿಕರು ತಮ್ಮ ಹೆಂಡತಿ ಮಕ್ಕಳ ಸಹಿತ ಬೆಂಗಳೂರಿಗೆ ಜಾಥಾ ಬಂದು ಮುಖ್ಯ ಮಂತ್ರಿಗಳ ಮನೆ ಮುಂದೆ ನೆರೆದರು. 3 ದಿನಗಳ ಕಾಲ ಮುಖ್ಯ ಮಂತ್ರಿಗಳ ಮನೆ ಮುಂದೆ ಧರಣಿ ಕುಳಿತಿದ್ದ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ಎಸ್ ಸೂರ್ಯನಾರಾಯಣರಾವ್ ರವರು ಮಧ್ಯ ಪ್ರವೇಶಿಸಿ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಆಡಳಿತವರ್ಗ ಹಾಗೂ ಕಾರ್ಮಿಕ ಸಂಘದ ಪ್ರತಿನಿಧಿಗಳ ನಡುವೆ ಸಭೆ ನಡೆಸಿ ತತ್‌ಕ್ಷಣ ಬೀಗ ಮುದ್ರೆ ತೆರೆವು ಮಾಡಿ ಎಲ್ಲ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು, ವ್ಯವಸ್ಥಾಪಕರನ್ನು ಬದಲಿಸುವ, ಉತ್ಪಾದನೆ ನಿಗದಿಪಡಿಸುವ ಇತರ ಬೇಡಿಕೆಗಳ ಬಗ್ಗೆ 15 ದಿನಗಳಲ್ಲಿ ಕಾರ್ಮಿಕ ಸಂಘದೊಂದಿಗೆ ಸಂಧಾನ ನಡೆಸಬೇಕು ಎಂಬ ಷರತ್ತುಗಳಿಗೆ ಒಪ್ಪಲಾಯಿತು. ಈ ಹೋರಾಟದ ಯಶಸ್ಸಿನಿಂದ ಕಾರ್ಮಿಕರಲ್ಲಿ ಸಿಐಟಿಯು ಬಗ್ಗೆ ಒಳ್ಳೆಭಾವನೆ ಮೂಡಿದ್ದು ನಂಜನಗೂಡಿನ ಪ್ರದೇಶದಲ್ಲಿ ಸಿಐಟಿಯು ಬೆಳವಣಿಗೆಗೆ ಬಹಳ ಉತ್ತೇಜನ ವಾಗಿದೆ ಎಂದು ಸಂಘದ ವಕ್ತಾರರು ತಿಳಿಸಿದ್ದಾರೆ.

ಮೇ 30 ಗ್ರಾಮ ಪಂಚಾಯತ್ ನೌಕರರಿಂದ ವಿಧಾನ ಸೌಧ ಚಲೋಪ್ರತಿಭಟನೆ

ಗ್ರಾಮ ಪಂಚಾಯಿತಿ ನೌಕರರಿಗೆ ಸರ್ಕಾರಿ ನೌಕರರ ವೇತನ ಮತ್ತು ಇತರ ಸವಲತ್ತುಗಳು ಸಿಗಬೇಕು, ಸೇವಾನಿಯಮ ತಯಾರಿಸಬೇಕು, ಕಾರ್ಯದರ್ಶಿ ಸ್ಥಾನಕ್ಕೆ ಈಗಿರುವ ನೌಕರರಿಗೆ ಶೇ ೫೦ ರಷ್ಟು ಮೀಸಲಿಡಬೇಕು, ಸರ್ಕಾರ ನಿರ್ಧರಿಸಿದ ಕನಿಷ್ಟ ವೇತನವಾದರೂ ಸದ್ಯ ನೌಕರರಿಗೆ ಸಿಗುವಂತಾಗಬೇಕು, ಪಂಚಾಯಿತಿಗಳಿಗೆ ಸರ್ಕಾರಿ ಅನುದಾನ ಹೆಚ್ಚಿಸಬೇಕೆಂಬ ಬೇಡಿಕೆಗಳ ಸಲುವಾಗಿ ಮೇ 30 ರಂದು ಬೆಂಗಳೂರಿನಲ್ಲಿ ವಿಧಾನ ಸೌಧದ ಮುಂದೆ ಮತಪ್ರದರ್ಶನ ನಡೆಸಲು ಕರ್ನಾಟಕ ರಾಜ್ಯ ಮಂಡಲ ಪಂಚಾತ್ ನೌಕರರ ಸಂಘ ನಿರ್ಧರಿಸಿದೆ.

ಕರ್ನಾಟಕ ರಾಜ್ಯದಲ್ಲಿರುವ 5500 ಗ್ರಾಮ ಪಂಚಾಯತಿಗಲ್ಲಿ ಕೆಲಸ ಮಾಡುತ್ತಿರುವ 25000 ನೌಕರರ ಪರಿಸ್ಥಿತಿ ಚಿಂತಾಜನಕವಾಗಿದೆ. ಕಳೆದ 10 ವರ್ಷಗಳಿಂದಲೂ ಮಂಡಲ್ ಪಂಚಾಯಿತಿಗಳಲ್ಲಿ ದುಡಿದು ಈಗ ಗ್ರಾಮ ಪಂಚಾಯಿತಿಗಳಲ್ಲಿ ದುಡಿಯುತ್ತಿರುವಾಗಲೂ ಸಮಾನವಾದ ಸಂಬಳ ನಿರಾಕರಿಸಲಾಗಿದೆ. ಸೇವಾ ನಿಯಮಗಳನ್ನು ರಚಿಸಿರುವುದಿಲ್ಲ, ಸೇವಾ ಪುಸ್ತಕಗಳನ್ನು ಕೊಡುತ್ತಿಲ್ಲ, ಇತರ ಖಾತೆಗಳ ನೌಕರರಿಗೆ ಲಭಿಸುವ ಯಾವ ಸೌಲಭ್ಯಗಳಿಲ್ಲದೆ ವಂಚಿತರಾಗಿದ್ದಾರೆ. ಈಗಲೂ ತಿಂಗಳಿಗೆ 50 ರಿಂದ ರೂ. 300 ತಿಂಗಳವೇತನ ಪಡೆಯುವವರಿದ್ದಾರೆ. ಶೇ. 80 ರಷ್ಟು ನೌಕರರಿಗೆ ಕಳೆದ 7-8 ತಿಂಗಳಿಂದ ಸಂಬಳವೇ ಸಿಕ್ಕಿಲ್ಲ.

ಬಹಳಷ್ಟು ಚಳುವಳಿಯ ನಂತರ ಗುಲ್ಬರ್ಗಾ ಜಿಲ್ಲೆಯ ನೌಕರರು ರೂ.960(ಬಿಲ್ ಕಲೆಕ್ಟರ್) ರೂ. 600 (ನೀರುಪೂರೈಸುವವರು)ರೂ. 500 (ಕಸ ಗುಡಿಸುವವರು, ಅಟೆಂಡರ್) ಅವರಿಗೆ ಸಂಬಳ ಪ್ರಕಟಿಸಿದ್ದರೂ ನೌಕರರಿಗೆ ಮಾತ್ರ ಇದರ ಲಾಭ ಸಿಗುತ್ತಿಲ್ಲ.

ಜನತಾದಳ ಸರಕಾರ ಅಧಿಕಾರಕ್ಕೆ ಬಂದ ನಂತರ ಸಂಘದ ಮುಖಂಡರು ಎಂ.ಪಿ. ಪ್ರಕಾಶ್ ರವರನ್ನು ಭೇಟಿ ಮಾಡಿ ಸಮಸ್ಯೆಗಳನ್ನು ವಿವರಿಸಿದ್ದಾರೆ, ಮಾತ್ರವಲ್ಲ 1993ರ ಜಿಲ್ಲಾ ಪಂಚಾಯತ್ ಕಾಯ್ದೆಯ ಪ್ರಕಾರ ಸರ್ಕಾರದಿಂದ ಬರುವ ಅನುದಾನದಿಂದ ನೀರು ಪೂರೈಸುವವರ, ಕಸ ಗುಡಿಸುವವರ ವೇತನ ಕೊಡಬಹುದೆಂದು ಹೇಳಿರುವುದರತ್ತ ಗಮನ ಸೆಳೆದಿದ್ದರು. ಆದರಿಂದಾಗಿ ಇನ್ನುಳಿದ ಇಬ್ಬರು ನೌಕರರ ವೇತನವನ್ನು ಪಂಚಾಯತಿ ಹಣದಿಂದ ವಿತರಣೆ ಮಾಡಲು ಕಷ್ಟವಾಗಲಾರದೆಂದೂ ವಿವರರಿಸಿದ್ದರು.

ಗಂಗಾವತಿ ತಾಲೂಕಿನಲ್ಲಿ ಕೃಷಿಕೂಲಿಕಾರರ ಘಟಕ ಉದ್ಘಾಟನೆ

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಗಂಗಾವತಿ ತಾಲೂಕಾ ಸಮಿತಿ ನೇತೃತ್ವದಲ್ಲಿ ಮೇ 19 ರಂದು ಶರಣ ಬಸವೇಶ್ವರ ಕ್ಯಾಂಪಿನಲ್ಲಿ ತಾಲೂಕಾ ಕಾರ್ಯದರ್ಶಿಯಾದ ಸಂಗಾಪುರ ಹುಲುಗಾಪ್ಪ ಇವರು ಕೂಲಿಕಾರರ ಘಟಕ ಉದ್ಘಾಟಿಸಿದರು. ಈ ಕ್ಯಾಂಪಿನ ಜನತೆಗೆ ಕನಿಷ್ಠ ನಾಗರಿಕ ಸೌಲಭ್ಯಗಳ, ಹಾಗೂ ಬದುಕಲಿಕ್ಕೆ ಬೇಕಾದ ಆಹರ ಧಾನ್ಯ ನ್ಯಾಯಬೆಲೆ ಅಂಗಡಿ ಮೂಲಕ ಸಮರ್ಪಕವಾಗಿ ದೊರೆಯದೆ, ಕನಿಷ್ಠ ಕೂಲಿಗಾಗಿ ಹಾಗು ಸರಕಾರಿ ಭೂಮಿ ಒತ್ತುವರಿ ಮಾಡಿದುದನ್ನು ಪಡೆಯುವುದಕ್ಕೆ ಸಂಘಟಿತರಾಗಿ ಮುಂದಿನ ದಿನಗಳಲ್ಲಿ ಹೋರಾಟ ಕೈಗೊಳ್ಳಬೇಕೆಂದು ಮತ್ತು ಭೂಮಾಲಿಕರು, ಹಾಗೂ ಸರಕಾರಿ ಅಧಿಕಾರಿ ವರ್ಗದವರ ಭ್ರಷ್ಟ ನೀತಿಯಿಂದ ಕೃಷಿ ಕೃಷಿಕೂಲಿಕಾರರಿಗೆ ಸರಕಾರದ ಸೌಲಭ್ಯಗಳು ದೊರಕದೆ ಕೇವಲ ಉಳ್ಳವರಿಗೆ ದೊರಕುವುದರಿಂದ ತಹ ಅಧಿಕಾರಿಗಳ, ಶ್ರೀಮಂತರ ವಿರುದ್ದ ಸಂಘಟಿತರಾಗಿ ಹೋರಾಟ ಮಾಡುವುದರಿಂದ ಮಾತ್ರವೇ ನಾವು ಪಡೆದು ಕೊಳ್ಳಲ್ಲಿಕ್ಕೆ ಸಾದ್ಯ ಎಂದು ಜಿಲ್ಲಾ ಸಹಸಂಚಾಲಕರಾದ ಕಾಂ. ಬಾಳಪ್ಪ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಅಧ್ಯಕ್ಷ ಕುಂಟೆಪ್ಪ, ಉಪಾಧ್ಯಕ್ಷರಾಗಿ ಬಾಜಪ್ಪ ಉಳ್ಳಾಗಡ್ಡಿ, ಕಾರ್ಯದರ್ಶಿಯಾಗಿ ಶರಣಪ್ಪ, ಸಹಕಾರ್ಯದರ್ಶಿಯಾಗಿ ಶಿವಪ್ಪ , ಖಜಾಂಚಿಯಾಗಿ ಸೀತಾರಾಮು ರವರನ್ನು ಆಯ್ಕೆ ಮಾಡಲಾಯಿತು.

ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಕೆ. ಯಮನಪ್ಪ, ಲಕ್ಷ್ಮಿ ತಿಮ್ಮಮ್ಮ ಹನುಮಂತಪ್ಪ ಭಟ್ಟರ್, ದುರುಗಪ್ಪ, ಹೊಳಿಯಲ್ಲ ಇವರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಎ.ಹುಲುಗಪ್ಪ ತಿಳಿಸಿದ್ದಾರೆ.

ಯಲಹಂಕ ಉಪಚುನಾವಣೆ ಜನತಾದಳಕ್ಕೆ ಸಿ.ಪಿ.ಐ(ಎಂ) ಬೆಂಬಲ

ಮೇ 27 ರಂದು ನಡೆಯುವ ಯಲಹಂಕ ವಿಧಾನ ಸಭಾ ಕ್ಷೇತ್ರದ ಚುನಾನವಣೆಯಲ್ಲಿ ಜನತಾದಳವನ್ನು ಬೆಂಬಲಿಸಲು ಸಿ.ಪಿ.ಐ(ಎಂ) ನಿರ್ಧರಿಸಿದೆ.ಜನತಾದಳ ಅಧಿಕಾರಕ್ಕೆ ಬಂದ ನಂತರ ಮೊದಲ ಉಪಚುನಾವಣೆ ನಡೆಯುತ್ತಿದೆ. ನಮ್ಮರಾಜ್ಯದಲ್ಲಿ ವಿಧಾನ ಸಭಾ ಚುನಾವಣೆ ನಡೆದಂದಿನಿಂದ ದೇಶದ ರಾಜಕೀಯದಲ್ಲಿ ತೀವ್ರ ಬದಲಾವಣೆಗಳಾಗುತ್ತಿದೆ. ಕಾಂಗ್ರೆಸ್ ಇಬ್ಭಾಗವಾಗಿದೆ. ಮಹಾರಾಷ್ಟ್ರ ಗುಜರಾತ್‌ಗಳಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದಿದೆ, ಬಿಹಾರದಲ್ಲಿ ಜನತಾದಳ ಮತ್ತೆ ಅಧಿಕಾರಕ್ಕೆ ಬಂದಿದೆ. ದೇಶದಲ್ಲಿ ಹಠಾತ್ತನೆ ಲೋಕ ಸಭಾ ಚುನಾವಣೆಗಳು ನಡೆಯಬಹುದು ಎನ್ನುವ ಪರಿಸ್ಥಿತಿ ಇದೆ.

ಈ ಹಿನ್ನೆಲೆಯಲ್ಲಿ ಕಾಂಗ್ರೆ, ಬಿ.ಜೆ.ಪಿಗಳು ಈ ಸ್ಥಾನವನ್ನು ಗೆದ್ದುಕೊಳ್ಳಲು ಅಬ್ಬರದ ಅಪಪ್ರಚಾರ ನಡೆಸುತ್ತಿವೆ. ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದೊಂದಿಗೆ ರಾಜಿ, ಭ್ರಷ್ಟಚಾರದ ಕೂಪದಲ್ಲಿ ಮುಳುಗಿ ದೇಶದ ಸಾಮಾನ್ಯ ಜನತೆಯನ್ನು ಬಡತನ, ನಿರುದ್ಯೋಗ, ಪ್ರಾಣಹಾನಿಗಳ ಸರಮಾಲೆಗೆ ತಳ್ಳಿರುವ ಕಾಂಗ್ರೆಯನ್ನು ಸೋಲಿಸಲು ಹಾಗೂ ಬೆಂಗಳೂರನ್ನು ಹಾಗೂ ಇಡೀ ದೇಶವನ್ನು ಕೋಮು ಹಿಂಸೆಯಲ್ಲಿ ಮುಳುಗಿಸಿದ ಬಿ.ಜೆ.ಪಿಯನ್ನು ಸೋಲಿಸಲು ಜಾತ್ಯಾತೀತ ಪಕ್ಷಗಳ ಹಾಗೂ ಎಡ ಶಕ್ತಿಗಳ ಪರ್ಯಾಯವನ್ನು ಮುಂದಿಡಲು ಇತ್ತೀಚೆಗೆ ನಡೆದ ಸಿ.ಪಿ.ಐ(ಎಂ) 15ನೇ ರಾಷ್ಟ್ರೀಯ ಮಹಾಧಿವೇಶನ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಸಮಿತಿ ಈ ಕ್ಷೇತ್ರದಲ್ಲಿ ಜನತಾದಳಕ್ಕೆ ಬೆಂಬಲ ಕೊಡಲು ತೀರ್ಮಾನಿಸಿದೆ ಎಂದು ರಾಜ್ಯ ಸಮಿತಿ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಯಲಹಂಕ ಕ್ಷೇತ್ರದ ಮತದಾರರು ಜನತಾ ದಳದ ಅಭ್ಯರ್ಥಿಗೆ ಮತವಿತ್ತು ಗೆಲ್ಲಿಸಬೇಕೆಂದು ಎಲ್ಲಾ ಕಾರ್ಯಕರ್ತರೂ ಸ್ವತಂತ್ರವಾಗಿ ಪ್ರಚಾರ ಮಾಡಿ ಜನತಾ ದಳದ ಅಭ್ಯರ್ಥಿಯನ್ನು ಗೆಲ್ಲಿಸಲು ಪ್ರಯತ್ನಿಸಬೇಕೆಂದು ಸಿ.ಪಿ.ಐ(ಎಂ)ನ ರಾಜ್ಯ ಸಮಿತಿ ಕರೆ ನೀಡಿದೆ.

"ಅಪ್ಪಸ್ವಾಮಿ ನಿಧನಕ್ಕೆ ಶೋಕ"

ಕಾಂ. ಅಪ್ಪಸ್ವಾಮಿರೆಡ್ಡಿಯವರ ನಿಧನಕ್ಕೆ DYFI ಮತ್ತು SFI ನ ಕರ್ನಾಟಕ ರಾಜ್ಯ ಸಮಿತಿಗಳು ತೀವ್ರ ಶೋಕವನ್ನ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಿವೆ.

ಸಿಐಟಿಯುಗೆ 25 ವರ್ಷ

ಸಿಐಟಿಯು ಈಗ ಭಾರತದ ಕಾರ್ಮಿಕ ಆಂದೋಲನದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಸಂಘಟನೆ. ಇದೇ ಮೇ 30 ರಂದು ಸಿಐಟಿಯು ತನ್ನ ಸ್ಥಾಪನೆಯ ಬೆಳ್ಳಿ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಈ ವಿಶೇಷ ಲೇಖನ ಮಾಲೆಯ ಮೊದಲ ಲೇಖನವನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಸಿಐಟಿಯು ಸ್ಥಾಪನೆಯ ಹಿನ್ನೆಲೆಯನ್ನು ನೀಡಿದ ಆ ಲೇಖನದಲ್ಲಿ ಸಿಐಟಿಯು ರಾಷ್ಟ್ರ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಸಿಐಟಿಯುವಿನ ಇತಿಹಾಸ ಸಿಐಟಿಯು ಘೋಷಣೆಯಾದ 'ಐಕ್ಯತೆ ಮತ್ತು ಹೋರಾಟ'ದ ದಾರಿಯಲ್ಲಿ ಭಾರತೀಯ ಕಾರ್ಮಿಕ ಆಂದೋಲನದ ಮುನ್ನಡೆಯ ಇತಿಹಾಸ ಕೂಡಾ ಎಂದಿದ್ದರು. ಈ ಮುನ್ನಡೆಯ ಇತಿಹಾಸದ ರೂಪರೇಷೆಗಳನ್ನು ಪ್ರಸ್ತುತ ಲೇಖನದಲ್ಲಿ ಅವರು ನೀಡಿದ್ದಾರೆ.

"ಐಕ್ಯತೆ ಮತ್ತು ಹೋರಾಟ"ದ ಗುರಿಸಾಧನೆಯಲ್ಲಿ.....

-ವಿ.ಜೆ.ಕೆ. ನಾಯರ್

ಸಿಐಟಿಯು ಸ್ಥಾಪನೆಗೊಂಡು ಇಪ್ಪತ್ತೈದು ವರ್ಷಗಳಾಗಿವೆ. ನಮ್ಮ ದೇಶದ ಕಾರ್ಮಿಕ ವರ್ಗದ ಆಂದೋಲನದಲ್ಲೂ, ವಿದೇಶಗಳಲ್ಲೂ ಸಿಐಟಿಯು ಇಂದು ಒಂದು ಹೆಮ್ಮೆಯ ಸ್ಥಾನಗಳಿಸಿದೆ. ಅದು ಐಕ್ಯ ಹೋರಾಟಗಳ ಮುಂಚೂಣಿಯಲ್ಲಿದೆ. ನಿಜ, ಭಾರತದಲ್ಲಿ ಕಾರ್ಮಿಕ ಸಂಘಗಳ ಒಂದು ಮಹಾಒಕ್ಕೂಟದ ಗುರಿ ಸಾಧಿಸಲು ಇನ್ನೂ ಆಗಿಲ್ಲ, ಆದರೂ 1994ರಲ್ಲಿ **'ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ'** ಹಾಗೂ ಅದಕ್ಕೆ ಮೊದಲು 1991ರಲ್ಲಿ **'ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ'** ರಚನೆ ಮೂಲಕ ಕಾರ್ಯಾಚರಣೆಯಲ್ಲಿ ಐಕ್ಯತೆಯನ್ನು ಕಟ್ಟಲು ಪ್ರಯತ್ನಿಸಿದೆ ಹಾಗೂ ಅದರಲ್ಲಿ ಯಶಸ್ವಿಯೂ ಆಗಿದೆ. ಇದರ ಮೊದಲು 1981ರಲ್ಲಿ **"ರಾಷ್ಟ್ರೀಯ ಪ್ರಚಾರ ಸಮಿತಿ"** ರೂಪಿಸಿದ್ದು ಅದು ಒಂದು ದಶಕದ ಕಾಲ ಕೆಲಸ ಮಾಡಿತು.

ಈ ಮಾರ್ಗದಲ್ಲಿ ಮುನ್ನಡೆಯಲು ಸಾಧ್ಯವಾಗಿದ್ದು 1977ರಲ್ಲಿ ಸಾರ್ವತ್ರಿಕ ಚುನಾವಣೆಗಳಲ್ಲಿ ಸರ್ವಾಧಿಕಾರಶಾಹೀ ಶಕ್ತಿಗಳ ಸೋಲಿನ ನಂತರ ಹಾಗೂ ಡಾಂಗೇವಾದಿಗಳ ವರ್ಗ ಶಾಮೀಲಿನ ಮಾರ್ಗ ವಿಫಲಗೊಂಡ ನಂತರವೇ. ಸಿಐಟಿಯುನ 1979ರ ಮದ್ರಾಸ್ ಸಮ್ಮೇಳನ ಭಾರತೀಯ ಕಾರ್ಮಿಕ ಸಂಘಗಳ ಮಹಾ ಒಕ್ಕೂಟ ರಚಿಸಬೇಕೆಂದು ನೀಡಿದ ಕರೆ ಕೂಡಾ ವರ್ಗ ಶಾಮೀಲಿನ ಮಾರ್ಗ ಸೋತು ಹೋದ ನಂತರ ಬಂದಿರುವುದು ಕೇವಲ ಆಕಸ್ಮಿಕವಲ್ಲ. ಅದೇ ರೀತಿ ರಾಷ್ಟ್ರೀಯ ಪ್ರಚಾರ ಸಮಿತಿ (1981), ಪ್ರಾಯೋಜಕ ಸಮಿತಿ (1991) ಹಾಗೂ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ (1994) ಐಕ್ಯತೆ ಮತ್ತು ಹೋರಾಟದ ಸಿಐಟಿಯು ಕರೆಯಿಲ್ಲದೆ, ವಿಶೇಷವಾಗಿ ಮಹಾ ಒಕ್ಕೂಟ ರಚಿಸಬೇಕೆಂಬ ಕರೆಯನ್ನು ನಂತರ ಪರಿಪೂರ್ಣಗೊಳಿಸದೆ ಸಾಧ್ಯವಾಗುತ್ತಿರಲಿಲ್ಲ. ಈಗ ನಾವು ತುರ್ತು ಪರಿಸ್ಥಿತಿಯ ಹಿಂದಿನ ಅವಧಿಯನ್ನು ಪರಿಶೀಲಿಸೋಣ. ನಂತರ ತುರ್ತು ಪರಿಸ್ಥಿತಿಯ ನಂತರ ಅವಧಿಗೆ ಬರೋಣ.

1975ರ ಮೊದಲು

ಸಿಐಟಿಯು ಸ್ಥಾಪನೆಯಾದ ಕೂಡಲೇ ಒಂದು ಐಕ್ಯ ವೇದಿಕೆ ರಚಿಸುವ ಪ್ರಯತ್ನಗಳು ನಡೆದವು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿ 1971ರಲ್ಲಿ ಒಂದು ಕಾರ್ಯಾಚರಣೆ ಗುಂಪು ರಚಿಸಲು ಮುತುವರ್ಜಿ ವಹಿಸಿದರು. ದಿಲ್ಲಿಯಲ್ಲಿ ಒಂದು ಜಂಟಿ ಸಮಾವೇಶದ ನಂತರ ಪಿ. ರಾಮಮೂರ್ತಿ (ಸಿಐಟಿಯು), ಸತೀಶ್ ಲೂಂಬಾ (ಎ.ಐ.ಟಿ.ಯು.ಸಿ.) ಹಾಗೂ ಮಹೇಶ್ ದೇಸಾಯಿ (ಹೆಚ್.ಎಂ.ಎಸ್.) ಯವರಿದ್ದ ಒಂದು ಸಮಿತಿ ರಚಿಸಲಾಯಿತು. ಅವರು ಸಭೆ ಸೇರಿ ಬೆಲೆಯೇರಿಕೆ, ನಿರುದ್ಯೋಗ ಇತ್ಯಾದಿ ವಿರುದ್ಧ ಒಂದು ಕಾರ್ಯಾಚರಣೆಗೆ ಮಾರ್ಗದರ್ಶನ ನೀಡಬೇಕಾಗಿತ್ತು. ಕಾಂ. ಪಿ. ರಾಮಮೂರ್ತಿ ಮತ್ತೆ-ಮತ್ತೆ ಪ್ರಯತ್ನಿದರೂ ಈ ಸಮಿತಿ ಕೆಲಸ ಮಾಡಲಿಲ್ಲ ಮತ್ತು ಐಕ್ಯ ಕಾರ್ಯಾಚರಣೆಯೆಂಬುದು ನಡೆಯಲಿಲ್ಲ.


ಎ.ಐ.ಟಿ.ಯು.ಸಿ. ಮತ್ತು ಹೆಚ್.ಎಂ.ಎಸ್.ನ ನಿಜವಾದ ಆಶಯ ನಂತರ 1972ರಲ್ಲಿ ಬಯಲಿಗೆ ಬಂತು, ಆಗಿನ ಭಾರತ ಸರಕಾರದ ಕಾರ್ಮಿಕ ಮಂತ್ರಿ ಖಾಡಿಲ್ಕರ್ ಮುವರ್ಜಿಯಿಂದ ಎಐಟಿಯುಸಿ ಹಾಗೂ ಹೆಚ್.ಎಂ.ಎಸ್. ಇಂಟಕ್ ಜತೆ ಸೇರಿ ಎನ್.ಸಿ.ಟಿ.ಯು. (National Council of Trade Union) ಎಂಬುದನ್ನು ರಚಿಸಿರುವುದಾಗಿ ತಿಳಿಯಪಡಿಸಿದರು. ಇದನ್ನು ಕಾರ್ಮಿಕ ಸಂಘಗಳ ಒಂದು ಸಮಾವೇಶ ನಡೆಸಿ ಅದರಲ್ಲಿ ಸಾರಿರಲಿಲ್ಲ. ಈ ಸಂಘಟನೆಯ ಹೆಸರಲ್ಲಿ 'ಕೌನ್ಸಿಲ್' ಅಥವಾ ಮಂಡಳಿಯೆಂದಿದ್ದರೂ ಅಲ್ಲಿ ಮಂಡಳಿಯೇನೂ ಇರಲಿಲ್ಲ. ಆ ಮೂರು ಸಂಘಟನೆಗಳ ನಾಯಕರ ಒಂದು 'ಸಿಂಡಿಕೇಟ್' ಅಥವಾ ಕೂಟ ಮಾತ್ರವಿತ್ತು. ಕಾರ್ಮಿಕ ವರ್ಗದ ಪ್ರಯೋಜನಕ್ಕೆ ಬರುವ ಒಂದು ಕಾರ್ಯಕ್ರಮವೂ ಇರಲಿಲ್ಲ. ಅವರ ದೃಷ್ಟಿಯಲ್ಲಿ 'ಪ್ರಗತಿಪರ ವರ್ಗ'ವಾದ ರಾಷ್ಟ್ರೀಯ ಬಂಡವಾಳಶಾಹಿ ವರ್ಗದ 'ಪ್ರಗತಿಪರ ಪ್ರತಿನಿಧಿ"ಯಾದ ಇಂದಿರಾಗಾಂಧಿಯವರ ಕೈಗಳನ್ನು ಬಲಪಡಿಸುವುದು ಅವರ ನಿಜ ಉದ್ದೇಶವಾಗಿತ್ತು. ಜನಗಳ ಮತ್ತು ಕಾರ್ಮಿಕ ವರ್ಗದ ಯಾವುದೇ ಸಮಸ್ಯೆಯನ್ನು ಪರಿಹರಿಸುವುದಕ್ಕಿಂತ 'ರಾಷ್ಟ್ರೀಯ ಬಂಡವಾಳಶಾಹಿ' ವರ್ಗ 'ಪ್ರಗತಿಪರ' ಎಂದು ಪ್ರಮಾಣ ಪತ್ರ ನೀಡುವುದು ಅದರ ಉದ್ದೇಶವಾಗಿತ್ತು.

ಸರ್ವಾಧಿಕಾರಿಶಾಹಿಗೆ ಪ್ರತಿರೋಧ

ಆದ್ದರಿಂದ ಸಿಟಿಯುಗೆ ತಾನೇ ಒಂದು ಅಖಿಲ ಭಾರತ ಸಮಾವೇಶವನ್ನು ಕರೆಯುವುದಲ್ಲದೆ ಬೇರೆ ದಾರಿ ಇರಲಿಲ್ಲ. ಹೆಚ್.ಎಂ.ಪಿ., ಎ.ಐ.ಐ.ಇ.ಎ., ಎ.ಐ.ಆರ್.ಎಫ್., ಮತ್ತಿತರ ಹಲವು ವಿವಿಧ ಉದ್ದಿಮೆಗಳು ಮಟ್ಟದ ಒಕ್ಕೂಟಗಳ ಭಾಗವಹಿಸಿದ ಈ ಸಮಾವೇಶ ಜಾರ್ಜ್ ಫರ್ನಾಂಡೀಸ್ ಅಧ್ಯಕ್ಷತೆಯಲ್ಲಿ ಯು.ಸಿ.ಟಿ.ಯು. (ಕಾರ್ಮಿಕ ಸಂಘಗಳ ಸಂಯುಕ್ತ ಮಂಡಳಿ) ಎಂಬ ಸಂಘಟನೆಯನ್ನು ರಚಿಸಿತು.

ಇದು ಮೊತ್ತ ಮೊದಲ ಬಾರಿಗೆ ಸರಕಾರೀ ನೌಕರರೂ ಸೇರಿದಂತೆ 'ಎಲ್ಲರಿಗೂ ಬೋನಸ್' ಎಂಬ ಪರಿಕಲ್ಪನೆಯನ್ನೆತ್ತಿತು. 1973ರ ಐತಿಹಾಸಿಕ ರೈಲ್ವೇ ಮುಷ್ಕರದಲ್ಲಿ ಯು.ಸಿ.ಟಿ.ಯು. ಒಂದು ಪ್ರಮುಖ ಪಾತ್ರ ವಹಿಸಿತು. ಇಂದಿರಾ ಸರಕಾರದ ವೇತನ ಸ್ತಂಭನ ನೀತಿಯ ವಿ... ಹೋರಾಟ ನಡೆಸಿತು. ಜೆ.ಪಿ. ಆಂದೋ... ಆಂತರಿಕ ತುರ್ತು ಪರಿಸ್ಥಿತಿ ಇತ್ಯಾದಿಗಳ ಮೊ... ಇಂದಿರಾ ಗಾಂಧಿಯವರ ಸರ್ವಾಧಿಕಾ... ಆಳ್ವಿಕೆಗೆ ಪ್ರತಿರೋಧ ಒಡ್ಡಿದ ಹೋರಾಟ...

ತುರ್ತು ಪರಿಸ್ಥಿತಿಯ ಮೊದಲಿನ... ಯಲ್ಲಿ ಇಂದಿರಾ ಸರ್ಕಾರ 'ಹೆಚ್ಚು ವೇತನದ ದ್ವೀಪಗಳು' ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿತು. ಬ್ಯಾಂಕ್, ವಿಮೆ, ಇತ್ಯಾದಿ ವಲಯಗಳ ನೌಕರರ ಸಮೂಹ ಕಮ್ಮಿ ಸಂಬಳ ಪಡೆಯುವವರ ನಡುವೆ 'ಹೆಚ್ಚು ವೇತನದ ದ್ವೀಪಗಳು' ಇಂತಹ ದ್ವೀಪಗಳನ್ನು ಇಲ್ಲದಂತೆ ಮಾಡಬೇಕು ಎಂಬುದು ಅವರ ಇಚ್ಛೆಯಾಗಿತ್ತು. ಎಲ್.ಐ.ಸಿ. ಯಲ್ಲಿ ನಡೆದ ಒಂದು ವೇತನ ಇತ್ಯರ್ಥವನ್ನು ಒಂದು ಶಾಸನ ತಂದು ರದ್ದುಗೊಳಿಸಲಾಯಿತು. ಆದರೆ ಇದರ ಬೆನ್ನ ಹಿಂದೆಯೇ ವೇತನ ಸ್ತಂಭನದ ಅವರ ನೀತಿ ಹೊರಬಂದಾಗ 'ಹೆಚ್ಚು ವೇತನದ ದ್ವೀಪ' ಗಳೆಂಬ ಅವರ



ಸಂಸದೀಯ ವ್ಯವಸ್ಥೆಯಲ್ಲಿ 'ಬದಲಾವಣೆ' ತರುವ ಕೂಗಿನ ಹಿಂದಿರುವದೇನು?

ಅಸ್ಥಿರತೆ ಆಳುವ ವರ್ಗಗಳ ನೀತಿಯ ಫಲ

ಸಂಸದೀಯ ವ್ಯವಸ್ಥೆಯ ಬದಲಿಸುವ ಹಲವು ಪ್ರಸ್ತಾಪಗಳು ಈಗ ಬರುತ್ತಿದೆ. ಇವು ಏಕೆ ಬರುತ್ತಿವೆ? ಕಾಂಗ್ರೆಸ್, ಬಿಜೆಪಿ ಮುಖಂಡರುಗಳಿಂದಲೇ ಏಕೆ ಬರುತ್ತಿವೆ? ರಾಜಕೀಯ "ಅಸ್ಥಿರತೆ"ಯ ಬಗ್ಗೆ ಆತಂಕ ವ್ಯಕ್ತಪಡಿಸುವ ಈ ಜನ ಚುನಾವಣಾ ಸುಧಾರಣೆಗಳ ಬಗ್ಗೆ ಬಾಯಿಮುಚ್ಚಿಕೊಂಡಿರುವರೇಕೆ? ಈ ಪ್ರಸ್ತಾವಗಳನ್ನು ಪರಿಶೀಲಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರು ಕಾಂ. ಪ್ರಕಾಶ್ ಕಾರಟ್ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾರೆ. -ಕಾಂಗ್ರೆಸ್ ಮುಖ್ಯವಾಗಿ ತಮ್ಮ 'ಹೊಸ ಆರ್ಥಿಕ ನೀತಿ'ಗಳಿಗೆ ಎಷ್ಟೇ ತಿಪ್ಪರಲಾಗ ಹಾಕಿದರೂ ಜನಬೆಂಬಲ ಪಡೆಯಲು ಸಾಧ್ಯವಾಗದಿರುವಂತೆ ಈ ಪ್ರಸ್ತಾವಗಳಿಗೂ ಜನಬೆಂಬಲ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಕಾಂ. ಕಾರಟ್ ಹೇಳುತ್ತಾರೆ.

-ಪ್ರಕಾಶ್ ಕಾರಟ್

ಸರಕಾರದ ಸಂಸದೀಯ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕೆಂಬ ಬಲವಾದ ಅಭಿಪ್ರಾಯವನ್ನು ಪ್ರಭಾವಶಾಲಿ ವಲಯಗಳು ಮಂಡಿಸುತ್ತಿವೆ. ಲೋಕಸಭೆಯ ಸ್ಪೀಕರ್ ಶಿವರಾಜ್ ಪಾಟೀಲ್ ಇದೀಗ ಈ ಸಾಲಿಗೆ ಸೇರಿದ್ದಾರೆ. ಈ ಹಿಂದೆ ಬಿ.ಜೆ.ಪಿ. ಅಧ್ಯಕ್ಷೀಯ ವ್ಯವಸ್ಥೆ ಜಾರಿಗೆ ಬರಬೇಕು ಎಂದು ಪ್ರತಿಪಾದಿಸಿತ್ತು ಹಾಗೂ ಸಂವಿಧಾನದಲ್ಲಿ ಕೆಲವು ಬದಲಾವಣೆಗಳು ಆಗಬೇಕು ಎಂದಿತ್ತು.

ಸರಕಾರದ ಪದ್ಧತಿಯನ್ನು ಬದಲಾಯಿಸಬೇಕೆಂಬ ಬೇಡಿಕೆಗೆ ಪುನಃ ಏಕೆ ಚಾಲನೆ ಸಿಕ್ಕಿದೆ? ಈ ತುರ್ತು ಹಾಗೂ ಹತಾಶೆ ಏಕೆ? 1996 ರ ಸಾರ್ವತ್ರಿಕ ಚುನಾವಣೆಗಳಿಗೆ ಮುಂಚೆಯೇ ಈ ಬದಲಾವಣೆಗಳನ್ನು ಮಾಡಬೇಕು ಎಂದು ಚರ್ಚೆಗೆ ಮುಂದಿಟ್ಟಿರುವ ಪ್ರಸ್ತಾವನೆಗಳ ಟಿಪ್ಪಣಿಯಲ್ಲಿ ಸ್ಪೀಕರ್ ಒತ್ತಾಯಿಸಿದ್ದಾರೆ.

ಏಕೀ ಗಡಿಬಿಡಿ, ಆತಂಕ?

ಆಡಳಿತದ ಮೇಲೆ ಕಾಂಗ್ರೆಸ್ ನ ಏಕಸ್ವಾಮ್ಯ ಕಡಿಮೆಯಾಗಿರುವುದು ಹಾಗೂ ಅದಕ್ಕೆ ಬಹುಮತ ಇಲ್ಲದಿರುವುದರಿಂದ ಈ ರೀತಿಯ ಗಡಿಬಿಡಿ ಮಾಡಲಾಗುತ್ತಿದೆ ಎನ್ನುವುದು ಸ್ಪಷ್ಟ.

ಯಾವುದೇ ಬಂಡವಾಳಶಾಹಿ-ಭೂಮಾಲಿಕ ಪಕ್ಷ ಸತತವಾಗಿ ಮೂರನೇ ಬಾರಿಗೆ ಬಹುಮತವನ್ನು ಗಳಿಸಲು ಸಾಧ್ಯವಿಲ್ಲದಂಥ ಸನ್ನಿವೇಶ ಇದೆ. ಹಾಗಾಗಿಯೇ ಇಡೀ ವ್ಯವಸ್ಥೆಯಲ್ಲಿ ನಡುಕ ಹುಟ್ಟಿದೆ. ಏನಾದರೂ ತಂತ್ರ ಹೂಡಿ ತನ್ನ ಹಿತಕ್ಕೆ ಅನುಗುಣವಾದ ಸರಕಾರವನ್ನು ರಚಿಸುವ ಆತ್ಮವಿಶ್ವಾಸ ಆಳುವ ವರ್ಗದ ಒಂದು ವಿಭಾಗದಲ್ಲಿ ಹೊರಟು ಹೋಗಿರುವುದು ಯಾಕೆ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಆಳವಾದ ಪರಿಶೀಲನೆ ನಡೆಸಬೇಕಾಗುತ್ತದೆ.

ರಾಜಕೀಯ ವ್ಯವಸ್ಥೆಯನ್ನು ಕಾಡುವ ಅಸ್ಥಿರತೆ ಎಂಬತ್ತರ ದಶಕದ ಕೊನೆ ಕೊನೆಯಲ್ಲಿ ಕೇಂದ್ರ ಸರಕಾರಕ್ಕೂ ವಿಸ್ತರಿಸಿತು. ಹಾಗೂ ಅದು ಈಗ ಕಾಯಂ ಲಕ್ಷಣವಾಗಿ ಬಿಟ್ಟಿದೆ. ವ್ಯವಸ್ಥೆಗೆ 'ಸ್ಥಿರತೆ' ತರಲು ಆಳುವ ವರ್ಗಗಳು ಪ್ರಯತ್ನಿಸುತ್ತಿದ್ದರೂ ಅಸ್ಥಿರತೆಯ ಪೀಡೆ ಕಾಡಿಸುತ್ತಲೇ ಇದೆ. ವಾಸ್ತವವಾಗಿ ಇದು ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟನ್ನು ಪರಿಹರಿಸಲು ಸೂಚಿಸಲಾಗುತ್ತಿರುವ ಸೂತ್ರಗಳ ವೈಫಲ್ಯವೇ ಆಗಿದೆ.

1980ರ ದಶಕದ ಮಧ್ಯಭಾಗದಲ್ಲಿ ರಾಜೀವ್ ಗಾಂಧಿ ಆರಂಭಿಸಿ, 1991 ರಿಂದ ನರಸಿಂಹ ರಾವ್ ಸರಕಾರ ಭಾರೀ ಒತ್ತು ಕೊಟ್ಟಿರುವ ಉದಾರೀಕರಣ ನೀತಿ ರಾಜಕೀಯ ಅಸ್ಥಿರತೆಯನ್ನು ಹೆಚ್ಚಿಸಿದೆಯೇ ಹೊರತು ಕಡಿಮೆ ಮಾಡಿಲ್ಲ. 1996ರ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಹೀನಾಯ ಸೋಲನ್ನು ಅನುಭವಿಸದಿದ್ದರೂ 1989 ಮತ್ತು 1991ರ ಫಲಿತಾಂಶವೇ ಪುನರಾವರ್ತನೆ ಆಗುವುದಂತೂ ಖಂಡಿತ. ಅಂದರೆ ಅದು ಬಹುಮತವನ್ನು ಗಳಿಸುವುದಿಲ್ಲ; ಬಂಡವಾಲಶಾಹಿ-ಭೂಮಾಲಕ ವರ್ಗಗಳ ಪ್ರಮುಖ ಪ್ರತಿನಿಧಿಯಾದ ಕಾಂಗ್ರೆಸ್ ಇಂಥ ಪರಿಸ್ಥಿತಿಗೆ ಬಂದು ಮುಟ್ಟಿದೆ. ಆರ್ಥಿಕ ನೀತಿಗಳ ಬಗ್ಗೆ ಭಾರೀ 'ಒಮ್ಮತ' ರೂಪಿಸುವ ಬಗ್ಗೆ ಭಾರೀ ಭಾರೀ ಕರೆ ನೀಡಿದ್ದರೂ ರಾವ್-ಮನಮೋಹನ ಸಿಂಗ್ ರ ನೀತಿಗಳಿಗೆ ಜನರು ರಾಜಕೀಯ ಅನುಮೋದನೆನ್ನು ನೀಡದಿರುವುದೇ ಇದಕ್ಕೆ ಕಾರಣ.

ಶ್ರೀಮಂತರ ಹಿತ ರಕ್ಷಣೆಗಾಗಿ

ಜನತೆ ಚುನಾವಣೆ ಮೂಲಕ ನೀಡಿದ ತೀರ್ಪನ್ನು ಉಲ್ಲಂಘಿಸಿಯಾದರೂ ಬಂಡವಾಳಶಾಹಿಗಳು ಮತ್ತು ಭೂಮಾಲಿಕರಿಗೆ ಲಾಭದಾಯಕವಾಗಿರುವ ಆರ್ಥಿಕ ಸುಧಾರಣೆ ಕ್ರಮಗಳನ್ನು ಉಳಿಸಿಕೊಂಡು ಹೋಗುವ ಉದ್ದೇಶದಿಂದ ಈಗ ಇಂಥ ಯುಕ್ತಿಗಳನ್ನು ಹೂಡಲಾಗುತ್ತಿವೆ.

ಅಧ್ಯಕ್ಷೀಯ ಪದ್ಧತಿಯ ಕಟ್ಟಾ ಪ್ರತಿಪಾದಕರಾಗಿರುವ ಕಾಂಗ್ರೆಸ್ ಮುಖಂಡ ವಸಂತ ಸಾಠೆ ಇದರ ಅಗತ್ಯವನ್ನು ವಿವರಿಸುವುದು ಹೀಗೆ -"ಆರ್ಥಿಕ ಬೆಳವಣಿಗೆ ಮುಂದುವರಿಯಬೇಕಾದರೆ ರಾಜಕೀಯ ಸ್ಥಿರತೆ ಅಗತ್ಯವಾದುದು ಎಂಬುವುದು ಎಲ್ಲಾ ಅಂತಗಳಿದಂಲೂ ಸಾಬೀತಾಗಿದೆ. ರಾಷ್ಟ್ರಮಟ್ಟದಲ್ಲಿ ಸರಕಾರದ ರಾಜಕೀಯ ಸ್ಥಿರತೆ ಅಪಾಯಕ್ಕೆ ಸಿಲುಕಿದರೆ ಜಗತ್ತಿನಾದ್ಯಂತ ಪ್ರಸಂಸೆಗೆ ಒಳಗಾದ ಹಾಗೂ ವಿದೇಶಿ ಬಂಡವಾಳವನ್ನು ಆಕರ್ಷಿಸುತ್ತಿರುವ ಉದಾರೀಕರಣಕ್ಕೆ ತೀವ್ರ ಹಿನ್ನಡೆ ಉಂಟಾಗುತ್ತದೆ. ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬೇಕೆಂಬ ತುರ್ತು ಭಾವನೆ ಕಂಡು ಬಂದಿದೆ."

ಸರ್ವಾಧಿಕಾರ ಪ್ರಶಸ್ತ ಐ.ಎಂ.ಎಫ್ -ವಿಶ್ವ ಬ್ಯಾಂಕ್‌ಗಳ 'ಮೂಲ ಹೊಂದಾಣಿಕೆ ಕಾರ್ಯಕ್ರಮ'ಗಳು ರಾಜಕೀಯ ಸರ್ವಾಧಿಕಾರವುಳ್ಳ ದೇಶಗಳಲ್ಲಿ ಉತ್ತಮವಾಗಿ ಜಾರಿಗೊಳ್ಳುತ್ತಿದೆ ಎಂಬುವುದು ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಬಹುತೇಕ ಅಭಿವೃದ್ಧಿ ಹೊಂದುತಿರುವ ದೇಶಗಳ ಅನುಭವವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಮುಕ್ತ ಮಾರುಕಟ್ಟೆಗೂ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಕೂಡಿ ಬರುವುದಿಲ್ಲ. ಸರ್ವಾಧಿಕಾರಿ ವ್ಯವಸ್ಥೆಯೇ ಪ್ರಶಸ್ತವಾದುದು.

ಬಿ.ಜೆ.ಪಿ.ಯ ಬೆಂಬಲವೇಕೆ?

ಸಂವಿಧಾನ ಬದಲಾವಣೆಯ ಪ್ರಸ್ತಾವಗಳಿಗೆ ಬಿ.ಜೆ.ಪಿ ಬೆಂಬಲಿಸುತ್ತಿರುವುದು ಸಾಕೆಂಬುದು ಇದರಿಂದ ಗೊತ್ತಾಗುತ್ತದೆ. ಈ ಉದ್ದೇಶಕ್ಕಾಗಿ ತಜ್ಞರ ಆಯೋಗವೊಂದನ್ನು ರಚಿಸಬೇಕೆಂದು ಎಲ್.ಕೆ. ಅಡ್ವಾನಿ ಸಲಹೆ ನೀಡಿದ್ದಾರೆ.

ಕಾಂಗ್ರೆಸ್ ಸೋತರೆ ಮುಖ್ಯ ಲಾಭವಾಗುವುದು ತನಗೇ ಎಂದು ಹೇಳಿಕೊಳ್ಳುವ ಬಿ.ಜೆ.ಪಿ ಸಂಸದೀಯ ವ್ಯವಸ್ಥೆಯನ್ನು ಬದಲಾಯಿಸಲು ಬಯಸುವುದು ಯಾಕಾಗಿ? ಈ ಪಕ್ಷದ ವರ್ಗ ಸ್ವರೂಪದಲ್ಲಿ ಈ ಪ್ರಶ್ನೆಗೆ ಉತ್ತರ ಅಡಗಿದೆ. ಬಂಡವಾಳಶಾಹಿ ಭೂಮಾಲಕ ವರ್ಗದ ಎರಡನೇ ದೊಡ್ಡ ರಾಜಕೀಯ ಪಕ್ಷವಾಗಿರುವ ಬಿ.ಜೆ.ಪಿ ಕೂಡ ಆಳುವ ವರ್ಗಗಳನ್ನು ಕಾಡುತ್ತಿರುವ ಅಸ್ಥಿರತೆಯ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಬಯಸಿದೆ. ಬಿ.ಜೆ.ಪಿ ಹಾಗೂ ಕಾಂಗ್ರೆಸ್ ಪ್ರತಿನಿಧಿಸುವ ಹಿತಾಸಕ್ತಿಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಹೀಗಾಗಿ, ರಾಜಕೀಯ ಅಸ್ಥಿರತೆಯಿಂದಾಗಿ ಆರ್ಥಿಕ ಸುಧಾರಣೆಗಳು ಅಸ್ತವ್ಯಸ್ತಗೊಂಡರೆ ದೊಡ್ಡ ಕೈಗಾರಿಕೋದ್ಯಮಿಗಳು ಹಾಗೂ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಶ್ರೀಮಂತರು ಗಳಿಸಿದ ಪ್ರಯೋಜನಕ್ಕೆ ಯಾವಗತಿ ಎರಗುತ್ತದೋ ಎಂಬುದು ಬಿ.ಜೆ.ಪಿಯ ಚಿಂತೆಯಾಗಿದೆ.

ಇಷ್ಟು ಮಾತ್ರವಲ್ಲದೆ, ಹಿಂದೂ ಬಹುಸಂಖ್ಯಾತರ ಆಡಳಿತದ ಪರಿಕಲ್ಪನೆಯನ್ನು ಬಿ.ಜೆ.ಪಿ ಹೊಂದಿರುವುದರಿಂದ ಸರ್ವಾಧಿಕಾರಕ್ಕೆ ಒಲವು ತೋರುತ್ತಿದೆ. ಅಧ್ಯಕ್ಷೀಯ ವ್ಯವಸ್ಥೆಯಲ್ಲಿ ಈ ಗುಣ ಇದೆ. 'ತೊಂದರೆಕೊಡುವ' ಅಲ್ಪಸಂಖ್ಯಾತರನ್ನು 'ಶಾಂತಗೊಳಿಸಲು' ಈ ಸರ್ವಾಧಿಕಾರದ ಅಗತ್ಯ ಎಂದು ಅದರ ಅಭಿಪ್ರಾಯ.

ಹಲವು ಪ್ರಸ್ತಾವಗಳು

ಬದಲಾವಣೆಗೆ ಸಂಬಂಧಪಟ್ಟಂತೆ ... ಪ್ರಸ್ತಾವಗಳನ್ನು ಮಂಡಿಸಲಾಗಿದೆ. ರಾಷ್ಟ್ರೀಯ ಸರಕಾರವನ್ನು ರಚಿಸಬೇಕೆಂದು ಮಾಜಿ ... ಪತಿ ಆರ್. ವೆಂಕಟರಾಮನ್ ಸಲಹೆ ... ದ್ದಾರೆ. ಎರಡನೇ ಮೂರು ಬಹುಮತದ... ಯಾವುದೇ ಸರಕಾರವನ್ನು ರಚಿಸಬ... ಎಂಬುದು ಈಗ ಸ್ಪೀಕರ್ ಶಿವರಾಜ್ ಪಾ... ಮಂಡಿಸಿರುವ ಸಲಹೆಯಾಗಿದೆ. ಪಕ್ಷಗಳ ... ಶ್ರಕೂಟ ಎರಡನೇ ಮೂರು ಬಹುಮ... ದಿಗೆ ಸರಕಾರವನ್ನು, ರಚಿಸಬಹುದು, ... ವೇಳೆ ಅದು ಸಾಧ್ಯವಾಗದಿದ್ದಲ್ಲಿ ಸ... ಸದಸ್ಯರಲ್ಲವದರಿಂದ, ಅಥವಾ 'ಸಂವಿ... ಅಧಿಕಾರಿಗಳ' ನೆರವಿನಿಂದ ರಾಷ್ಟ್ರಪತಿಯ... ಸರಕಾರವನ್ನು ರಚಿಸಬಹುದು ಎಂಬುದು ... ರ ಪರ್ಯಾಯಗಳಲ್ಲಿ ಸೇರಿದೆ. ವಾಸ್ತ... ಇವೆಲ್ಲ ರಾಜಕೀಯ ಪಕ್ಷಗಳನ್ನು ಅ... ಸಂಸದೀಯ ವ್ಯವಸ್ಥೆಯನ್ನು ನಾಶಮ... ಅಪಾಯಕಾರಿ ಸಲಹೆಗಳಾಗಿವೆ.

ನಾನಾ ಸಿದ್ಧಾಂತ ಹಾಗೂ ರಾ... ಕಾರ್ಯಕ್ರಮಗಳನ್ನು ಹೊಂದಿರುವ ಪಕ್ಷ... ಸೇರಿಸಿ 'ಕೃತಕ'ವಾದ 'ಬಹುಮತ'ವನ್ನು ... ವುದು ಈ ಎಲ್ಲಾ ಸಲಹೆಗಳ ಸಾರ... ಇದರ ಪ್ರಕಾರ ಯಾವುದೇ ಒಂದು... ಮೂರನೇ ಎರಡು ಬಹುಮತವನ್ನು ಪ... ದ್ದರೆ ಈ ರೀತಿಯ ಬಹುಮತ ಹೊಂ... ಪಕ್ಷಗಳ ಕೂಟ ಸರಕಾರ ರಚಿಸುವುದು ... ವಾಗುತ್ತದೆ. ಇದೊಂದು ಅಸಂಗತ ವಿ...

ಭುತ್ವದ ನಿಜ ಬಣ್ಣ ಬಯಲಾಯಿತು.

ಸರಕಾರ ತಂದ 'ಕಡ್ಡಾಯ ಠೇವಣಿ' ನೂ ಹೆಚ್ಚು ವೇತನ ಪಡೆಯುವವರು, ಮ್ಮಿ ವೇತನ ಪಡೆಯುವವರು ಎಂದೇನೂ ತ್ಯಾಸ ಮಾಡಲಿಲ್ಲ. ಎಲ್ಲಾ ಕಾರ್ಮಿಕರೂ ಮ್ಮ ಮೂಲ ವೇತನದ ಪೂರ್ತಿ ಹೆಚ್ಚಳವನ್ನು ಗೂ ತುಟ್ಟಿಭತ್ಯೆ ಹೆಚ್ಚಳದ ಶೇ. 50ವನ್ನು ಡ್ಡಾಯವಾಗಿ ಠೇವಣಿ ಇಡಬೇಕಾಗಿತ್ತು.

ಪ. ಬಂಗಾಳದಲ್ಲಿ ತುರ್ತು ಪರಿಸ್ಥಿತಿಯ ಪೂರ್ವಾಭ್ಯಾಸ

ಸಿಐಟಿಯು ಆರಂಭಿಸಿದ, ಯು.ಸಿ.ಟಿ.ಯು. ಂದುವರೆಸಿಕೊಂಡು ಹೋದ ಜಂಟಿ ಹೋರಾ ಳು ಎ.ಐ.ಐ.ಇ.ಎ. ಮತ್ತು ಸಾರ್ವಜನಿಕ ಯದ ಹಾಗೂ ಸಂಘಟಿತ ವಲಯದ ಇತರ ಘಟನೆಗಳು ವೇತನ ಸ್ತಂಭನ ನೀತಿಗೆ ನೀಡಿದ ಪ್ರತಿರೋಧ, ಐತಿಹಾಸಿಕ ರೈಲ್ವೆ ಕಾರ್ಮಿಕರ ಮುಷ್ಕರ, ಇತ್ಯಾದಿ ದೇಶಾದ್ಯಂತ ಹೊಸದೊಂದು ಅರಿವಿನ ಬೀಜ ಬಿತ್ತಲು ನೆರವಾದವು. ಈ ಹಿಂದೆ ಬಂಗಾಳ ನೇತೃತ್ವದಲ್ಲಿದ್ದಾಗ ಆಳುವ ವರ್ಗಗಳು ಎಡಪಂಥೀಯರಲ್ಲಿ ಅತ್ಯಂತ ಸಮರಶೀಲ ವಿಭಾಗವನ್ನು ಇತರರಿಂದ ದೂರತಳ್ಳಿ ಅದನ್ನು ಚೂರು ಚೂರು ಮಾಡುವ ಪ್ರಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದ್ದವು; ಇದಕ್ಕಾಗಿ 1972ರಲ್ಲಿ ಪಶ್ಚಿಮ ಬಂಗಾಳದಲ್ಲಿ ಸಂಸದೀಯ ಪ್ರಜಾಸತ್ತೆಯನ್ನು ಬುಡಮೇಲು ಮಾಡಿದ ನಂತರ ಅಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ ಹರಿಯಬಿಟ್ಟು 1500ಕ್ಕೂ ಕಾರ್ಯಕರ್ತರನ್ನು ಕೊಂದರು. ನೂರಾರು ಯೂನಿಯನ್ ಕಛೇರಿಗಳನ್ನು ವಶಪಡಿಸಿಕೊಂಡು, ಸುಮಾರು 20 ಸಾವಿರ ಸಮರಶೀಲ ಕಾರ್ಯಕರ್ತರನ್ನು ಮನೆಗಳಿಂದ ಓಡಿಹೋಗುವಂತೆ ಮಾಡಿದರು. ಪ್ರತಿಯೊಂದು ಚುನಾವಣೆಗಳಲ್ಲಿ

-ಪುಟ 8ಕ್ಕೆ



. ಯಾಕೆಂದರೆ ಒಂದಕ್ಕೊಂದು ಸರಿಹೋಗದ ಗಳನ್ನು ಸರಕಾರ ರಚಿಸಲು ಒಟ್ಟು ಸೇರಿಸಿದಂತಾಗುತ್ತದೆ. ಸಿದ್ಧಾಂತ ಮತ್ತು ರಾಜಕೀಯದಲ್ಲಿನ ಭೇದಗಳನ್ನು ಬಿಡಬೇಕೆಂದರು ಒತ್ತಾಯಿಸಲಾಗಿರುವುದು ಇನ್ನೂ ಆತಂಕದ ಅಂಶವಾ.

ಬಿ.ಜೆ.ಪಿಯನ್ನು ದೊಡ್ಡ ಪಾಲುದಾರ ಪಕ್ಷ ಗಿ ಮಾಡಿಕೊಂಡು ಸರಕಾರವನ್ನು ರಚಿಸು ಏನೂ ತಪ್ಪಿಲ್ಲ ಎಂದು ಮಾಜಿ ರಾಷ್ಟ್ರಪತಿ ವಾ ಈಗಿನ ಸ್ಪೀಕರ್ ಲೆಕ್ಕ ಹಾಕಿರುವುದು ತನೇ ಅಪಾಯಕಾರಿ ಆಯಾಮವಾಗಿದೆ.

1990ರಲ್ಲಿ ವಿ.ಪಿ. ಸಿಂಗ್ ಸರಕಾರ ಪತನಡಾಗ, ಮೂರು ಪಕ್ಷಗಳನ್ನೊಳಗೊಂಡ ಯ ಸರಕಾರವನ್ನು ರಚಿಸಬೇಕೆಂದು ಆಗ ಪತಿಯಾಗಿದ್ದ ಆರ್. ವೆಂಕಟರಾಮನ್ ಹೆ ಮಾಡಿದ್ದರು. ಅವರು ಸಲಹೆಯನ್ನು ಸ್ವಲ್ಪ ಕ್ಷಿಸಿದ್ದರೆ. ಸಂಸತ್ ಸದಸ್ಯರೇ ನೇರವಾಗಿ ನಿ ಮತ್ತು ಕೇಂದ್ರ ಸಚಿವರನ್ನು ಬಹುಮ ಮೂಲಕ ಆಯ್ಕೆ ಮಾಡಬೇಕು ಎಂಬುದ ಟರಾಮನ್‌ರ ಇತ್ತೀಚಿನ ವಾದ ಸರಣಿಯಾ. ಸದ್ಯದ ಪರಿಸ್ಥಿತಿಯಲ್ಲಿ ಈ ರೀತಿ ತುವುದೆಂದರೆ ಬಹುಪಕ್ಷ ಸಚಿವ ಸಂಪುಟ ರಚಿಸುವುದೆಂದೇ ಅರ್ಥ. ಇತ್ತೀಚಿನ ನ್ಯಾಸವೊಂದರಲ್ಲಿ ವೆಂಕಟರಾಮನ್ ಅವರೇ ದಂತೆ ಆಡ್ವಾನಿ, ವಾಜಪೇಯಿ, ವಿ.ಪಿ. , ಇಂದ್ರಜಿತ್ ಗುಪ್ತಾ ಮತ್ತು ಸೋಮ ಚಟರ್ಜಿ ಅವರನ್ನೊಳಗೊಂಡ ಸರಕಾರ ರಚಿಸುವುದೇ ಉತ್ತಮ! ಅಂದರೆ ಇವರೆ ನ್ನು ಒಂದೇ ಸಂಪುಟದಲ್ಲಿ ಸೇರಿಸುವುದು

ರಕಾರ ರಚನೆಗೆ ಎರಡನೇ ಮೂರರಷ್ಟು ಮತ ಅಗತ್ಯ ಎಂಬ ನಿಯಮ (ಪಾಟೀಲರ) ಬಿ.ಜೆ.ಪಿ.ಗೆ ಸರಿಯಾಗಿ ಹೊಂದುತ್ತದೆ. ರ ...ರಚಿಸಲು ಜನರು ತೀರ್ಪು ದ್ದರೂ ಅತ್ಯಂತ ದೊಡ್ಡ ಪ್ರತಿಪಕ್ಷವೆಂಬ ಲ್ಲಿ ಅದು ಅನಿವಾರ್ಯವಾಗಿ ಸರಕಾರದ ವಾಗುತ್ತದೆ.

ಈ ಧೋರಣೆಯ ಪರಿಣಾಮ ಏನೆಂಬುದು ಸ್ಪಷ್ಟ. ಕಾಂಗ್ರೆಸ್ ಪಕ್ಷದಲ್ಲಿ ದೀರ್ಘಕಾಲದಿಂದಿರುವ ಅಧಿಕಾರದ ವಿವಿಧ ಹುದ್ದೆಗಳಲ್ಲಿದ್ದ ಹಾಗೂ ಈಗಲೂ ಇರುವ ಜನರು ಬಿ.ಜೆ.ಪಿಯೊಂದಿಗೆ ಅಧಿಕಾರವನ್ನು ಹಂಚಿಕೊಳ್ಳಲೂ ಹೇಸುವುದಿಲ್ಲ. "ಸ್ಥಿರತೆ"ಯನ್ನು ಸಾಧಿಸಲು ಅವರು ಬಿಜೆಪಿಯೊಂದಿಗೆ ಸೇರುತ್ತಾರೆ. ತನ್ಮೂಲಕ ಭಾರತವನ್ನು ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಗುಲಾಮನನ್ನಾಗಿ ಮಾಡುವ ಆರ್ಥಿಕ ನೀತಿಗಳನ್ನು ಮುಂದುವರಿಸುವುದು ಅವರ ಯೋಜನೆಯಾಗಿದೆ.

ಗರ್ಭಾವಸ್ಥೆಯಲ್ಲಿ

ಅದೃಷ್ಟವಶಾತ್, ಈ ಯೋಜನೆ ಇನ್ನೂ ಗರ್ಭಾವಸ್ಥೆಯಲ್ಲೇ ಇದೆ. ಆರ್ಥಿಕ ನೀತಿಗಳಿಗೆ 'ಒಮ್ಮತ'ದ ಬೆಂಬಲವನ್ನು ಕ್ರೋಢೀಕರಿಸಲು ಆಳುವ ವರ್ಗಗಳು ವಿಫಲವಾಗಿವೆ. ಈ ರಾಜಕೀಯ ಸುಧಾರಣೆಗಳಿಗೆ ಒಮ್ಮತದ ಬೆಂಬಲವನ್ನು ಪಡೆಯುವುದು ಇನ್ನೂ ಕಷ್ಟವಾಗಬಹುದು. ಬಂಡವಾಳಶಾಹಿ ಪಕ್ಷಗಳಲ್ಲೇ ಈ ಯೋಜನೆಗೆ ಪ್ರಬಲ ವಿರೋಧ ವ್ಯಕ್ತವಾಗಲೂ ಬಹುದು. ಕಾಂಗ್ರೆಸ್, ಮತ್ತು ಅಗತ್ಯವಾದರೆ ಬಿಜೆಪಿ ಸಖ್ಯದೊಂದಿಗೆ ದೊಡ್ಡ ಬಂಡವಾಳಶಾಹಿ ರಾಷ್ಟ್ರೀಯ ಪಕ್ಷಗಳು ಹಿಡಿತ ಸಾಧಿಸುತ್ತವೆ ಎಂಬ ಭೀತಿಯೇ ಇದಕ್ಕೆ ಕಾರಣ. ಈ ಯೋಜನೆ ಬಂಡವಾಳಶಾಹಿ ಜಾತ್ಯಾತೀತ ಪಕ್ಷಗಳಿಗೆ ಮತ್ತು ಪ್ರಾದೇಶಿಕ ಪಕ್ಷಗಳಿಗೆ ಪಥ್ಯವಾಗುವುದಿಲ್ಲ.

ಜಾತಿ, ವರ್ಗ, ಪ್ರಾದೇಶಿಕತೆ ಹಾಗೂ ಸಾಮಾಜಿಕ ವಿಭಜನೆಗಳು ಇನ್ನೂ ಉಳಿದುಕೊಂಡಿದ್ದು ಇಂಥ ಸರ್ವಾಧಿಕಾರಿ ಪ್ರಸ್ತಾವಗಳಿಂದ ಅವನ್ನೆಲ್ಲಾ ಕಡೆಗಣಿಸಲಾಗದು ಎಂಬುದು ವಾಸ್ತವವಾಗಿದೆ.

ಸಮಿಶ್ರ ಸರಕಾರಗಳ ರಚನೆಗೆ ಆಳುವ ಪಕ್ಷದ ಬೆಂಬಲಿಗರು ವಿರೋಧ ವ್ಯಕ್ತಪಡಿಸುವುದು ಇಂಥ ಸರಕಾರಗಳು ಅಸ್ಥಿರವಾಗಿರುತ್ತವೆ ಎಂಬ ಕಾರಣಕ್ಕೆ ಅಲ್ಲ, ಕಾಂಗ್ರೆಸ್ಸೇತರ, ಬಿಜೆಪಿಯೇತರ ಸರಕಾರ ಅಧಿಕಾರಕ್ಕೆ ಬರುತ್ತದೆಂಬ ಭೀತಿ ಈ 'ಸ್ಥಿರತೆ'ವಾದಿಗಳನ್ನು ಕಾಡುತ್ತಿದೆ. ದೊಡ್ಡ ಬಂಡವಾಳಶಾಹಿಗಳು ಮತ್ತು ಅಂತರ್‌ರಾ

-ಪುಟ 7ಕ್ಕೆ

ಮೊಸಳೆ ಕಣ್ಣೀರು

ನರಸಿಂಹರಾಯರ ಸರಕಾರದ ಮಂತ್ರಿಗಳಿಗೆಲ್ಲ ಈ ಮೊಸಳೆ ಕಣ್ಣೀರು ಬರುತ್ತಲೇ ಇರುತ್ತದೆ. ಬತ್ತದ ನದಿಯಂತೆ ಅದು. ಹೇಳೋದು ಪುರಾಣ ತಿನ್ನೋದು ಬದನೆಕಾಯಿ ಎಂಬಂತೆ ಇವರೆಲ್ಲರ ವರ್ತನೆ. ಕೇಂದ್ರದ ಕಾರ್ಮಿಕ ಖಾತೆಯ ಮಂತ್ರಿ ಪಿ.ಎ. ಸಂಗ್ಮಾ ಅವರ ಈ ಕಣ್ಣೀರ ಕೋಡಿಯ ವೈಖರಿ ನೋಡಿ.

ಅಸಂಘಟಿತ ವಲಯದ ಕಾರ್ಮಿಕರಿಗೆ ಬಹಳ ಅನ್ಯಾಯವಾಗುತ್ತಿದೆ. ಅವರಿಗೆ ಕನಿಷ್ಟ ಕೂಲಿ ಜಾರಿಗೆ ಬರುವಂತಾಗಬೇಕೆಂಬುದೇ ಅವರ ಮಾತು.(ಆಶಯ ವಿರಲಿಕ್ಕಿಲ್ಲ) ಈ ವಲಯದ ಕಾರ್ಮಿಕರ ದಿನನಿತ್ಯದ ಗಳಿಕೆಯನ್ನು ಇದು ನಿರ್ಧರಿಸುವುದರಿಂದ ಇದಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಬೇಕಂತೆ. ಅವರೇ ಹೇಳುವಂತೆ ಕನಿಷ್ಟ ಕೂಲಿಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಬರೀ 2111 ಪ್ರಕರಣಗಳು ಮಾತ್ರ ನಿರ್ಧಾರವಾಗಿವೆ. ಈ ಪ್ರಕರಣಗಳ ನಿರ್ಧಾರ ಬಹಳ ನಿಧಾನವಾಗಿ ಆಗುತ್ತಿದೆ ಎಂಬುದು ಅವರ ಹೇಳಿಕೆ.

ಇವೆಲ್ಲ ನಿಜವೇ. ಆದರೆ ಸಂಗ್ಮಾರ ಕಾಳಜಿ ನಿಜವೇ? ಕಾರ್ಮಿಕರ ಹಿತ ಕಾಯುವ ಎಲ್ಲಾ ಕಾಯಿದೆಗಳನ್ನು ತಿರುಚಿ ತಿದ್ದುಪಡಿ ಮಾಡಿ ಮಾಲೀಕರ ಅನುಕೂಲಕ್ಕಾಗಿ ಶ್ರಮ ಪಡುವ ಉದಾರೀಕರಣದ ಸರಕಾರದ ಸದಸ್ಯನಾಗಿರುವ ಈ ಮಹಾಶಯರು ತಮ್ಮ ಎಲ್ಲಾ ನಡವಳಿಕೆಗಳಲ್ಲೂ ತಾವು ಬಂಡವಾಳಿಗರ ಪರ ಎಂಬುದನ್ನು ತೋರಿಸಿಕೊಂಡಿದ್ದಾರೆ.

"ರಾಷ್ಟ್ರೀಯ ಪುನರುಜ್ಜೀವನ ನಿಧಿ" ಎಂಬ ಹೆಸರಿನ ನಿಧಿ ಸ್ಥಾಪಿಸಿ ಅದರಿಂದ ಉದ್ಯೋಗಸ್ಥರನ್ನು ನಿರುದ್ಯೋಗಿಗಳನ್ನಾಗಿಸಿ ಮನೆಗೆ ಕಳುಹಿಸುವ, ಬೇಕಾದಾಗ ಕೆಲಸ ನೀಡಿ ಬೇಡವಾದಾಗ ಮನೆಗೆ ಕಳುಹಿಸುವ ನೀತಿಯನ್ನೇ ತರುವ ಹುನ್ನಾರಗಳನ್ನು ಮಾಡಿದ ಸಂಗ್ಮಾರ ಕಾಳಜಿ ಗೊತ್ತಿರುವಂತಹುದ್ದೇ?

ಆದರೂ ಒಂದು ಮಾತು ನಿಜ. ದುಡಿವ ಜನರ ಹೋರಾಟದ ಒತ್ತಡ ಅವರಿಂದ ಇಂತಹ ಸತ್ಯದ ಮಾತುಗಳನ್ನು ಆಡಿಸಿದೆ.

ಬಂಡವಾಳ ಶೇಖರಣೆ

ಕೇಂದ್ರ ಅಂಕೆ-ಸಂಖ್ಯೆ ಸಂಸ್ಥೆಯೊಂದಿದೆ. ಅದು ದೇಶದ ವಿವಿಧ ವಲಯಗಳ ಸಮೀಕ್ಷೆ ನಡೆಸಿ ಆಗಾಗ ಅಂಕೆ-ಸಂಖ್ಯೆಗಳನ್ನು ಪ್ರಕಟಿಸುತ್ತಿರುತ್ತದೆ.

ಬಂಡವಾಳ ಶೇಖರಣೆ ದೇಶದ ಅಭಿವೃದ್ಧಿ ಯಾವ ದಿಸೆಯಲ್ಲಿ ನಡೆಯುತ್ತಿದೆ ಎಂಬುದನ್ನು ಸೂಚಿಸುತ್ತದೆ. ಬಂಡವಾಳ ಶೇಖರಣೆ ಹೆಚ್ಚಾಗಿ ಆದರೆ ಈ ಬಂಡವಾಳ ಹೂಡಿಕೆಗೆ ಲಭ್ಯವಾಗುತ್ತದೆ. ಬಂಡವಾಳ ಹೂಡಿಕೆಯಿಂದ ಉತ್ಪಾದನೆ ಉಂಟಾಗುತ್ತದೆ. ಈ ಉತ್ಪಾದನೆಯ ಜೊತೆಗೆ ಉದ್ಯೋಗಗಳೂ ಸೃಷ್ಟಿಯಾಗುತ್ತವೆ. ಇದು ದೇಶದ ಒಟ್ಟಾರೆ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತದೆ.

ಉದಾರೀಕರಣ ದೇಶಕ್ಕೆ ಒಳ್ಳೆಯದು ಎಂದು ವಿಶ್ವ ಬ್ಯಾಂಕ್, ಐಎಂಎಫ್, ನರಸಿಂಹರಾಯರ ಸರಕಾರ ಇವೆಲ್ಲಾ ಹೇಳುತ್ತಲೇ ಬಂದಿವೆ. ಈ ಸಂಸ್ಥೆಗಳ ಅರ್ಥಶಾಸ್ತ್ರಜ್ಞರೂ ಈ ಮಾತನ್ನು ತಮ್ಮ ಅಧ್ಯಯನಗಳ ಮೂಲಕ, ಪಾಂಡಿತ್ಯದ ಮೂಲಕ ವಿವರಿಸಿ ಹೇಳುತ್ತಿದ್ದಾರೆ.

ಆದರೆ ಬಂಡವಾಳ ಶೇಖರಣೆಯ ಪ್ರಮಾಣ ಹೇಗಿದೆ? ಕೇಂದ್ರ ಅಂಕೆ-ಸಂಖ್ಯೆ ಸಂಸ್ಥೆಯ ಪ್ರಕಾರ ನಮ್ಮ ದೇಶದ ಬಂಡವಾಳ ಶೇಖರಣೆಯ ಪ್ರಮಾಣ ಹೀಗಿದೆ..

1991-92ರಲ್ಲಿ ಶೇ. 23.6
1992-93ರಲ್ಲಿ ಶೇ. 22.00
1993-94ರಲ್ಲಿ ಶೇ. 20.40

ಈ ಅಂಕೆ-ಸಂಖ್ಯೆಗಳಿಗೆ ಹೆಚ್ಚಿನ ವಿವರಣೆ ಬೇಕೇ? ದೇಶ ಅಭಿವೃದ್ಧಿ ಹೊಂದುತ್ತಿದೆ ಎಂದರೆ ನಂಬುತ್ತೀರಾ?

ಶ್ರೀಮಂತರ ಸೇವೆಗಾಗಿ ಉದಾರೀಕರಣ

ಕೇಂದ್ರ ಕಂದಾಯ ಇಲಾಖೆಯ(ಹಣಕಾಸು ಮಂತ್ರಾಲಯದ) ಕಾರ್ಯದರ್ಶಿ ಎಂ.ಆರ್. ಶಿವರಾಮನ್ ಉದಾರೀಕರಣದ ಪ್ರಕ್ರಿಯೆಯಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತಿರುವವರು. ಅವರು ಇತ್ತೀಚೆಗೆ ಭಾರತೀಯ ಉದ್ದಿಮೆಗಳ ಒಕ್ಕೂಟ(ಸಿಐಐ)ದ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಕಂಪೆನಿಗಳಿಗೆ ತೆರಿಗೆ ಭಾರ ಇಳಿಸುವ ಭರವಸೆ ನೀಡಿದ್ದಾರೆ.

ಕಂಪೆನಿಗಳು ಶ್ರೀಮಂತರ ಸೊತ್ತುಗಳು. ಕಂಪೆನಿಗಳ ತೆರಿಗೆಯಲ್ಲಿ ಕಡಿತವೆಂದರೆ ಈ ಶ್ರೀಮಂತರ ಮೇಲೆ ಕಡಿಮೆ ತೆರಿಗೆ ಭಾರ ಎಂದೇ ಅರ್ಥ. ಇದರಿಂದ ಸರಕಾರದ ಸಂಪನ್ಮೂಲಗಳು ಕಡಿಮೆಯಾಗುತ್ತವೆ. ಈ ಕಡಿಮೆಯಾದ ಸಂಪನ್ಮೂಲಗಳನ್ನು ಭರಿಸಿಕೊಳ್ಳಲು ಸರಕಾರ ಜನಸಾಮಾನ್ಯರ ಮೇಲೆ ಹೆಚ್ಚು ಭಾರವನ್ನು ಹೇರಬೇಕಾಗುತ್ತದೆ. ಅದನ್ನೇ ಈ ಸರಕರಾ ಮಾಡುವುದು.

ಶಿವರಾಮನ್‌ರ ಮಾತುಗಳಲ್ಲೇ ಹೇಳುವುದಾದರೆ ಭಾರತದಲ್ಲಿ ಕಂಪನಿಗಳ ಮೇಲೆ ಬೇರೆ ದೇಶಗಳಿಗಿಂತ ಕಡಿಮೆ ತೆರಿಗೆ ಭಾರವಿದೆಯಂತೆ.

ಈ ಭಾರವನ್ನು ಕಡಿಮೆ ಮಾಡುವ ತರಾತುರಿ ಸರಕಾರಕ್ಕೆ ಹೇಗಿದೆ ಉದಾರೀಕರಣದ ರುಚಿ?

ತೋಳಗಳ ಭರವಸೆ

ಈಗ ವಿದ್ಯುತ್ ವಲಯದಲ್ಲಿ ಭಯಂಕರ ತೋಳಗಳ ಹಾವಳಿ ಎಲ್ಲರಿಗೂ ಗೊತ್ತಿರುವಂತಹುದ್ದೇ. ಉದಾರೀಕರಣವಾದಿಗಳೂ ಈಗ ಈ ನೀತಿಗಳ ಬಗ್ಗೆ ಅವ್ಯವಹಾರಗಳ ಬಗ್ಗೆ ಮಾತಾಡಿಕೊಳ್ಳುತ್ತಿದ್ದಾರೆ. ಎನ್ರೋನ್ ಎಂಬ ಬಹುರಾಷ್ಟ್ರೀಯ ಕಂಪೆನಿ ಬೆಂಬಿಡದ ಭೂತವಾಗಿ ಕಾಡುತ್ತಿದೆ.

ಇಲ್ಲಿ ಕರ್ನಾಟಕದಲ್ಲಿ 'ಕೊಜೆಂಟ್ರಿಕ್ಸ್ ಎನರ್ಜಿ ಇಂಕ್' ಎಂಬ ದೈತ್ಯ ಕಂಪನಿಯ ರಾಕ್ಷಸೀ ಕಾರ್ಯಗಳು ನಡೆಯುತ್ತಿವೆ.

ಈ ಕೊಜೆಂಟ್ರಿಕ್ಸ್‌ನ ಅಧ್ಯಕ್ಷ ಡೇವಿಡ್ ಲೂಯಿಸ್ ಎಂಬಾತ. ಈತ ಈ ಕಂಪನಿಯ ವ್ಯವಹಾರಗಳ ಬಗ್ಗೆ ಎದ್ದಿರುವ ಅವ್ಯವಹಾರಗಳ ಹಿನ್ನೆಲೆಯಲ್ಲಿ ರಾಜ್ಯ ಸರಕಾರಕ್ಕೆ ದೊಡ್ಡ ಭರವಸೆ ನೀಡಿದ್ದಾರೆ. ಕಡಿಮೆ ವೆಚ್ಚದಲ್ಲಿ ಸಮರ್ಥವಾಗಿ ವಿದ್ಯುತ್ ಉತ್ಪಾದಿಸುತ್ತೇವೆ, ಎಲ್ಲವನ್ನು ಮುಚ್ಚುಮರೆ ಇಲ್ಲದೆ ಮುಕ್ತವಾಗಿ ಜನರಿಗೆ ಕಾಣುವಂತೆ ಮಾಡುತ್ತೇವೆ ಎಂದೆಲ್ಲಾ ಹೇಳಿದ್ದಾನೆ.

ಆದರೆ ಬಹುರಾಷ್ಟ್ರೀಯ ಕಂಪೆನಿಗಳ ಲಾಭ ಪಿಪಾಸೆ ಅವ್ಯವಹಾರಗಳ ಅಲ್ಪ ಪರಿಚಯ ಇರುವವರಿಗೂ ಗೊತ್ತು ಇವರೇನು ಮಾಡುತ್ತಾರೆ ಎಂಬುದು.

ಬಹುಶಃ ಎಲ್ಲವನ್ನೂ ಮುಕ್ತವಾಗಿಯೇ ಮಾಡುತ್ತಾರೆ ಆದರೆ 'ವಿದ್ಯುತ್ ಬೆಳಕು' ಮಾತ್ರ ಇರುವುದಿಲ್ಲ. ಕತ್ತಲಿನಲ್ಲಿ ಅವರು ಮಾಡುವುದೆಲ್ಲವನ್ನೂ ನೋಡಲು ಸಮರ್ಥರಿದ್ದವರು ನೋಡಬಹುದು. ಅಲ್ಲವೇ?

ಬೀಡಿ ಕಾರ್ಮಿಕರ ಆರೋಗ್ಯ ಪರಿಸ್ಥಿತಿ

ಸಂಸತ್ತಿನ ಸಮಿತಿಯೊಂದು ಬೆಂಗಳೂರು



ಮತ್ತು ಮೈಸೂರುಗಳಲ್ಲಿನ ಬೀಡಿ ಕಾರ್ಮಿಕರ ಪರಿಸ್ಥಿತಿಯನ್ನು ಅಧ್ಯಯನ ಮಾಡಿತ್ತು. ದೇಶದಾದ್ಯಂತ ಎಲ್ಲ ಕಡೆ ಬೀಡಿ ಕಾರ್ಮಿಕರ ಸ್ಥಿತಿಗತಿಗಳನ್ನು ಅವಲೋಕಿಸಿದ ಈ ಸಮಿತಿ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ಈ ಕಾರ್ಮಿಕರಿಗೆ ಲಭ್ಯವಿರುವ ವೈದ್ಯಕೀಯ ಸೌಲಭ್ಯ ಅತ್ಯಂತ ಹೀನವಾಗಿದೆ ಎಂಬ ತೀರ್ಮಾನಕ್ಕೆ ಬಂದಿದೆ.

ಈ ಪ್ರದೇಶಗಳಲ್ಲಿರುವ ಆಸ್ಪತ್ರೆಗಳು ಈ ಬೀಡಿ ಕಾರ್ಮಿಕರ ಕಲ್ಯಾಣಕ್ಕಾಗಿ ಇರುವವಾದರೂ ಅವು ಅತ್ಯಂತ ದಯನೀಯ ಸ್ಥಿತಿಯಲ್ಲಿವೆ ಎಂದಿದೆ ಈ ಸಮಿತಿ. ಎಕ್ಸರೇ ಆಗಲೀ ರೋಗಾಣುಶಾಸ್ತ್ರ ಇಲಾಖೆಯಾಗಲೀ ಈ ಆಸ್ಪತ್ರೆಗಳಲ್ಲಿ ಸರಿಯಾಗಿಲ್ಲ. ಕಾರ್ಮಿಕರಲ್ಲಿ ಹಲವರು ಕ್ಷಯ ಅಸ್ತಮಾ ಮತ್ತು ಕ್ಯಾನ್ಸರ್ ಗಳಿಂದ ಬಳಲುತ್ತಿದ್ದಾರೆ ಎಂದಿದೆ ಸಮಿತಿ. ವೈದ್ಯಕೀಯ ಸೌಲಭ್ಯಗಳಿಲ್ಲದಿರುವುದರಿಂದ ಈ ಕಾರ್ಮಿಕರು ಎಲ್ಲ ಕಡೆಗೆ ಸಹಾಯಕ್ಕಾಗಿ ಒದ್ದಾಡಬೇಕಾಗಿದೆ.

ಜನಪರ ತಾನು ಎಂದು ಹೇಳಿಕೊಳ್ಳುವ ದೇವೇಗೌಡರ ಸರಕಾರಕ್ಕೆ ಈ ಸಮಿತಿಯ ವರದಿಯ ಪ್ರತಿ ದೊರೆತಿಲ್ಲವೇ? ದಿನನಿತ್ಯ ಪೌರುಷದ ಹೇಳಿಕೆಗಳನ್ನೇ ನೀಡುವ ಅಭ್ಯಾಸದ ಮುಖ್ಯಮಂತ್ರಿಗಳಂತೂ ಈ ವಿಷಯದಲ್ಲಿ ಯಾವುದೇ ಹೇಳಿಕೆ ನೀಡಿಲ್ಲ ಅಲ್ಲವೇ?

ದರೋಡೆಕೋರರಿಗೆ ಬಾಗಿಲು ತೆರೆಯದವರಿಗೆ ದಿಕ್ಕಾರ!!

ಇದು ಯಾರ ಘೋಷಣೆ ಎಂದು ಕೇಳಿದೀರಾ? ಸಾಮ್ರಾಜ್ಯಶಾಹಿಗಳ ಘೋಷಣೆ ಇದು. ಆಶ್ಚರ್ಯವಾಗುತ್ತಿದೆಯೇ? ಅಮೇರಿಕದ ಖಜಾನೆ ಇಲಾಖೆ ಈ ಪುಕಾರು ಎತ್ತಿರುವುದು. ಅಮೇರಿಕಾದ ಸೆನೆಟ್ ಗೆ ನೀಡಿರುವ ವರದಿಯ ಪ್ರಕಾರ, ಭಾರತವೂ ಸೇರಿದಂತೆ ಏಷ್ಯಾದ ಹಲವು ದೇಶಗಳು ಮತ್ತು ಲ್ಯಾಟಿನ್ ಅಮೇರಿಕದ ಹಲವು ದೇಶಗಳು ತಮ್ಮಲ್ಲಿನ ಹಣಕಾಸು ಮಾರುಕಟ್ಟೆಯನ್ನು ಅಮೇರಿಕದ ಹಣಕಾಸು ಸೇವೆಗಳಿಗೆ ತೆರೆದಿಲ್ಲ ಎನ್ನುವುದೇ ಆ ಪುಕಾರು.

ಈ ಇಲಾಖೆಯ ಪ್ರಕಾರ ಭಾರತ ತನ್ನ ಹಣಕಾಸು ಮಾರುಕಟ್ಟೆಯನ್ನು ಇನ್ನು ದೊಡ್ಡದಾಗಿ ತೆರೆಯದೇ ಹೋದರೆ ಗ್ಯಾಟ್ಸ್‌ನ(ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಇನ್ ಸರ್ವಿಸಸ್) ಉದ್ದೇಶವೇ ವಿಫಲವಾಗಿಬಿಡುತ್ತದೆ.

ಒಳಾರ್ಥ ನೋಡುವುದಾದರೆ ಅಮೇರಿಕಾದ ಹಣಕಾಸು ಸೇವೆಗಳ ಪ್ರಯೋಜನ ಪಡೆಯದೆ ಭಾರತ ಅಭಿವೃದ್ಧಿ ಹೊಂದಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಅವರ ಈ ಒತ್ತಾಯ.

"ನಾವು ನಿಮ್ಮ ದರೋಡೆ ಮಾಡುವುದು ನಿಮ್ಮ ಹಿತಕ್ಕಾಗಿ" ಎಂದಂತೆ ಅಲ್ಲವೇ ಇದು.

ದೇಶದೊಳಗೆ



ವಿಶ್ವ

ಲಕ್ಷ ಕಾರ್ಮಿಕರನ್ನು ಬೀದಿಗೆ ತಳ್ಳುವ ತೀರ್ಪು

ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಕಳೆದುಕೊಳ್ಳಲು ಕಾರಣವಾಗುವಂತ ಆತಂಕಕಾರಿ ತೀರ್ಪೊಂದನ್ನು ಸುಪ್ರೀಂ ಕೋರ್ಟು ನೀಡಿದೆ.

ದೆಹಲಿಯ ಸುಮಾರು 9000ಕ್ಕೂ ಕೈಗಾರಿಕಾ ಘಟಕಗಳನ್ನು ಸ್ಥಳಾಂತರಿಸುವಂತೆ ಸುಪ್ರೀಂಕೋರ್ಟ್ ತನ್ನ ಇತ್ತೀಚಿನ ಆದೇಶದಲ್ಲಿ ಸೂಚಿಸಿದೆ. ಒಂದು ವೇಳೆ ಸರ್ವೋನ್ನತ ನ್ಯಾಯಾಲಯದ ನಿರ್ದೇಶನವನ್ನು ಅನುಷ್ಠಾನಕ್ಕೆ ತಂದಿದ್ದೇ ಆದಲ್ಲಿ ಹೆಚ್ಚು ಕಡಿಮೆ ಒಂದು ಲಕ್ಷ ಜನರು ಕೆಲಸವನ್ನು ಕಳೆದುಕೊಳ್ಳುತ್ತಾರೆ. ಅವರನ್ನು ಅವಲಂಬಿಸಿರುವ ಕುಟುಂಬಗಳು ಬೀದಿಪಾಲಾಗುತ್ತವೆ.

ಪರಿಸರ ಮಾಲಿನ್ಯ ಆಗುತ್ತದೆ ಎಂಬ ಕಾರಣಕ್ಕೆ ಇಷ್ಟೊಂದು ಸಂಖ್ಯೆಯ ಕೈಗಾರಿಕೆಗಳನ್ನು ಸ್ಥಳಾಂತರಿಸಬೇಕು ಎಂಬುದು ನ್ಯಾಯಾಲಯದ ಅಭಿಪ್ರಾಯ. ಪರಿಸರ ಹಾಳಾಗುತ್ತಿರುವುದಕ್ಕೆ ದುಡಿಯುವ ಜನರು ಹೊಣೆಗಾರರೇ? ವಾಸ್ತವವಾಗಿ ಮಾಲಿಕ ವರ್ಗದವರು ಲಾಭವನ್ನು ಕೊಳ್ಳೆ ಹೊಡೆಯುವ ಆಸೆಯಿಂದ ಪರಿಸರದ ಮೇಲಾಗುವ ದುಷ್ಪರಿಣಾಮವನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳದಿರುವುದರಿಂದ ಸಮಸ್ಯೆ ಉದ್ಭವಿಸಿದೆ.

ಯಾವುದೇ ನಿಯಂತ್ರಣಗಳನ್ನು ಹೇರದೆ ಅಧಿಕಾರಿಗಳು ಕಣ್ಣುಮುಚ್ಚಿ ಕೈಗಾರಿಕೆಗಳಿಗೆ ಅನುಮತಿ ಕೊಟ್ಟಿದ್ದೂ ತಪ್ಪಲ್ಲವೆ?

ಈ ಎಲ್ಲವನ್ನು ಮುಚ್ಚಿಟ್ಟು ಈಗ ಒಂದೇ ಸಲಕ್ಕೆ ಇಷ್ಟೊಂದು ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಬೇರೆ ಕಡೆ ಸ್ಥಾಪಿಸಬೇಕು ಎಂದರೆ ಹೇಗೆ? ಈಗಿನ ಪರಿಸ್ಥಿತಿಯಲ್ಲಂತೂ ಈಗಿರುವ ಕಾರ್ಮಿಕರನ್ನೇ ಬೇರೆಡೆ ಕರೆದುಕೊಂಡು ಹೋಗಿ ಅಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವುದು ಸಾಧ್ಯವಾಗದ ಮಾತು.

ಈ ವಿಚಾರದಲ್ಲಿ ಈಗ ದೆಹಲಿಯ ಕೈಗಾರಿಕಾ ವಲಯದಲ್ಲಿ ಭಾರೀ ಕೋಲಾಹಲವೇ ಎದ್ದಿದೆ. ಕಾರ್ಮಿಕರಂತೂ ತಮ್ಮ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿದ್ದಾರೆ.

ಸಿಐಟಿಯು, ಐಟಕ್ ಮತ್ತು ಇಂಟಕ್ ಸೇರಿದಂತೆ ಅನೇಕ ಕಾರ್ಮಿಕ ಸಂಘಟನೆಗಳು ಸುಪ್ರೀಂಕೋರ್ಟ್ ಗೆ ಅರ್ಜಿ ಸಲ್ಲಿಸಲಿವೆ. ಈ ವಿಚಾರದಲ್ಲಿ ಸರಿಯಾದ ನಿಲುವನ್ನು ತಳೆಯುವಂತೆ ಅವು ಕೋರಲಿವೆ.

'ಕೈಗಾರಿಕೆ ಅಭಿವೃದ್ಧಿ ಸತತವಾಗಿ ಮುಂದುವರಿಯಬೇಕಾದರೆ ಪರಿಸರ ರಕ್ಷಣೆಯೂ ಮುಖ್ಯವೇನೋ ಹೌದು. ಆದರೆ ಕಾರ್ಮಿಕರ ಉದ್ಯೋಗ ಕೂಡ ಅಷ್ಟೇ ಮುಖ್ಯ' ಎಂದು ಈ ಸಂಘಟನೆಗಳು ಹೇಳಿಕೆಯೊಂದರಲ್ಲಿ ಅಭಿಪ್ರಾಯಪಟ್ಟಿವೆ.

ಖಾಸಗೀಕರಣ ಸ್ಪರ್ಧೆಯಲ್ಲಿ ತೆಲುಗು ದೇಶಂ 'ಕುದುರೆ'

ಐ.ಎಂ.ಎಫ್. -ವಿಶ್ವಬ್ಯಾಂಕಿನ ಒತ್ತಡಗಳಿಗೆ ಮಣಿದು ಎಲ್ಲವನ್ನು ಖಾಸಗೀಕರಿಸಲು ಹೊರಟಿರುವ ಕಾಂಗ್ರೆಸ್(ಐ) ನೇತೃತ್ವದ ಕೇಂದ್ರ ಸರಕಾರದ ನೀತಿಗಳಿಗೆ ಅನೇಕ ಕಾಂಗ್ರೆಸ್ಸೇತರ ಸರಕಾರಗಳುಬೆಂಬಲ ಕೊಡುತ್ತಿವೆ. ಕೆಲವು ರಾಜ್ಯ ಸರಕಾರಗಳಂತೂ ಖಾಸಗೀಕರಣದಲ್ಲಿ ನಾವೇನೂ ಕಡಿಮೆಯಿಲ್ಲ ಎಂದು ತೋರಿಸಿಕೊಡಲು ಸಜ್ಜಾಗುತ್ತಿರುವಂತೆ ಕಾಣುತ್ತಿವೆ.

ಆಂಧ್ರಪ್ರದೇಶದ ತೆಲುಗು ದೇಶಂ ಸರಕಾರದ ನಿರ್ಧಾರಗಳನ್ನು -ನಿಲುವುಗಳನ್ನು ಗಮನಿಸಿದರೆ ಈ ರೀತಿ ಹೇಳುವುದರಲ್ಲಿ ತಪ್ಪೇನಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ರಾಜ್ಯ ರಸ್ತೆ ಸಾರಿಗೆ ನಿಗಮ, ವಿದ್ಯುತ್ ಕ್ಷೇತ್ರ, ಸಹಕಾರಿ ಸಂಘಗಳು, ಸಕ್ಕರೆ ಉದ್ಯಮ, ರಾಜ್ಯ ಸರಕಾರಿ ಸ್ವಾಮ್ಯದ ಉದ್ದಿಮೆಗಳು, ಜವಳಿ, ಹೈನುಗಾರಿಕೆ ಕ್ಷೇತ್ರ, ನಗರಸಭೆ ಸೇವೆಗಳು, ರಸ್ತೆಗಳು, ಶಿಕ್ಷಣ, ವೈದ್ಯಕೀಯ ಸೇವೆಗಳು.....

.....ಹೀಗೆ ಒಂದೇ ಎರಡೇ ಎಲ್ಲ ಎಲ್ಲವನ್ನೂ ಖಾಸಗೀಕರಿಸುವುದಾಗಿ ರಾಮರಾವ್ ಸರಕಾರ ಒಂದರ ಹಿಂದೆ ಒಂದು ಪ್ರಕಟಣೆಯನ್ನು ನೀಡುತ್ತಿದೆ.

ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸುವಂತೆ ಹಿತೇಣ್ ಭೈಯ್ಯಾ ಸಮಿತಿ ಶಿಫಾರಸು ಮಾಡಿದೆ. ಇದರಿಂದ ಗ್ರಾಹಕರು ಮತ್ತು ರೈತರು ಅಂತಿಮವಾಗಿ ಇಡೀ ರಾಜ್ಯಕ್ಕೆ ಹಾನಿಯಾಗುತ್ತದೆ; ಇದನ್ನು ಸ್ಪಷ್ಟವಾಗಿ ವಿರೋಧಿಸಬೇಕಾಗಿದೆ. ರಾಜ್ಯ ಸರಕಾರಿ ಉದ್ದಿಮೆಗಳಿಗೆ ಸಂಬಂಧಿಸಿ ಸುಬ್ರಹ್ಮಣ್ಯಂ ಸಮಿತಿ ಮಾಡಿರುವ ಶಿಫಾರಸುಗಳು ಕಾರ್ಮಿಕರ ಹಾಗೂ ದುರ್ಬಲ ವರ್ಗಗಳಿಗೆ ಹಾನಿಕಾರಿಯಾಗಿವೆ.

ರೋಗಗ್ರಸ್ತ ಉದ್ದಿಮೆಗಳನ್ನು ಗುರುತಿಸಿ ಅವುಗಳ ಪುನರುಜ್ಜೀವನ ಗೊಳಿಸುವುದು ತುರ್ತಾಗಿ ಅಗತ್ಯವಾಗಿದೆ.

ಉದ್ದಿಮೆ ಹಾಗೂ ಸೇವೆಗಳನ್ನು ಖಾಸಗೀಕರಿಸುವ ಸರ್ಕಾರದ ಧೋರಣೆಯನ್ನು ಸಿಪಿಐ(ಎಂ) ಆಂಧ್ರಪ್ರದೇಶ ರಾಜ್ಯ ಸಮಿತಿ ಖಂಡಿಸಿದೆ. ಈಗಾಗಲೇ ಅನೇಕ ಹೋರಾಟಗಳನ್ನು ನಡೆಸಲಾಗಿದ್ದು ಖಾಸಗೀಕರಣ ಮಾಡಬಾರದೆಂಬ ಮನವಿಗೆ ಕಿವಿಗೊಡದಿದ್ದರೆ ಇನ್ನಷ್ಟು ತೀವ್ರ ಚಳುವಳಿಗಳನ್ನು ನಡೆಸಬೇಕಾದೀತೆಂದು ಸಮಿತಿ ಎಚ್ಚರಿಕೆ ನೀಡಿದೆ.

ಖಾಸಗೀಕರಿಸುವ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಮುನ್ನ ಸರ್ಕಾರ ಎಲ್ಲಾ ರಾಜಕೀಯ ಪಕ್ಷಗಳ, ರೈತರು, ಕಾರ್ಮಿಕರು ಮತ್ತು ಇತರ ವಿಭಾಗಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ತನ್ನ ಮರಿ ಕಾಗೆ ಮರಿ, ಪರರ ಮರಿ ಗುಬ್ಬಿ ಮರಿ!

ತನ್ನ ಮರಿ ಕಾಗೆ ಮರಿ, ಪರರ ಮರಿ ಗುಬ್ಬಿ ಮರಿ! ಆದರೆ ಇದೇನಿದು? ತನ್ನ ಮರಿ ಗುಬ್ಬಿ ಮರಿ - ಪರರ ಮರಿ ಕಾಗೆ ಮರಿ ಎಂಬ ನಾಣ್ಣುಡಿ ಉಲ್ಟಾ ಪಲ್ಟಾ ಆಗಿದೆಯಲ್ಲ! ಕೇಂದ್ರ ಸರ್ಕಾರದ ಒಂದು ಕ್ರಮ ಇದಕ್ಕೆ ಪ್ರೇರಣೆ ಕೊಟ್ಟಿದೆ!!

ಸಾರ್ವಜನಿಕರಂಗದ ಹಲ್ದಿಯಾರಸಗೊಬ್ಬರ ಸ್ಥಾವರವನ್ನು ಮುಚ್ಚಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಕಾರ್ಖಾನೆ ರೋಗಗ್ರಸ್ತವಾಗಿದೆ ಎಂದು ಇದಕ್ಕೆ ಕಾರಣ ನೀಡಿದೆ. ಆದರೆ ಸರಕಾರಿ ರಂಗದ ಇನ್ನೊಂದು ರಸಗೊಬ್ಬರ ಸಂಸ್ಥೆಯಾದ ಕೃಷಿಕ ಭಾರತಿ ಸಹಕಾರಿ ಕಂಪನಿ ಅಮೇರಿಕದ ಒಂದು ಹಾಗೂ ರಷ್ಯಾದ ಎರಡು ರೋಗಗ್ರಸ್ತ ರಸಗೊಬ್ಬರ ಘಟಕಗಳಿಗೆ ಮರುಜೀವ ಕೊಡಲು ಮುಂದಾಗಿದೆ.

ಹಿಂದೂಸ್ತಾನ್ ರಸಗೊಬ್ಬರ ನಿಗಮಕ್ಕೆ ಸೇರಿದ ಹಲ್ದಿಯಾ ಘಟಕವನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರಕಾರ ತೀರಾ ನಿರ್ಲಕ್ಷ್ಯ ತೋರಿಸುತ್ತಿದೆ. ಹಾಲ್ದಿಯಾ ಘಟಕಕ್ಕಾಗಿ ಸುಮಾರು 600 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ವಿದೇಶಗಳಲ್ಲಿ ರಸಗೊಬ್ಬರ ಕಾರ್ಖಾನೆಗಳ ಪುನರುಜ್ಜೀವನಕ್ಕೆ ಸರಕಾರ ಎಷ್ಟು ಹಣ ಹೂಡಲಿದೆ ಎಂದು ರಾಜ್ಯ ಸಭೆಯ ಸಿಪಿಐ(ಎಂ) ಸದಸ್ಯರಾದ ದೀಪಂಕರ್ ಮುಖರ್ಜಿ ಮತ್ತು ಮಹಮದ್ ಸಲೀಂ ಕೇಳಿದ ಪ್ರಶ್ನೆಗಳಿಗೆ ರಸಗೊಬ್ಬರ ಮತ್ತು ರಾಸಾಯನಿಕ ಖಾತೆ ಸಚಿವ ರಾಮ ಲಖನ್ ಸಿಂಗ್ ಯಾದವ್ ಸರಿಯಾಗಿ ಉತ್ತರಿಸದೆ ನುಣುಚಿ ಕೊಂಡಿದ್ದಾರೆ.

ವಿದೇಶಗಳಲ್ಲಿ ಕಾರ್ಖಾನೆ ಸ್ಥಾಪನೆ

ಸಾರ್ವಜನಿಕ ರಂಗದ ರಸಗೊಬ್ಬರ ಕಂಪೆನಿಗಳು ಪರದೇಶಗಳಲ್ಲಿ ರಸಗೊಬ್ಬರ ಕಾರ್ಖಾನೆಗಳನ್ನು ಸ್ಥಾಪಿಸುವ ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತಿವೆ. ಇದು ಇನ್ನು ಹೆಚ್ಚು ಆಶ್ಚರ್ಯಕರ ವಿಷಯವಾಗಿದೆ.

ರಾಷ್ಟ್ರೀಯ ರಾಸಾಯನಿಕ ರಸಗೊಬ್ಬರ ಕಂಪೆನಿ, ರಾಷ್ಟ್ರೀಯ ರಸಗೊಬ್ಬರ ಕಂಪೆನಿ, ಕೃಷಿಕ ಭಾರತಿ ಕಂಪೆನಿಗಳು ಪಶ್ಚಿಮ ಏಷ್ಯಾ, ಸಿರಿಯಾ, ಜರ್ಮನ್ ಮತ್ತು ಇರಾನ್ ಗಳಲ್ಲಿ ಜಂಟಿ ಕ್ಷೇತ್ರದ ರಸಗೊಬ್ಬರ ಸ್ಥಾವರಗಳ ಸ್ಥಾಪನೆಯಲ್ಲಿ ಬಂಡವಾಳ ಹೂಡಲು ಮುಂದಾಗಿವೆ. ಆದರೆ ಹಣವಿಲ್ಲ ಎಂಬ ನೆಪ ಮುಂದೊಡ್ಡಿ ದೇಶಿಯವಾದ ಹಾಲ್ದಿಯಾ ರಸಗೊಬ್ಬರ ಸ್ಥಾವರವನ್ನು ಮುಚ್ಚಲು ಸರಕಾರ ಮುಂದಾಗಿರುವುದು ವಿಷಾದಕರ ಗೋರಖಪುರ ರಸಗೊಬ್ಬರ ಘಟಕವನ್ನು ಕೂಡಾ ಕೇಂದ್ರ ಸರಕಾರ ಈಗಾಗಲೇ ವಿಸರ್ಜಿಸಿದೆ ಎನ್ನಲಾಗಿದೆ.

ಸರಕಾರದ ಈ ದ್ವಂದ್ವ ನೀತಿಯನ್ನು ರಸಗೊಬ್ಬರ ಉದ್ಯಮ ನೌಕರರು, ಟ್ರೇಡ್ ಯೂನಿಯನ್ ಗಳು ಮತ್ತು ತಂತ್ರಜ್ಞರು ಟೀಕಿಸಿದ್ದಾರೆ.

ಕಾನೂನು ಏನನ್ನುತ್ತದೆ?

ರೋಗಗ್ರಸ್ತ ಕೈಗಾರಿಕೆಗಳ ಕಾನೂನಿನ ಪ್ರಕಾರ ಯಾವುದೇ ಒಂದು ಉದ್ಯಮ ರೋಗಗ್ರಸ್ತವಾಗಿದ್ದರೆ ಬಲವಾದ ಬೇರೆ ಕೈಗಾರಿಕೆ ಅದನ್ನು ವಹಿಸಿಕೊಳ್ಳಬಹುದಾಗಿದೆ. ಆದರೆ,ದುರದೃಷ್ಟವಶಾತ್ ಬಿಕ್ಕಟ್ಟಿಗೆ ಸಿಲುಕಿರುವ ರಸಗೊಬ್ಬರ ಸ್ಥಾವರಗಳನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರಕಾರ ಒಂದಿಷ್ಟೂ ಆಸಕ್ತಿ ತೋರುತ್ತಿಲ್ಲ.

ಇದರ ಪರಿಣಾಮ ಏನಾಗುತ್ತಿದೆ ಗೊತ್ತೆ? ಸರಕಾರದ ನೀತಿಯಿಂದ ಭಾರೀ ಅಪಾಯ ಎದುರಾಗಲಿದೆ. ಯಾಕೆಂದರೆ ಪ್ರತಿವರ್ಷ ಕೋಟ್ಯಾಂತರ ರೂಪಾಯಿಯನ್ನು ಖರ್ಚು ಮಾಡಿ ದೊಡ್ಡ ಪ್ರಮಾಣದಲ್ಲಿ ರಸಗೊಬ್ಬರವನ್ನು ಆಮದುಮಾಡಿಕೊಳ್ಳಬೇಕಾಗುತ್ತದೆ. ನಮ್ಮಲ್ಲೇ ಉತ್ಪಾದನೆ ಸಾಧ್ಯವಿರುವಂಥ ವಸ್ತುವಿಗಾಗಿ ಅಮೂಲ್ಯ ವಿದೇಶೀ ವಿನಿಮಯವನ್ನು ವ್ಯಯಿಸುವ ಪ್ರಸಂಗ ಎದುರಾಗುತ್ತದೆ.

ಸಂತ್ರಸ್ತರಿಗೆ ನೆರವು: ಕೇಂದ್ರ ನಿರ್ಲಕ್ಷ್ಯಕ್ಕೆ ತ್ರಿಪುರಾ ಖಂಡನೆ

ಬರಪೀಡಿತ ಪ್ರದೇಶಗಳ ಸಂತ್ರಸ್ತ ಜನರ ಸಾಲವನ್ನು ಮನ್ನಾ ಮಾಡಬೇಕೆಂಬುದು ಸೇರಿದಂತೆ ಬರಪೀಡಿತ ಜನರಿಗೆ ಒದಗಿಸಬೇಕಾದ ಪರಿಹಾರಕ್ಕೆ ಸಂಬಂಧಿಸಿದ ನೀತಿ ನಿಯಮವನ್ನು ತಕ್ಷಣದಿಂದ ಜಾರಿಗೊಳಿಸಲು ತ್ರಿಪುರಾ ಸಚಿವ ಸಂಪುಟ ನಿರ್ಧರಿಸಿದೆ. 1994ರಲ್ಲಿ 21 ಕೋಟಿ ರೂ. ಮೌಲ್ಯದ ಬೆಳೆ ನಷ್ಟವಾಗಿರುವುದಲ್ಲದೆ ಈ ವರ್ಷವೂ ಬರಗಾಲದಿಂದಾಗಿ ಭಾರೀ ನಷ್ಟ ಆಗುತ್ತಲೇ ಇದೆ. ಆದರೂ ರಾಜ್ಯಕ್ಕೆ ಆರ್ಥಿಕವಾಗಿ ನೆರವಾಗಬೇಕೆಂಬ ರಾಜ್ಯ ಸರಕಾರದ ಮೊರೆಯನ್ನು ಕೇಂದ್ರ ಸರಕಾರ ಕಿವಿಗೇ ಹಾಕಿಕೊಳ್ಳದಿರುವುದನ್ನು ಸಂಪುಟ ಖಂಡಿಸಿದೆ.

ಈ ವಿಷಯದ ಬಗ್ಗೆ ಆದು ಮತ್ತೆ ಕೇಂದ್ರ ಸರಕಾರದೊಂದಿಗೆ ಚರ್ಚೆ ನಡೆಸಲಿದೆ. ರಾಜ್ಯದ ಪ್ರಕೃತಿ ಸಂಪತ್ತನ್ನು ಬಳಸಿಕೊಳ್ಳದ ನಿಟ್ಟಿನಲ್ಲಿ ಸಂಪುಟ ಖಂಡಿಸಿದೆ.

ಈ ವಿಷಯದ ಬಗೆಗೆ ಅದು ಮತ್ತೆ ಕೇಂದ್ರ ಸರಕಾರದೊಂದಿಗೆ ಚರ್ಚೆ ನಡೆಸಲಿದೆ.

ರಾಜ್ಯದ ಪ್ರಕೃತಿ ಸಂಪತ್ತನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಸಚಿವ ಸಂಪುಟ ಮಹತ್ವದ ತೀರ್ಮಾನಗಳನ್ನು ಕೈಗೊಂಡಿದೆ.

ಏಪ್ರಿಲ್ ತಿಂಗಳಲ್ಲಿ ಭದ್ರತಾ ಪಡೆ ಸಿಬ್ಬಂದಿಯಿಂದ ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರ ಒದಗಿಸಲು ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು- ತ್ರಿಪುರಾ ಸಂಪುಟ ನಿರ್ಣಯ ಕೈಗೊಂಡಿದೆ.

ಉತ್ತರ ಪ್ರದೇಶ ಮೈತ್ರಿಕೂಟದಲ್ಲಿ ಬಿಕ್ಕಟ್ಟು

ಇತ್ತೀಚಿನ ಪಂಚಾಯತಿ ಚುನಾವಣೆಗಳ ಹಿನ್ನಲೆಯಲ್ಲಿ ಸಂಭವಿಸಿದ ವಿದ್ಯಮಾನಗಳಿಂದ ಉತ್ತರ ಪ್ರದೇಶದ ಸಮಾಜವಾದಿ ಪಕ್ಷ (ಎಸ್.ಪಿ.)-ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ.) ನಡುವಿನ ಸಂಬಂಧ ಹದಗೆಟ್ಟಿದೆ.

ಮುಖ್ಯಮಂತ್ರಿ ಮುಲಾಯಂ ಸಿಂಗ್ ನೇತೃತ್ವದ ಎಸ್.ಪಿ.ಯ ಬೆಂಬಲಿಗರು ಕಾನ್ಶಿರಾಂ ಮುಖಂಡತ್ವದ ಬಿ.ಎಸ್.ಪಿ.ಯ ಕಾರ್ಯಕರ್ತರನ್ನು ಅಪಹರಿಸಿ ಹಿಂಸೆ ನೀಡಿದ ಹಲವು ಪ್ರಕರಣಗಳು ವರದಿಯಾಗಿವೆ. ಇಷ್ಟು ಮಾತ್ರವಲ್ಲ ಒಂದು ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಸಿಪಿಐನ ಮಹಿಳಾ ಅಭ್ಯರ್ಥಿಯನ್ನು ಎಸ್.ಪಿ. ಬೆಂಬಲಿಗರು ಅಪಹರಿಸಿದ್ದರು.

ಆಳುವ ಕೂಟದ ಪ್ರಮುಖ ಪಕ್ಷವಾದ ಎಸ್.ಪಿ.ಯ ಕೃತ್ಯಗಳಿಂದ ರೋಸಿ ಹೋಗಿರುವ ಬಿ.ಎಸ್.ಪಿ. ಸಂಬಂಧವನ್ನು ಕಡಿದು ಕೊಳ್ಳಲು ಆಲೋಚಿಸುತ್ತಿದೆ. ಕೆಲವೇ ದಿನಗಳಲ್ಲಿ ಕಾನ್ಶಿರಾಂ ಈ ಸಂಬಂಧ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ.

ದೇಶದಲ್ಲಿ ರಾಜಕೀಯವಾಗಿ ಪ್ರಾಮುಖ್ಯ ಪಡೆದಿರುವ ಮುಖ್ಯ ರಾಜ್ಯಗಳಲ್ಲಿ ಒಂದಾಗಿರುವ ಉತ್ತರ ಪ್ರದೇಶದ ಈಗಿನ ವಿದ್ಯಮಾನದತ್ತ ಇಡೀ ದೇಶದಗಮನ ಹೋಗಿದೆ.

ಜಾತಿ ಆಧಾರಿತ ರಾಜಕಾರಣ ಮಾಡುವತ್ತ ದಾಪುಗಾಲು ಹಾಕಿದ ಎಸ್.ಪಿ. -ಬಿ.ಎಸ್.ಪಿ. ಮೈತ್ರಿಕೂಟದಲ್ಲಿ ಇಷ್ಟು ಬೇಗನೇ ಭಾರೀ ಬಿರುಕು ಉಂಟಾಗುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ.

ನೋಟ್ ಪುಸ್ತಕ, ಪಠ್ಯ ಪುಸ್ತಕಗಳ ಬೆಲೆಯೇರಿಕೆಗೆ ಎಸ್.ಎಫ್.ಐ. ಪ್ರತಿಭಟನೆ

ಎಂ.ಎಸ್.ಐ.ಎಲ್. ನಿಂದ ಸರಬರಾಜಾಗುವ ವಿದ್ಯಾ ಲೇಬಲ್ ನೋಟ್ ಪುಸ್ತಕಗಳ ಬೆಲೆಯನ್ನು ಸುಮಾರು ಎರಡು ಪಟ್ಟು ಹೆಚ್ಚಿಸಿ ವಿದ್ಯಾರ್ಥಿಗಳ ಮೇಲೆ ದೊಡ್ಡ ಹೊರೆಯೇ ಹೊರಿಸಲಾಗಿದೆ. ಹೆಚ್ಚುತ್ತಿರುವ ಶುಲ್ಕಗಳು, ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿಕೆಯಿಂದ ಬಿಗಡಾಯಿಸುತ್ತಿರುವ ಕೌಟುಂಬಿಕ ಪರಿಸ್ಥಿತಿಯಂತಹ ಸಂಕಷ್ಟದ ಈ ದಿನಗಳಲ್ಲಿ ಈ ರೀತಿಯಾಗಿ ನೋಟ್ ಪುಸ್ತಕಗಳ ಮತ್ತು ಪಠ್ಯಪುಸ್ತಕಗಳ ಬೆಲೆ ಏರಿಸಿರುವುದನ್ನು ವಿರೋಧಿಸಿ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಲಿ ಪೋಷಕರ ಆತಂಕವನ್ನು ಸ್ವಲ್ಪವಾದರೂ ಕಡಿಮೆ ಮಾಡಬೇಕೆಂದು ಆಗ್ರಹಿಸಿದೆ. ಪಠ್ಯ ಪುಸ್ತಕಗಳು ಶಾಲಾ ಕಾಲೇಜು ಪ್ರಾರಂಭದ ಹಂತದಲ್ಲೇ ದೊರಕುವಂತೆ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದೆ.

ಮೇ 2 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಮಂಡಲಿ ರಿಯಾಯ್ತಿ ಬಸ್ ಪಾಸ್ ಕುರಿತು ಹಾಗೂ ಹಾಸ್ಟೆಲ್ ಗಳನ್ನು ಶೀಘ್ರವಾಗಿ ಪ್ರಾರಂಭಿಸಲು ಒತ್ತಾಯಿಸಿ ನಿರ್ಣಯಗಳನ್ನು ಅಂಗೀಕರಿಸಿದೆ. ಎಸ್.ಎಫ್.ಐ ಅಖಿಲ ಭಾರತ ಅಧ್ಯಕ್ಷರಾದ ವೈ. ವೆಂಕಟರಾವ್ ಅವರು ಸಭೆಯಲ್ಲಿ ಹಾಜರಿದ್ದರು.

ವಿದ್ಯಾರ್ಥಿಗಳಿಗೆ ನೀಡುತ್ತಿರುವ ರಿಯಾಯ್ತಿ ಬಸ್ ಪಾಸ್ ವ್ಯವಸ್ಥೆಯನ್ನು ನಾಶಮಾಡುವ ಹಿನ್ನೆಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಆಡಳಿತ ಮಂಡಳಿ ಮತ್ತು ರಾಜ್ಯ ಸರ್ಕಾರವು ತೀವ್ರವಾಗಿ ಯೋಚಿಸುತ್ತಿರುವುದನ್ನು ಎಸ್.ಎಫ್.ಐ. ಖಂಡಿಸಿದೆ. ವಿದ್ಯಾರ್ಥಿಗಳಿಗೆ ಸಿಗುವ ಈ ಅವಕಾಶವನ್ನು ಯಾವುದೇ ಕಾರಣದಿಂದಲೂ ಅಡ್ಡಿಪಡಿಸಬಾರದೆಂದು ಸರ್ಕಾರವನ್ನು ಎಚ್ಚರಿಸಿದೆ. ಕಳೆದ ವರ್ಷ ಇದೇ ರೀತಿಯ ಮೂರ್ಖ ಕ್ರಮವನ್ನು ಅನುಸರಿಸಿದ ಕಾಂಗ್ರೆಸ್ ಸರ್ಕಾರಕ್ಕೆ ವಿದ್ಯಾರ್ಥಿ ಯುವಜನ ಸರಿಯಾದ ಪಾಠವನ್ನು ಕಲಿಸಿದ್ದಾರೆ ಎಂಬುದನ್ನು ಇಂದಿನ ಸರಕಾರ ಗಮನದಲ್ಲಿಟ್ಟುಕೊಳ್ಳಬೇಕು ಎಂದಿದೆ.

ಪ್ರಯಾಣದ ದೂರವನ್ನು 40 ಕಿ.ಮೀ ನಿಂದ 20ಕ್ಕೆ ಇಳಿಸುವುದು, ವಾಸಮಾಡುವ ಪ್ರದೇಶದಲ್ಲಿ ಕಾಲೇಜಿದ್ದರೆ ಅಲ್ಲಿರುವ ವಿದ್ಯಾರ್ಥಿಗಳಿಗೆ ಬೇರೆ ಕಡೆಗೆ (ಕಾಲೇಜಿಗೆ) ಪಾಸ್ ಕೊಡುವುದಿಲ್ಲ ಎನ್ನುವುದು, ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾಸ್ ರದ್ದು ಮಾಡುವ ಯೋಚನೆ ಮುಂತಾದ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಕೈ ಬಿಡಬೇಕೆಂದು ಎಸ್.ಎಫ್.ಐ. ಆಗ್ರಹಿಸಿದೆ. ಅಲ್ಲದೆ ಹೈ ಸ್ಕೂಲ್ ವಿದ್ಯಾರ್ಥಿಗಳಿಗೆ ಈಗ ಕೊಡುತ್ತಿರುವ ಕೂಪನ್‌ಗಳ ಪದ್ಧತಿಯನ್ನು ಕೈಬಿಟ್ಟು ಹಿಂದಿನ ರೀತಿಯಲ್ಲಿ ಪಾಸ್ ಕಾರ್ಡ್ ಗಳನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಜಾರಿಗೆ ತರಬೇಕೆಂದು ಒತ್ತಾಯಿಸಿದೆ. ಈ ಮೂಲಕ ಸಾರಿಗೆ ಆದಾಯವೂ ಗಣನೀಯವಾಗಿ ಹೆಚ್ಚುಹುದು ಎಂದು ಅದು ಹೇಳಿದೆ.

ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಹಾಸ್ಟೆಲ್‌ಗಳನ್ನು ಪ್ರಾರಂಭಿಸಬೇಕು ಹಾಗೂ ಎಲ್ಲಾ ಶೈಕ್ಷಣಿಕ ಕೇಂದ್ರಗಳಲ್ಲಿ ಹಾಸ್ಟೆಲ್ ಗಳನ್ನು ಪ್ರಾರಂಭಿಸಬೇಕೆಂದು ಎಸ್.ಎಫ್.ಐ. ಒತ್ತಾಯಿಸಿದೆ.

ಈ ಮೇಲಿನ ಬೇಡಿಕೆಗಳ ಕುರಿತು ಸರ್ಕಾರ ತಕ್ಷಣ ಗಮನ ನೀಡದಿದ್ದರೆ ಜೂನ್ 12 ರಿಂದ 15ರವರೆಗೆ ಕೋಲಾರದಲ್ಲಿ ನಡೆಯುವ ರಾಜ್ಯ ಮಟ್ಟದ ಶಿಬಿರದಲ್ಲಿ ನಿರ್ದಿಷ್ಟವಾದ ಹೋರಾಟ ಕಾರ್ಯಕ್ರಮವನ್ನು ರೂಪಿಸಲಾಗುವುದು ಎಂದು ಎಸ್.ಎಫ್.ಐ. ರಾಜ್ಯ ಸಮಿತಿ ತಿಳಿಸಿದೆ.

ಜಿಲ್ಲಾಧಿಕಾರಿಗಳ ವರ್ಗಾವಣೆ ಡಿ.ವೈ.ಎಫ್.ಐ. ವಿಜಾಪುರ ಘಟಕ ಸ್ವಾಗತ

ವಿಜಾಪುರ: ವಿಜಾಪುರ ಜಿಲ್ಲಾಧಿಕಾರಿಗಳಾದ ಆಶೋಕ್ ಕುಮಾರ್ ಮನೋಲಿ ಇವರನ್ನು ಇಲ್ಲಿಂದ ವರ್ಗಾವಣೆ ಮಾಡಿರುವ ಸರಕಾರದ ಕ್ರಮವನ್ನು ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಸದಾನಂದ ಮೋದಿ ಹಾಗೂ ಸಹಕಾರ್ಯದರ್ಶಿ ಎಂ.ಎ. ಮೊಕಾಶಿ ಸ್ವಾಗತಿಸಿದ್ದಾರೆ.

ಆಶೋಕ್ ಕುಮಾರ್ ಮನೋಲಿ ಇವರು ಈ ಹಿಂದೆ ಗುಲಬರ್ಗಾದ ಜಿಲ್ಲಾಧಿಕಾರಿಗಳಾದ ಸಂದರ್ಭದಲ್ಲಿ ದಲಿತ ಕಾರ್ಯಕರ್ತರು ಹಾಗೂ ಎಡಪಕ್ಷಗಳ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್, ಗೋಲಿಬಾರ್ ದಂತಹ ದೌರ್ಜನ್ಯವೆಸಗಿ ದಲಿತ ಹಾಗೂ ಎಡ ಚಳುವಳಿಯನ್ನು ಮುರಿಯಲು ಪ್ರಯತ್ನಿಸಿ ವಿಫಲವಾಗಿ ವಿಜಾಪೂರಕ್ಕೆ ವರ್ಗವಾಗಿ ಬಂದಾಗಿನಿಂದಲೂ ಇಲ್ಲಿಯೂ ಎಡ ಚಳುವಳಿಯನ್ನು ಮುರಿಯಲು ಪ್ರಯತ್ನಿಸುತ್ತಿರುವಾಗಲೇ ಇವರನ್ನು ಸರಕಾರ ಇಲ್ಲಿಂದ ವರ್ಗ ಮಾಡಿರುವುದು ಸ್ವಾಗತಾರ್ಹವೆಂದು ಸದಾನಂದ ಮೋದಿ ಹಾಗೂ ಮೊಕಾಶಿಯವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಲೋಕ ಸಂಚಾರ

ಶರತ್ಚಂದ್ರ

ಅಣ್ವಸ್ತ್ರ ತಾರತಮ್ಯಕ್ಕೆ ಶಾಶ್ವತ ಮುದ್ರೆ?

ಅನ್ಯಾಯಯುತ ಅಣ್ವಸ್ತ್ರ ಪ್ರಸಾರ ನಿಷೇಧ ಒಪ್ಪಂದ ಶಾಶ್ವತ ಮುಂದುವರಿಕೆ

ನ್ಯೂಯಾರ್ಕಿನಲ್ಲಿ ಅಣ್ವಸ್ತ್ರ ಪ್ರಸಾರ ನಿಷೇದ ಒಪ್ಪಂದದ ಪುನರ್ವಿಮರ್ಶೆಗಾಗಿ ಸೇರಿದ್ದ ಸಮ್ಮೇಳನ, ಆ ಒಪ್ಪಂದವನ್ನು ಅನಿರ್ದಿಷ್ಟ ಕಾಲ ಮುಂದುವರೆಸುವ ಮೂಲಕ, ಈ ತಾರತಮ್ಯವನ್ನು ಶಾಶ್ವತಗೊಳಿಸಿದೆ. ಹಲವು ವಾರಗಳ ಕಾಲ ನಡೆದ ಈ ಸಮ್ಮೇಳನ ಅಣ್ವಸ್ತ್ರ ಉಳ್ಳವರ-ಇಲ್ಲದವರ ನಡುವೆ ತೀವ್ರ ಘರ್ಷಣೆ ಕಂಡಿತ್ತು. 1970 ರಲ್ಲಿ ಮೊದಲು ಭಾರಿ 150ಕ್ಕೂ ಹೆಚ್ಚು ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿದ್ದವು, ಇದರ ಪ್ರಕಾರ ಈಗಾಗಲೇ ಅಣ್ವಸ್ತ್ರಗಳನ್ನು ಹೊಂದಿರುವ ಐದು ದೇಶಗಳು (ಅಮೇರಿಕ, ರಶ್ಯಾ, ಫ್ರಾನ್ಸ್, ಬ್ರಿಟನ್, ಚೀನಾ) ತಮ್ಮ ಅಣ್ವಸ್ತ್ರಗಳಲ್ಲಿ ಯಾವುದೇ ಕಡಿತ ಮಾಡಬೇಕಾಗಿಲ್ಲ. ಆ ದೇಶಗಳ ಅಣುಶಕ್ತಿ ಕಾರ್ಯಕ್ರಮದ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ. ಆದರೆ ಈ ಐದು ಅಣ್ವಸ್ತ್ರ ಉಳ್ಳ ದೇಶಗಳನ್ನು ಬಿಟ್ಟು ಉಳಿದ ದೇಶಗಳು ಅಣ್ವಸ್ತ್ರ ಹೊಂದುವಂತಿಲ್ಲ. ಅಷ್ಟುಮಾತ್ರವಲ್ಲ ಶಾಂತಿಯುತ ಅಣುಶಕ್ತಿ ಕಾರ್ಯಕ್ರಮದ ಎಲ್ಲಾ ಘಟಕಗಳನ್ನು ಕೂಡಾ ಅಂತರ್ರಾಷ್ಟ್ರೀಯ ತಪಾಸಣೆಗೆ ಒಳಪಡಿಸಬೇಕು. ಎಲ್ಲಾ ಅಣು ಇಂಧನಗಳ ಲೆಕ್ಕ ಒಪ್ಪಿಸಬೇಕು. ಈ ದೇಶಗಳಿಗೆ ಕಾನೂನು ಬದ್ದ ಶರತ್ತು. ಒಪ್ಪಂದದ ಪ್ರಕಾರ ಎಲ್ಲಾ ಅಣ್ವಸ್ತ್ರಗಳನ್ನು ಜಗತ್ತಿನಿಂದ ಹೋಗಲಾಡಿಸುವುದು ಅಂತಿಮ ಗುರಿ. ಆದರೆ ಆ ಅಂತಿಮ ಗುರಿಯತ್ತ ಅಣ್ವಸ್ತ್ರ ಇರುವ ದೇಶಗಳ ಮೇಲೆ ಅವನ್ನು ಕಡಿಮೆ ಮಾಡುವ, ಅಣ್ವಸ್ತ್ರ ಸಂಬಂಧಿತ ಚಟುವಟಿಕೆ ಮೇಲೆ ತಪಾಸಣೆ ಮಾಡುವ, ನಿರ್ಬಂಧ ಹಾಕುವ ಯಾವುದೇ ಕಾನೂನು ಬದ್ಧ ಕ್ರಮಗಳಿಲ್ಲ. ವಾರ್ಷಿಕ ಅಣ್ವಸ್ತ್ರ ಪರೀಕ್ಷಣೆಗಳ ಮೇಲೂ ಯಾವುದೇ ನಿರ್ಬಂದಗಳಿಲ್ಲ. ಅದನ್ನು ಆ ಐದು ದೇಶಗಳ ಸ್ವಇಚ್ಛೆ ಮೇಲೆ ಬಿಡಲಾಗಿದೆ. ಇದಕ್ಕಿಂತ ಹೆಚ್ಚಿನ ಅನ್ಯಾಯಯುತ ಒಪ್ಪಂದ ಬೇರೆ ಇರಲು ಸಾಧ್ಯವೇ? ಇದರಿಂದಾಗಿ ಭಾರತ ಈ ಒಪ್ಪಂದವನ್ನು ವಿರೋಧಿಸಿ, ಅದಕ್ಕೆ ಸಹಿ ಹಾಕಲು ನಿರಾಕರಿಸಿತ್ತು. ಎಲ್ಲಾ ಅಣ್ವಸ್ತ್ರಗಳನ್ನು ನಾಶ ಮಾಡಲು ನಿಗದಿತ ಅವಧಿಯ ಒಪ್ಪಂದ, ಅಣ್ವಸ್ತ್ರ ಪರೀಕ್ಷಣೆಯ ತಕ್ಷಣ ನಿಲುಗಡೆ. ಇದಕ್ಕೆ ಅಣ್ವಸ್ತ್ರ ಇರುವ ದೇಶಗಳು ಕಾನೂನು ಬದ್ಧ ಶರತ್ತುಗಳಿರುವ ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧವಿದ್ದರೆ ತಾನು ಬದ್ಧ ಎಂದು ಭಾರತ ಸಾರಿತ್ತು.

1970 ರ ಒಪ್ಪಂದದ ಪ್ರಕಾರ 25 ವರ್ಷಗಳ ನಂತರ, ಈ ಒಪ್ಪಂದವನ್ನು ಇನ್ನೂ 25 ವರ್ಷಗಳ ಕಾಲ ಮುಂದುವರೆಸುವ ಅಥವಾ ಶಾಶ್ವತವಾಗಿ ಅನಿರ್ಧಿಷ್ಟವಾಗಿ ಮುಂದುವರೆಸುವ ಬಗ್ಗೆ ಎಲ್ಲಾ ದೇಶಗಳು ಸಮ್ಮೇಳನ ಕರೆದು ನಿರ್ಧರಿಸಬೇಕು ಎಂದಿದೆ. ಈಗ ನಡೆದ ಸಮ್ಮೇಳನ ಅದರ ಪ್ರಕಾರ ನಡೆದ ಸಮ್ಮೇಳನ. ಈ ಸಭೆ ಸೇರಿದಾಗ ಹೆಚ್ಚಿನ ಮೂರನೇ ಜಗತ್ತಿನ ದೇಶಗಳು ಒಪ್ಪಂದವನ್ನು 25 ವರ್ಷಕ್ಕೆ ಮಾತ್ರ ಮುಂದುವರಿಸಬೇಕು. ಅಣ್ವಸ್ತ್ರ ಹೊಂದಿರುವ ದೇಶಗಳು ಅಣ್ವಸ್ತ್ರಗಳನ್ನು ಕಡಿಮೆ ಮಾಡಿ, ಕೊನೆಗೆ ಸಂಪೂರ್ಣವಾಗಿ ಇಲ್ಲವಾಗಿಸುವುದಕ್ಕೆ ಅವಧಿ ನಿಗಧಿಮಾಡಬೇಕು. ಆ ಬಗ್ಗೆ ಈ ದೇಶಗಳು ಸ್ವಚ್ಛ ಭರವಸೆ ನೀಡಬೇಕು ಎಂದು ಅಭಿಪ್ರಾಯ ಹೊಂದಿದ್ದವು. ಪಾಶ್ಚಿಮಾತ್ಯ ದೇಶಗಳು ಅದರಲ್ಲೂ ಅಮೇರಿಕ ಇದಕ್ಕೆ ಒಪ್ಪಲು ತಯಾರಿರಲಿಲ್ಲ. ಅದರ ಬದಲಾಗಿ ಈ ಒಪ್ಪಂದವನ್ನು ಈಗಿದ್ದಂತೆ ಶಾಶ್ವತವಾಗಿ ಅನಿರ್ದಿಷ್ಟ ಕಾಲ ಮುಂದುವರೆಸಬೇಕು. ಎಂಬ ಬಗ್ಗೆ ಎಲ್ಲಾ ದೇಶಗಳ ಮೇಲೆ ಬೆದರಿಕೆ, ಒತ್ತಡ ಹಾಕಿತ್ತು. ಈ ಬಗ್ಗೆ ಗುಪ್ತ ಮತದಾನಕ್ಕೂ ವಿರೋಧಿಸಿತು. ಗುಪ್ತ ಮತದಾನ ನಡೆದರೆ ತನ್ನ ಪ್ರಸ್ತಾಪ ಬಿದ್ದು ಹೋಗುವುದು ಖಚಿತ ಎಂದು ಗೊತ್ತಿತ್ತು. ಅದಕ್ಕಾಗಿ ಮತದಾನವಿಲ್ಲದೆ ಸರ್ವಸಮ್ಮತಿಯಿಂದ ತನ್ನ ಪ್ರಸ್ತಾಪ ಮಂಜೂರು ಮಾಡಬೇಕು ಎಂದು ಎಲ್ಲಾ ರೀತಿಯ ಬೆದರಿಕೆ, ಒತ್ತಡಗಳನ್ನು ಹೇರಿತ್ತು. ಇಂಡೋನೇಶ್ಯಾ, ಮಲೇಶ್ಯಾ, ಇರಾನ್, ಅರಬ್ ದೇಶಗಳ ಮೂರನೇ ಜಗತ್ತಿನ ಸಾಮಾನ್ಯ ನೀತಿ ಜಾರಿ ಮಾಡುವ ಪ್ರಯತ್ನ ಅನೈಕ್ಯತೆ ಯಿಂದಾಗಿ ವಿಫಲವಾಯಿತು. ಅಮೇರಿಕದ ಪ್ರಸ್ತಾವಕ್ಕೆ ಈ ಎಲ್ಲಾ ದೇಶಗಳು ಸೇರಿ ಐಕ್ಯ ಪ್ರತಿ-ಪ್ರಸ್ತಾಪ ಇಡಲಿಲ್ಲ. 1996 ರ ಒಳಗೆ ಅಣ್ವಸ್ತ್ರ ಪರೀಕ್ಷಣೆ ನಿಷೇಧಕ್ಕೆ ಪ್ರಯತ್ನಿಸುವುದು ಮಾತ್ರ ಒಪ್ಪಂದದ ಹೊಸ ಅಂಶ. ಈ ಸಮ್ಮೇಳನಕ್ಕೆ ಹಾಜರಾಗದೆ, ಹೊರಗೆ ಉಳಿದ ದೇಶಗಳೆಂದರೆ ಭಾರತ, ಪಾಕಿಸ್ತಾನ ಮತ್ತು ಇಸ್ರೇಲ್. ಈ ಒಪ್ಪಂದಕ್ಕೆ ಇಸ್ರೇಲ್ ಸಹಿ ಹಾಕದೆ ತಾವು ಅದಕ್ಕೆ ಸಹಿ ಹಾಕುವುದಿಲ್ಲ ಎಂದು ಹಟ ಹಿಡಿದಿದ್ದ ಅರಬ್ ದೇಶಗಳನ್ನು ಸಮಾಧಾನಪಡಿಸುವ ನೆಪದಲ್ಲಿ ಒಂದು ಹೊಸ ಅಂಶವನ್ನು ಸೇರಿಸಲಾಯಿತು. ಈ ಒಪ್ಪಂದಕ್ಕೆ ಸಹಿ ಹಾಕದ ದೇಶಗಳೂ ಆದಷ್ಟು ಬೇಗ ಈ ಒಪ್ಪಂದದ ಶರತ್ತುಗಳಿಗೆ ಒಳಪಡಬೇಕು ಎನ್ನುವುದು ಈ ಹೊಸ ಅಂಶ. ಆದರೆ ಇದರಲ್ಲಿ ಇಸ್ರೇಲನ್ನು ಹೆಸರಿಸದೆ ಇರುವುದರಿಂದ ಇದು ಭಾರತ ಪಾಕಿಸ್ತಾನಗಳಿಗೂ ಅನ್ವಯಿಸುತ್ತದೆ. ಇಸ್ರೇಲ್‌ನ್ನೂ ಹೆಸರಿಸದೆ ಇರುವುದು ಅಮೇರಿಕ ಅರಬ್ ದೇಶಗಳಿಗೆ ಮಾಡಿದ ಮೋಸ ಎಂದು ಅರಬ್ ದೇಶಗಳು ದೂರಿವೆ. ಆದರೆ ಈ ಒಪ್ಪಂದವೇ ಮೋಸದ್ದಲ್ಲವೇ? ಗ್ಯಾಟ್ ನಂತರ ಪ್ರಮುಖ ಅಸಮಾನ ಒಪ್ಪಂದಗಳಲ್ಲಿ ಇದೂ ಒಂದು. ಇದರಿಂದ ಅಮೇರಿಕದ ಹಾಗೂ ಅಣ್ವಸ್ತ್ರ ದೇಶಗಳ ಅಧಿಪತ್ಯ ಜಗತ್ತಿನ ಮೇಲೆ ಇನ್ನೂ ಹೆಚ್ಚುವುದು. ಅಣ್ವಸ್ತ್ರ ಪ್ರಸಾರ ಕಡಿಮೆ ಮಾಡುವುದರಲ್ಲಿ, ಶಾಂತಿಗೆ ಅನುವು ಮಾಡಿಕೊಡುವುದರಲ್ಲಿ ಈ ಒಪ್ಪಂದ ಯಾವುದೇ ರೀತಿಯಲ್ಲಿ ಸಹಾಯಕವಾಗುವುದಿಲ್ಲ, ಬದಲಾಗಿ ಇನ್ನೂ ಹೆಚ್ಚಿನ ಅಭದ್ರತೆಗೆ ಎಡೆ ಮಾಡುತ್ತದೆ.

ನೇಪಾಳದಲ್ಲಿ ಮೂರು ಸಾವಿರ ಭೂ ಹೀನರಿಗೆ ಜಮೀನು

ನೇಪಾಳದ ಕಮ್ಯುನಿಸ್ಟ್ ಸರ್ಕಾರ ಜನಪರ ಕಾರ್ಯಗಳನ್ನು ತ್ವರಿತವಾಗಿ ಕೈಗೆತ್ತಿಕೊಂಡಿದೆ. ಪೂರ್ವ ನೇಪಾಳದ ಮೊರಾಂಗ್ ಜಿಲ್ಲೆಯ ಮೂರು ಸಾವಿರ ಭೂಹೀನರಿಗೆ ಭೂಒಡೆತನದ ಸರ್ಟಿಫಿಕೇಟುಗಳನ್ನು ಕೊಡಲಾಯಿತು. ಈ ಜಿಲ್ಲೆಯಲ್ಲಿ ಸುಮಾರು 50 ಸಾವಿರ ಭೂಹೀನರಿದ್ದಾರೆ. ಅವರಿಗೆಲ್ಲಾ ಭೂಒಡೆತನದ ಸರ್ಟಿಫಿಕೇಟುಗಳನ್ನು ವಿತರಿಸುವ ಕೆಲಸ ಭರದಿಂದ ಸಾಗುತ್ತಿದೆ. ಇತರ ಜಿಲ್ಲೆಗಳಲ್ಲೂ ಈ ಕೆಲಸ ತ್ವರಿತವಾಗಿ ಸಾಗಿದೆ. ಈ ತಿಂಗಳ ಒಳಗಾಗಿ ಸುಮಾರು ಒಂದು ಲಕ್ಷ ಭೂಹೀನರಿಗೆ ಭೂಒಡೆತನದ ಸರ್ಟಿಫಿಕೇಟು ಕೊಡಲಾಗುತ್ತದೆ. ಈ ಕೆಲಸವನ್ನು ಸರ್ಕಾರ ಜನವರಿಯಲ್ಲಿ ನೇಮಿಸಿದ ಭೂಸುಧಾರಣಾ ಕಮಿಶನ್ ಮಾಡುತ್ತಿದೆ. ದೇಶದ 75 ಜಿಲ್ಲೆಗಳಲ್ಲಿ ಐದು ಲಕ್ಷ ಭೂಹೀನರಿದ್ದು ಅವರಿಗೆ ನ್ಯಾಯ ಒದಗಿಸುವ ಕೆಲಸ ಕನಿಷ್ಟ ಎರಡು ವರ್ಷಗಳಾದರೂ ತೆಗೆದು ಕೊಂಡಿತು ಎಂದು ಕಮಿಷನ್ ಅಧ್ಯಕ್ಷರು ಹೇಳಿದ್ದಾರೆ. 30 ಜಿಲ್ಲೆಗಳಲ್ಲಿ ತಪಾಸಣೆ, ಸರ್ವೆ ಕೆಲಸಮುಗಿದಿದ್ದು ಇತರ ಜಿಲ್ಲೆಗಳಲ್ಲಿ ತ್ವರಿತ ಗತಿಯಲ್ಲಿ ಮುಂದುವರಿದಿದೆ.

ಇನ್ನೊಂದು ಪ್ರಮುಖ ಹೆಜ್ಜೆಯಾಗಿ, ಕಮ್ಯುನಿಸ್ಟರು ಅಧಿಕಾರಕ್ಕೆ ಬಂದ ಮೇಲೆ ಜುಲೈ 1995ರ ಒಳಗಾಗಿ ಆರೋಗ್ಯ ಸೇವೆ ಹುದ್ದೆಗಳನ್ನು ಎರಡು ಸಾವಿರದಷ್ಟು ಒದಗಿಸಲಾಗುತ್ತದೆ. ಆರೋಗ್ಯ ಸೇವೆಯನ್ನು ಸಾರ್ವತ್ರಿಕ ಗೊಳಿಸುವತ್ತ ಇದು ಪ್ರಮುಖ ಹೆಜ್ಜೆಯಾಗಿದೆ. ನೇಪಾಳದ ಆರೋಗ್ಯ ಸೇವೆ ಯೋಜನೆಯ ಪ್ರಕಾರ ಎಲ್ಲಾ ಹಳ್ಳಿಗಳಲ್ಲಿ ಒಬ್ಬ ಆರೋಗ್ಯ ಸೇವಾಕಾರ್ಯಕರ್ತ, ಒಬ್ಬ ಹೆಂಗೆ ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿಯರಿರುವ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಕಟ್ಟಡ, ಇತ್ಯಾದಿ ಅವಶ್ಯಕತೆಗಳನ್ನು ಗ್ರಾಮ ಸಮಿತಿಗಳು ಒದಗಿಸಬೇಕು. ಸಿಬ್ಬಂದಿಗೆ ಸಂಬಳ, ಔಷಧಿಗಳು, ಉಪಕರಣಗಳನ್ನು ಸರ್ಕಾರ ಒದಗಿಸುವುದು.

ದಕ್ಷಿಣ ಆಫ್ರಿಕಾ ಕಮ್ಯುನಿಷ್ಟ ಪಕ್ಷದ 9ನೇ ಮಹಾಧಿವೇಶನ

ಏಪ್ರಿಲ್ ಮೊದಲ ವಾರದಲ್ಲಿ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ 9ನೇ ಮಹಾಧಿವೇಶನ ಸೊವೆಟೊ ಪಟ್ಟಣದಲ್ಲಿ ಜರುಗಿತು. 30 ಸದಸ್ಯರ ಕೇಂದ್ರ ಸಮಿತಿಯನ್ನು ಮಹಾಧಿವೇಶನ ಆರಿಸಿತು. ಕಳೆದ ಮಹಾಧಿವೇಶನದ ನಂತರ ಪಕ್ಷ ಪ್ರಧಾನಕಾರ್ಯದರ್ಶಿ ಹಾಗೂ ಅಧ್ಯಕ್ಷ ಇಬ್ಬರನ್ನು ಕಳೆದು ಕೊಂಡಿತ್ತು. ಪ್ರಧಾನಕಾರ್ಯದರ್ಶಿ ಕ್ರಿಸ್‌ಹನಿ ಯವರು ಕೊಲೆಯಾದರೆ, ಅಧ್ಯಕ್ಷ ಜೋಟ್ಲೊಪ್ಲೋ ನಿಧನರಾದರು. ಚಾರ್ಲ್ಸ್ ನ್ಯಾಕುಲಾ ಪ್ರಧಾನಕಾರ್ಯದರ್ಶಿಯಾಗಿ ಹಾಗೂ ರೊಮ್ ಮಂಹೆವ್ವೋಲ್ವಾ ಅದ್ಯಕ್ಷರಾಗಿ ಆಯ್ಕೆಯಾದರು.

ಮೂರುದಿನಗಳ ಮಹಾಧಿವೇಶನ ಪಕ್ಷದ ಕಾರ್ಯಯೋಜನೆ ಹಾಗೂ ಕಾರ್ಯತಂತ್ರದ ಬಗೆಗಿನ ದಸ್ತಾವೇಜನ್ನು ಅಂಗೀಕರಿಸಿತು. ಇತರ ಹಲವು ಪ್ರಮುಖ ವಿಚಾರಗಳ ಬಗ್ಗೆ ನಿರ್ಣಯಗಳನ್ನು ಅಂಗೀಕರಿಸಿದ್ದಲ್ಲದೆ, ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ಮಾಡಿತು. ವರ್ಣಬೇಧ ವಿರೋಧಿ ಹೋರಾಟದಲ್ಲಿ ಮಹತ್ತರ ಪಾತ್ರ ವಹಿಸಿದ ಪಕ್ಷ, ಈ ಮುಂದಿನ ಅವಧಿಯಲ್ಲಿ ಇಡೀ ಕಾರ್ಮಿಕವರ್ಗವನ್ನು ಐಕ್ಯಗೊಳಿಸಿ ಪ್ರಜಾಶಕ್ತಿ ವಿಸ್ತರಿಸುವುದು ಹಾಗೂ ಅವರ ಜೀವನಮಟ್ಟ ಎತ್ತರಿಸುವ, ದೇಶದ ಪುನರ್ನಿರ್ಮಾಣ ಹಾಗೂ ಬೆಳವಣಿಗೆಯಲ್ಲಿ ಭಾಗವಹಿಸುವುದು. ಇವನ್ನು ಪ್ರಮುಖ ಕರ್ತವ್ಯವಾಗಿ ಪರಿಗಣಿಸಬೇಕು ಎಂದು ಮಹಾಧಿವೇಶನ ಆದೇಶವಿತ್ತಿದೆ.ದಕ್ಷಿಣ ಆಫ್ರಿಕದ ಅಧ್ಯಕ್ಷ ನೆಲ್ಸನ್ ಮಂಡೇಲಾ ಒಂದು ದಿನ ಮಹಾಧಿವೇಶನದಲ್ಲಿ ಹಾಜರಿದ್ದು 800 ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ANC, SACP ಹಾಗೂ COSATU ಗಳ ನಡುವಣ ಮೈತ್ರಿ ಮುಂದೂವರೆಯಬೇಕು ಆಗ ಮಾತ್ರ ವರ್ಣಬೇಧ ತೊಡೆದು ನಿಜವಾದ ಪ್ರಜಾಪ್ರಭುತ್ವವನ್ನು ದಕ್ಷಿಣ ಆಫ್ರಿಕಾದಲ್ಲಿ ಸ್ಥಾಪಿಸಲು ಸಾಧ್ಯ ಎಂದರು.

ಸುಮಾರು 20 ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಟ್ರೇಡ್‌ಯೂನಿಯನ್ ಗಳು ಹಾಗೂ ರಾಜಕೀಯ ಪಕ್ಷಗಳು ಸೌಹಾರ್ದ ಪ್ರತಿನಿಧಿಗಳನ್ನು ಕಳಿಸಿದ್ದರು. ಪಕ್ಷದ ಸದಸ್ಯತ್ವ ಕಳೆದ ಮಹಾಧಿವೇಶನದ ನಂತರದ ಅವಧಿಯಲ್ಲಿ 20 ಸಾವಿರದಿಂದ 75 ಸಾವಿರಕ್ಕೆ ಹೆಚ್ಚು ಕಡಿಮೆ ನಾಲ್ಕು ಪಟ್ಟು ಏರಿದೆ. ಪಕ್ಷದ ೫೦ ಸದಸ್ಯರು ಪಾರ್ಲಿಮೆಂಟಿಗೆ ಎ.ಎನ್.ಸಿ ಯ ಅಭ್ಯರ್ಥಿಗಳಾಗಿ ಆಯ್ಕೆಯಾಗಿದ್ದಾರೆ. ಇಬ್ಬರು ಮಂತ್ರಿಗಳಿದ್ದಾರೆ. ಒಂಬತ್ತು ರಾಜ್ಯಗಳಲ್ಲಿ ಮೂರು ರಾಜ್ಯಗಳ ಪ್ರಧಾನಮಂತ್ರಿಗಳು ಪಕ್ಷದ ಸದಸ್ಯರು.

ಪ್ರಧಾನ ಕಾರ್ಯದರ್ಶಿಗಳು ಪಕ್ಷದ ಸಂಘಟನಾ ಸಮಸ್ಯೆಗಳ ಬಗ್ಗೆ ಹೇಳುತ್ತಾ, 1990-91ರಲ್ಲಿ ಆರಂಭವಾದ ಹೊಸ ಶಾಖೆಗಳು ನುರಿತ ಸಂಘಟಕರಿಲ್ಲದೆ ಸರಿಯಾಗಿ ಕೆಲಸಮಾಡುತ್ತಿಲ್ಲ, ಪಕ್ಷ ಆರ್ಥಿಕವಾಗಿ ಸ್ವಾವಲಂಬಿಯಾಗಿಲ್ಲ, ಹೆಚ್ಚಿನ ಸದಸ್ಯರನ್ನು ತೆಗೆದು ಕೊಳ್ಳುವ ಬದಲು ಸಂಘಟನೆ ಹಾಗೂ ಕಾರ್ಯಕರ್ತರನ್ನು ಸುಸಂಘಟಿತ ಗೊಳಿಸುವ ಬಗ್ಗೆ ಪಕ್ಷ ಗಮನ ಕೊಡಬೇಕೆಂದರು.

ಜಪಾನ್ ಗ್ಯಾಸ್ ದಾಳಿಯ ಸಂಘಟಕನ ಬಂಧನ

ಜಪಾನಿನ ರಾಜಧಾನಿ ಟೋಕ್ಯೋದಲ್ಲಿ ಭೂಗತ ರೈಲುಗಳಲ್ಲಿ ಗ್ಯಾಸ್ ದಾಳಿಯನ್ನು ಸಂಘಟಿಸಿದ ಓಮ್ ಶಿನರಿಕ್ಯೊ ಎಂಬ ಧಾರ್ಮಿಕ ಸಂಘಟನೆ ಮುಖ್ಯಸ್ಥ ರೊಕೊ ಅಸಹಾರಾನನ್ನು ಪೋಲೀಸರು ಬಂಧಿಸಿದ್ದಾರೆ. 1988 ರಲ್ಲಿ ಈ ಧಾರ್ಮಿಕ ಪಂಥವನ್ನು ಆರಂಭಿಸಿದ ಅಸಹಾರಾರ ಪಂಥದಲ್ಲಿ 10 ಸಾವಿರ ಅನುಯಾಯಿಗಳು ಜಪಾನ್ ನಲ್ಲಿ ಇದ್ದಾರೆ. ರಶ್ಯ, ಜರ್ಮನಿ, ಅಮೇರಿಕಾಗಳಲ್ಲಿ ಆತನ ಅನುಯಾಯಿಗಳಿದ್ದಾರೆ. ಆತನ 200 ಅನುಯಾಯಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಈ ಪಂಥಕ್ಕೆ ಸೇರಿದ ಸುಮಾರು 130 ಬೇರೆ ಬೇರೆ ಕೇಂದ್ರಗಳನ್ನು ಪೋಲೀಸರು ಸುತ್ತುವರಿದಿದ್ದಾರೆ. 12 ಜನ ಸತ್ತು 5 ಸಾವಿರ ಜನರು ಗಾಯಗೊಂಡ ಗ್ಯಾಸ್ ದಾಳಿಯನ್ನು ಸಂಘಟಿಸಿದ ಆಪಾದನೆ ಮೇಲೆ ಇವರನ್ನು ಬಂಧಿಸಲಾಗಿದೆ. ಪೋಲೀಸ್ ತನಿಖೆ ಮುಂದುವರೆಯುತ್ತಿದೆ.

ಸಂಸದೀಯ ವ್ಯವಸ್ಥೆಯಲ್ಲಿ 'ಬದಲಾವಣೆ' ತರುವ ಕೂಗಿನ ಹಿಂದಿರುವದೇನು?

ಪುಟ 5 ರಿಂದ

...ಷ್ಟ್ರೀಯ ಹಣಕಾಸು ಬಂಡವಾಳದ ಕೂಸಾದ ಆರ್ಥಿಕ ಸುಧಾರಣೆಗಳನ್ನು ಮುಂದುವರಿಸಲು ಎಡಪಕ್ಷಗಳ ಬೆಂಬಲದ ಜಾತ್ಯಾತೀತ ಪ್ರತಿಪಕ್ಷ ಒಕ್ಕೂಟವನ್ನು ನೆಚ್ಚಿಕೊಳ್ಳಲಾಗದು ಎಂಬುದು ಈ ವಿಭಾಗಗಳ ಭಯದ ನಿಜವಾದ ಕಾರಣವಾಗಿದೆ.

1989ರ ಚುನಾವಣೆಗಳ ನಂತರ ಉಂಟಾದ ಕ್ಷೋಭೆಗೆ ಆಗ ಸಮಿಶ್ರ ಸರಕಾರ ಅಧಿಕಾರದಲ್ಲಿದ್ದುದೇ ಕಾರಣ ಎಂಬ ಅರ್ಥ ಬರುವ ರೀತಿಯಲ್ಲಿ ವೆಂಕಟರಾಮನ್ ಮಾತನಾಡಿದ್ದಾರೆ. ಅವರು ಬಿಜೆಪಿಯ ಕೋಮುವಾದಿ ನೀತಿಗಳನ್ನು, ಮತ್ತು 1990 ನವಂಬರ್ ನಲ್ಲಿ ರಾಷ್ಟ್ರೀಯ ರಂಗ ಸರಕಾರವನ್ನು ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಬಿಜೆಪಿಯೊಂದಿಗೆ ಸೇರಿಕೊಂಡು ಉರುಳಿಸಿತು ಎಂಬುದನ್ನು ಅವರು ಮರೆತಿದ್ದಾರೆ. ಸಮಿಶ್ರ ಕೂಟ ಸರಕಾರಗಳು ಸಂಸದೀಯ ಪ್ರಜಾಪ್ರಭುತ್ವದ ಒಂದು ಸಾಮಾನ್ಯ ಲಕ್ಷಣವಾಗಿದೆ. ರಾಜ್ಯಗಳಲ್ಲಿ ಅವು ಬಹಳ ಕಾಲದಿಂದ ಅಸ್ತಿತ್ವದಲ್ಲಿದೆ. ಕೇಂದ್ರದಲ್ಲಿಯೂ ಆ ರೀತಿಯ ಸರಕಾರ ಬಂದರೆ ಅದರಿಂದ ಪ್ರಜಾಪ್ರಭುತ್ವಕ್ಕೆ ಏನೂ ಹಾನಿಯಲ್ಲ.

ಹುಸಿ ಕಾಳಜಿ

ಶೇಕಡ 51 ಮತ ಪಡೆದವರು ಆಳುವಂಥ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬರಬೇಕೆಂದು ವೆಂಕಟರಾಮನ್ ಹಂಬಲಿಸಿದ್ದಾರೆ. ಈಗಿನ ಸಂಸದೀಯ ವ್ಯವಸ್ಥೆಯಲ್ಲಿ ಲೋಪದೋಷ ಇದೆ ಎಂದು ಅವರು ದೊಡ್ಡ ಪಟ್ಟಿಯನ್ನೇ ಮುಂದಿಡುತ್ತಾರೆ. ವಾಸ್ತವವಾಗಿ ಕಡಿಮೆ ಮತ ಪಡೆದವರು ಆಡಳಿತ ನಡೆಸುವಂತ ವ್ಯವಸ್ಥೆಯನ್ನು ತೊಲಗಿಸುವ ದಿಸೆಯಲ್ಲಿ ನೆರವಾಗುವ ಅನುಪಾತ ಪ್ರಾತಿನಿಧ್ಯದ (proportional representation) ಚುನಾವಣೆ ಕ್ರಮ ಜಾರಿಗೆ ಬರಬೇಕೆಂದು ವೆಂಕಟರಾಮನ್ ಪ್ರತಿಪಾದಿಸುವುದೇ ಇಲ್ಲ.

ವೆಂಕಟರಾಮನ್‌ರೇ ಆಗಲಿ, ಹಾಲಿ ಸ್ಪೀಕರ್ ಶಿವರಾಜ್ ಪಾಟೀಲರೇ ಆಗಲಿ ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆ ಆಗಬೇಕಾದುದು ಮುಖ್ಯ ಹಾಗೂ ಅದು ತುರ್ತು ಅಗತ್ಯ ಎಂಬ ಬಗ್ಗೆ ದಿವ್ಯ ಮೌನ ತಾಳಿದ್ದಾರೆ.

ಈಗಿನ ಅಗತ್ಯ

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸದೆ ಅದನ್ನು ಬಲಪಡಿಸಬೇಕಾದುದು ಈಗ ಅಗತ್ಯವಾಗಿದೆ. ಚುನಾವಣಾ ವ್ಯವಸ್ಥೆಯನ್ನು ಸುಧಾರಿಸಿ ಲೋಪದೋಷಗಳನ್ನು ಹೋಗಲಾಡಿಸುವುದು ಅಗತ್ಯ.

ಚುನಾವಣೆ ಸುಧಾರಣೆ ಕುರಿತು ದಿನೇಶ್ ಗೋಸ್ವಾಮಿ ಸಮಿತಿ ಮಾಡಿದ ಸರ್ವಸಮ್ಮತ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಮೂಲಕ ಚುನಾವಣೆ ಸುಧಾರಣೆಗೆ ನಾಂದಿ ಹಾಡಬೇಕೆಂದು ಸಿಪಿಐ(ಎಂ) ಮತ್ತು ಇತರ ಪಕ್ಷಗಳು ಒತ್ತಾಯಿಸುತ್ತಲೇ ಬಂದಿವೆ. ಇದನ್ನು ಮಾಡುವ ಬದಲಿಗೆ, ಕಾಂಗ್ರೆ ಮತ್ತು ಬಿಜೆಪಿಗಳೆರಡೂ ಸುಧಾರಣೆಯ ಹೆಸರಿನಲ್ಲಿ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಟಿಎನ್.ಶೇಷನ್ ಏಕಪಕ್ಷೀಯ ಹಾಗೂ ಹುಚ್ಚು ಹುಚ್ಚಾದ ಕ್ರಮಗಳನ್ನು ಕೈಗೊಳ್ಳಲಿ ಎಂದು ಅವರಷ್ಟಕ್ಕೇ ಬಿಟ್ಟುಬಿಟ್ಟಿವೆ.

ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕಿಸುವ ಕಾನೂನನ್ನು ರೂಪಿಸಬೇಕೆಂದೇಕೆ ಈ ಪಕ್ಷಗಳು ಒತ್ತಾಯಿಸುತ್ತಿಲ್ಲ? ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಸುಗಮವಾಗಿ ಕಾರ್ಯನಿರ್ವಹಿಸಲು ಇರುವ ಮುಖ್ಯ ತೊಡಕುಗಳಲ್ಲಿ ಒಂದನ್ನು ನಿವಾರಿಸಲು ಇಂತ ಕಾನೂನು ಅಗತ್ಯಗಳಿವೆ,.

ದೇಶದ ಪ್ರಸಕ್ತ ಸಂವಿಧಾನದನ್ವಯ ಈಗಿರುವ ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯೇ ಭಾರತಕ್ಕೆ ಉತ್ತಮವಾದುದು ಎಂಬುದನ್ನು ಭಾರತೀಯ ಗಣರಾಜ್ಯದ 45 ವರ್ಷಗಳ ಅನುಭವ ತೋರಿಸಿಕೊಟ್ಟಿದೆ. ಈ ವ್ಯವಸ್ಥೆಯ ಪ್ರಜಾಪ್ರಭುತ್ವದ ತಿರುಳನ್ನು ಆಳುವ ವರ್ಗದ ಪಕ್ಷಗಳವರೇ ನಾಶಪಡಿಸಿದ್ದಾರೆ. ಈ ವ್ಯವಸ್ಥೆ ಜನರ ಪ್ರಜಾಸತ್ತಾತ್ಮಕ ಆಶೋತ್ತರಗಳಿಗೆ ಸ್ಪಂದಿಸುವಂತಾಗಬೇಕಾಗಿದೆ. ಇದಕ್ಕೆ ಒಂದು ಪೂರ್ಣವಾಗಿ ಭಿನ್ನವಾದ ರಾಜಕೀಯ ಸುದಾರಣೆ ಅತ್ಯಗತ್ಯವಾಗುತ್ತಿದೆ.

ಅದೆಂದರೆ:

⊙ ರಾಜ್ಯಗಳಲ್ಲಿನ ನಾನಾ ಬಗೆಯ ರಾಜಕೀಯ ಪ್ರವೃತ್ತಿಗಳನ್ನು ಸಹಿಸಿಕೊಳ್ಳುವಂಥ ಒಕ್ಕೂಟ ವ್ಯವಸ್ಥೆ.

⊙ ಪ್ರಜಾಪ್ರಭುತ್ವವನ್ನು ಬಲಗೊಳಿಸಲು ಅಧಿಕಾರದ ವಿಕೇಂದ್ರೀಕರಣ ಮತ್ತು

⊙ ಚುನಾವಣೆ ವ್ಯವಸ್ಥೆಯ ಈಗಿನ ದೋಷಗಳನ್ನು ಎದುರಿಸಲು ಚುನಾವಣೆ ಸುಧಾರಣೆಗಳು

ಜನರು ಅರಿಯಬೇಕಾದ್ದು......

ಭಾರತದಲ್ಲಿ ಸಂಸದೀಯ ಸರಕಾರದ ವ್ಯವಸ್ಥೆಯಿಂದಾಗಿ ಅಸ್ಥಿರತೆ ಉಂಟಾಗುವುದಿಲ್ಲ. ಬದಲಿಗೆ ಬಂಡವಾಳಶಾಹಿ ಭೂ ಮಾಲಕ ವರ್ಗಗಳ ನೀತಿಗಳು ಅಸ್ಥಿರತೆಯನ್ನು ಸೃಷ್ಟಿಸುತ್ತಿವೆ ಎಂಬುದನ್ನು ಜನರು ಅರಿಯಬೇಕಾಗಿದೆ.

ಜನರ ಅಗತ್ಯಗಳನ್ನು ಗುರುತಿಸುವ ಮತ್ತು ಅವುಗಳ ಆಧಾರದಲ್ಲಿ ನೀತಿಗಳನ್ನು ರೂಪಿಸಲು ಯತ್ನಿಸುವ ಹಾಗೂ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತದ ಸಂಕುಚಿತ ನೀತಿಗಳಿಗೆ ತಲೆಬಾಗಲು ಒಪ್ಪದ ಯಾವುದೇ ಸಮಿಶ್ರ ಸರಕಾರ ಸ್ಥಿರ ಆಡಳಿತವನ್ನು ಒದಗಿಸುವ ಅವಕಾಶವನ್ನು ಪಡೆದಿರುತ್ತದೆ.

ಆಳುವ ವರ್ಗಗಳ ಪ್ರಸ್ತಾವಗಳನ್ನು ಇವನ್ನೇ ವಿಮರ್ಶಾತ್ಮಕವಾಗಿ ಕಾಣಲು ಮನಸ್ಸು ಮಾಡದಿರುವುದರಿಂದಾಗಿ ರಾಜಕೀಯ ಸುಧಾರಣೆಯ ಈ ಪ್ರಸ್ತಾವಗಳು ಅಕಾಲಿಕ ಸಾವನ್ನಪ್ಪುತ್ತಿವೆ.

KRNM/BGS-405 MAG (2) PRB DECR 319-78/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಅಮೇರಿಕಾದ ಬಲೆಗೆ ಬೀಳ ಬೇಡಿ, ಕಾಶ್ಮೀರ ಜನತೆಯ ಮನಗೆಲ್ಲಿ

-ಸರಕಾರಕ್ಕೆ ಸುರ್ಜಿತ್ ಸಲಹೆ

ಚರಾರ್-ಎ-ಷರೀಫ್‌ನ ಘಟನೆಯ ನಂತರವೂ ಭಾರತ ಸರಕಾರಕ್ಕೆ ಕಾಶ್ಮೀರ ಪರಿಸ್ಥಿತಿಯ ಗಂಭೀರತೆಯ ಅರಿವಾದಂತಿಲ್ಲ. ಇದು ಚುನಾವಣಾ ಪ್ರಕ್ರಿಯೆಯನ್ನು ತಡೆಯುವ ಉಗ್ರಗಾಮಿಗಳ ಹತಾಶ ಪ್ರಯತ್ನವೆಂದು ಬಣ್ಣಿಸುತ್ತಾ ಸರಕಾರ ಚುನಾವಣೆ ನಡೆಸಿಯೇ ನಡೆಸುವುದಾಗಿ ಹೇಳಿದೆ. ಯಾರೂ ವಾಸ್ತವತೆಯ ಬಗ್ಗೆ ಇಷ್ಟೊಂದು ಕುರುಡಾಗಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಸಿಪಿಐ(ಎಂ) ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಲೇಖನವೊಂದರಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

ಚುನಾವಣೆ ನಡೆಸಬೇಕೆಂದು ಅಮೇರಿಕನ್ ಆಡಳಿತದ ಸಲಹೆಯನ್ನು ಸ್ವೀಕರಿಸಿ ಭಾರತ ಸರಕಾರ ಅಮೇರಿಕಾದ ಬಲೆಗೆ ಬಿದ್ದಿದೆ ಎಂದು ಸುರ್ಜಿತ್ ಹೇಳಿದ್ದಾರೆ. ಭಾರತ ಸರಕಾರ ಕಾಶ್ಮೀರದ ಜನಸಾಮಾನ್ಯರಿಂದ ಇಷ್ಟೊಂದು ಪ್ರತ್ಯೇಕಗೊಂಡಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ 5% ಮತದಾನ ಕೂಡಾ ನಡೆಯುವುದೆಂದು ನಿರೀಕ್ಷಿಸುವಂತಿಲ್ಲ. ಆಗ ಇಂತಹ ಕಮ್ಮಿ ಮತದಾನ ಕಾಶ್ಮೀರದಲ್ಲಿ ಭಾರತದ ವಿರುದ್ಧ ತೀರ್ಪು ಎಂದು ಅಂತಾರಾಷ್ಟ್ರೀಯ ಸುದ್ದಿ ಮಾಧ್ಯಮಗಳು ಗುಲ್ಲೆಬ್ಬಿಸುತ್ತವೆ; ಜನಮತಗಣನೆ ನಡೆಯಬೇಕೆಂದು ಒತ್ತಾಯ ಬರುವಂತೆ ಚಿತಾವಣೆ ಮಾಡುತ್ತವೆ. ಅಮೇರಿಕಾ ಮೊದಲಿನಿಂದಲೂ ತನ್ನ ತಂತ್ರ ಸಾಧನೆಗಾಗಿ ಒಂದು ಸ್ವತಂತ್ರ ಕಾಶ್ಮೀರ ಸೃಷ್ಟಿಸಬಯಸುತ್ತಿದೆ. ಹೀಗೆ ಚುನಾವಣೆ ನಡೆಸಬೇಕೆಂದು ಅಮೇರಿಕಾದ ಸಲಹೆಯನ್ನು ಸ್ವೀಕರಿಸಿ ಭಾರತ ಸರಕಾರ ಅಮೇರಿಕಾ ಒಡ್ಡಿರುವ ಬಲೆಗೆ ತಾನಾಗಿಯೇ ಬಿದ್ದಿದೆ ಎಂದು ಸುರ್ಜಿತ್ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಭಾರತ ಸರಕಾರ ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆ ಆರಂಭಿಸುವುದಾಗಿ ಹೇಳುತ್ತಿದೆ. ಆದರೆ ಅದರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆ ಎಂದರೆ ಚುನಾವಣೆ ಮಾತ್ರವೇ ಇದ್ದಂತಿದೆ. ಚುನಾವಣೆಯಲ್ಲಿ ಜನ ಭಾಗವಹಿಸುವಂತಾಗಲೂ ಕೂಡಾ ಸೂಕ್ತ ವಾತಾವರಣ ನಿರ್ಮಿಸಬೇಕಲ್ಲವೇ? ಆದರೆ ಸರಕಾರ ಈ ಬಗ್ಗೆ ಯೋಚಿಸುತ್ತಿಲ್ಲ. ಕಾಶ್ಮೀರಿ ಜನಗಳ ನಡುವೆ ಸಾಕಷ್ಟು ಬೆಂಬಲ ಇರುವ ಯಾಸಿನ್ ಮಲ್ಲಿಕ್ ಹಾಗೂ ಶಬ್ಬೀರ್ ಶಾಹರನ್ನು ಜೈಲಿನಿಂದ ಬಿಡುಗಡೆ ಮಾಡಿ ಸಾಕಷ್ಟು ಸಮಯವಾಗಿದ್ದರೂ ಸರಕಾರ ಇಂದಿನವರೆಗೂ ಅವರೊಂದಿಗೆ ಮಾತುಕತೆ ನಡೆಸಿಲ್ಲ. ಒಂದೆಡೆ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಬಯಸುವ ಮೂಲಭೂತವಾಗಿ ಸಂಘಟನೆಗಳ ಮುಖಂಡರಿಗೆ ಅಂತರ್‍ರಾಷ್ಟ್ರೀಯ ಇಸ್ಲಾಮೀ ಸಮ್ಮೇಳನಗಳಲ್ಲಿ ಭಾಗವಹಿಸುವ ಅವಕಾಶ ನೀಡುವ ಸರಕಾರ ಪಾಕಿಸ್ತಾನದೊಡನೆ ಸೇರಬಯಸದ ಸ್ವತಂತ್ರ ಕಾಶ್ಮೀರ ಬಯಸುವವರನ್ನು ಜೈಲಿಗಟ್ಟುತ್ತಿದೆ ಎಂದಿರುವ ಸುರ್ಜಿತ್ ಸರಕಾರದ್ದು ವಿಚಿತ್ರ ಆಚರಣೆ ಎಂದಿದ್ದಾರೆ.

ಕಾಶ್ಮೀರ ಜನತೆಗೆ ಭಾರತ ಸರಕಾರದ ಮೇಲೆ ಎಳ್ಳಷ್ಟು ವಿಶ್ವಾಸ ಇಲ್ಲ ಎಂದು ಚರಾರ್-ಎ-ಷರೀಫ್ ಘಟನೆ ತೋರಿಸಿಕೊಟ್ಟಿದೆ. ಸರಕಾರ ಜನರಿಂದ ಅಷ್ಟೊಂದು ದೂರವಾಗಿಲ್ಲದಿದ್ದರೆ ಆ ಪಟ್ಟಣದಲ್ಲಿ ದರ್ಗಾದ ಸುತ್ತ ಸಿಡಿಮದ್ದುಗಳನ್ನು ನೆಡುವುದು ಉಗ್ರಗಾಮಿಗಳಿಗೆ ಖಂಡಿತಾ ಸಾಧ್ಯವಾಗುತ್ತಿರಲಿಲ್ಲ. ಈ ದುರಂತ ಸಂಭವಿಸುತ್ತಿರಲಿಲ್ಲ. ಈಗಂತೂ ಈ ಘಟನೆಯ ಬಗ್ಗೆ ಭಾರತ ಸರಕಾರದ ವಿಫಲತೆಯ ಬಗ್ಗೆ ಜನ ತಮ್ಮ ಕ್ರೋಧ ವ್ಯಕ್ತಪಡಿಸುತ್ತಿದ್ದಾರೆ. ಪಾಕಿಸ್ತಾನಿ ಸರಕಾರದ ಕುಕೃತ್ಯಗಳ ವಿರುದ್ಧ ಅವರು ಪ್ರತಿಭಟಿಸುವಂತೆ ಮಾಡುವಲ್ಲಿ ಭಾರತ ಸರಕಾರ ಸೋತಿದೆ.

ಒಂದು ದರ್ಗಾವನ್ನು ರಕ್ಷಿಸಲಾರದ ಸರಕಾರ ಚುನಾವಣೆಯಲ್ಲಿ ಭಾಗವಹಿಸಿದರೆ ತಮ್ಮ ಪ್ರಾಣಗಳನ್ನು ರಕ್ಷಿಸಬಲ್ಲದೇ ಎಂದು ಜನ ಕೇಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕಾಶ್ಮೀರಿ ಜನಗಳ ವಿಶ್ವಾಸಗಳಿಸದೆ ಕೇವಲ ಚುನಾವಣೆಯ ಸಾಹಸಕ್ಕಿಳಿಯುವುದು ಅವಿವೇಕವಾಗುತ್ತದೆ ಎಂದು ಸುರ್ಜಿತ್ ಮತ್ತೊಮ್ಮೆ ಎಚ್ಚರಿಸಿದ್ದಾರೆ.

ಜನತಾದಳ ಸರಕಾರ ಎತ್ತ ಸಾಗಿದೆ?

ಪುಟ 1ರಿಂದ

4. ಕೃಷಿ ಉತ್ಪಾದನೆಯಲ್ಲಿ ಹೆಚ್ಚಳಕ್ಕೆ ನಮ್ಮ ರಾಜ್ಯದ 70-80 ಶೇಕಡಾ ರೈತರ ಮೇಲೆ ವಿಶ್ವಾಸ ಇಟ್ಟು ಅವರಿಗೆ ಪ್ರೋತ್ಸಾಹದಾಯಕ ಕ್ರಮಗಳನ್ನು ಅನುಸರಿಸುವ ಬದಲು, ಕಾಂಗ್ರೆಸ್(ಐ) ಸರಕಾರದಂತೆ ಭೂ ಸುಧಾರಣಾ ಕಾನೂನಿನ ಭೂ ಪರಿಮಿತಿಯ ಕಲಂನ್ನು ಕಿತ್ತು ಹಾಕಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮನಬಂದಂತೆ ಭೂಮಿಯನ್ನು ಪಡೆಯಲು ಅನುಕೂಲ ಮಾಡಿಕೊಟ್ಟು "ಕೃಷಿಯ ಹಿಡಿತವನ್ನೇ ಅವರಿಗೆ ಧಾರೆಯೆರೆಯುವ ಯೋಜನೆಗಳನ್ನು ದೇವೇಗೌಡರ ಸರಕಾರ ಮಾಡುತ್ತಿದೆ ಎಂದು ಹೇಳದೆ ನಿರ್ವಾಹವಿಲ್ಲ. ಈಗಾಗಲೇ ಆಹಾರ ಧಾನ್ಯಗಳ ಉತ್ಪಾದನೆ ಹಾಗೂ ಬಳಕೆ ಕಡಿಮೆಯಾಗುತ್ತಿರುವಾಗ ಈ ಆಹಾರ ಧಾನ್ಯಗಳ ಉತ್ಪಾದನೆಯನ್ನೇ ಕಡೆಗಣಿಸುವ ಕೃಷಿ ನೀತಿಯನ್ನು ಅನುಸರಿಸಲು-ಹಣ, ಹಣ್ಣು ಹಂಪಲು ತರಕಾರಿ ಬೆಳೆಸಲು ಸರಕಾರ ಮುಂದಾಗಿರುವುದು ದುರದೃಷ್ಟಕರ.

5. ಅದೇ ವೇಳೆ, ಹಾಲಿನ ಬೆಲೆಯೇರಿಸುವುದಕ್ಕೆ ಬಸ್ ದರ ಏರಿಸುವುದಕ್ಕೆ ವಿದ್ಯುಚ್ಛಕ್ತಿ ಬೆಲೆ ಏರಿಸುವುದಕ್ಕೆ ಹಂಚಿಕೆ ಹಾಕುತ್ತಾ ಬರುತ್ತಿದೆ.

ಇನ್ನು ರಾಜ್ಯದ ಬಹುಭಾಗದ ಜನರ ವಿಷಯದಲ್ಲಿ ಸರಕಾರದ ಧೋರಣೆ ಏನು?

1. ಕಾಂಗ್ರೆಸ್(ಐ) ಸರಕಾರವು ಹೇಗೆ ವರ್ಷಾನುಗಟ್ಟಲೆ ಕನಿಷ್ಠ ಕೂಲಿ ಕಾನೂನಿನ ಒಳಗೆ ಬರುವ 64 ಕೈಗಾರಿಕೆಗಳ 1 ಕೋಟಿಗಿಂತಲೂ ಅಧಿಕ ಕಾರ್ಮಿಕರ ಕನಿಷ್ಠ ಕೂಲಿ ದರಗಳನ್ನು ಪುನರ್ವಿಮರ್ಶೆ ಮಾಡಲಿಲ್ಲವೋ, ಅದೇ ರೀತಿಯಲ್ಲಿ ಈ ಸರಕಾರವು ಈ ಕುರಿತು ಮೌನವಹಿಸುತ್ತಿದೆ. ಈ ಕನಿಷ್ಠ ಕೂಲಿ ಅನ್ವಯವಾಗುವ ಕಾರ್ಮಿಕರು ಹೋರಾಟ ಮಾಡಿದಾಗಲೂ, ಕಾರ್ಮಿಕ ಮುಂದಾಳುಗಳು ಈ ಕುರಿತು ನ್ಯಾಯವಾದ ಬೇಡಿಕೆಗಳನ್ನಿಟ್ಟು ಮಾತುಕತೆಗಳಿಗೆ ಬಂದಾಗಲೂ ಈ ಸರಕಾರ ಈ ಬಗ್ಗೆ ಸಹಾನುಭೂತಿಯ ಯಾವುದೇ ಕ್ರಮಗಳನ್ನು ಅನುಸರಿಸುತ್ತಿಲ್ಲ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಲಕ್ಷಾಂತರ ಬೀಡಿ ಕಾರ್ಮಿಕರ ಹೋರಾಟದ ವೇಳೆ ಜನತಾದಳದ ಸರಕಾರವು ಅನುಸರಿಸುತ್ತಿರುವ ಧೋರಣೆಯೇ ಇದಕ್ಕೆ ಸಾಕ್ಷಿ.

2. ದೇವೇಗೌಡರ ಸರಕಾರವು ಜನತೆಗೆ ರೂ. 3.20ರಲ್ಲಿ ಏಪ್ರಿಲ್ 1ರಿಂದ ಅಕ್ಕಿ ಒದಗಿಸುವುದು ಎಂದು ಹೇಳಿ, ಈಗ ಕೇವಲ ಹೆಸರಿಗಷ್ಟೇ ಕೆಲವು ಸಾವಿರ ಹಸಿರು ಕಾರ್ಡ್ ಕೊಟ್ಟು-ಬಹುಭಾಗದ ಕೃಷಿ ಕೂಲಿಕಾರರನ್ನು, ಅತ್ಯಂತ ಕಡಿಮೆ ಕೂಲಿ ಸಿಗುತ್ತಿರುವ ಕಾರ್ಮಿಕರನ್ನು ಹೊರತುಪಡಿಸಿ-ಅದನ್ನು ಜಾರಿಗೊಳಿಸುತ್ತಿದೆ. ಅದರಲ್ಲೂ ಕಡಿಮೆ ದರದಲ್ಲಿ ಜೋಳವನ್ನು, ರಾಗಿಯನ್ನು ರಾಜ್ಯದ ಬಡ ಜನರಿಗೆ ಒದಗಿಸುವ ಭಾಷೆ ಕೊಟ್ಟು ಇದೀಗ 'ಅದು ಸಾಧ್ಯವಿಲ್ಲ'ವೆಂದು ಈ ಸರಕಾರ ಹಿಂಜರಿಯುತ್ತಿದೆ.

3. ರಾಜ್ಯದ ರೈತ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಹಳ್ಳಿ ಹಳ್ಳಿಗಳಲ್ಲಿ ಹತ್ತಾರು ವರ್ಷಗಳಿಂದ ಆಕ್ರಮಿಸಿಕೊಂಡ ಭೂಮಿಯನ್ನು ತನಿಖೆ ಮಾಡಿ ರೈತರಿಗೆ-ಅದರಲ್ಲೂ ಬಡ ವಿಭಾಗಗಳ ರೈತ-ಕೃಷಿ ಕೂಲಿಕಾರರಿಗೆ ಹಂಚಿ ಕೊಡಲು ಏನೇನೂ ಕ್ರಮ ಕೈಗೊಳ್ಳದೆ, ಅಧಿಕಾರಿಗಳಿಗೆ ಎಲ್ಲಾ ಅಧಿಕಾರ ಕೊಟ್ಟು ಕೆಲವೇ ದಿನಗಳಲ್ಲಿ ತನಿಖೆ ಮಾಡಿ ಭೂಮಿ ಹಂಚಲಾಗುವುದು ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದೆ ಈ ಸರಕಾರ.

4. ಲಕ್ಷಾಂತರ ಮನೆ ನಿವೇಶನಗಳನ್ನು ಕೊಟ್ಟು ಮನೆಗಳನ್ನೇ ಬಡವರಿಗೆ ಕೊಡುವ ಘೋಷಣೆ ಕೊಟ್ಟು ಈ ವಿಷಯದಲ್ಲಿ ಈಗಾಗಲೇ ಇದ್ದ ನಿವೇಶನಗಳನ್ನು ಬಡ ಜನರು ಕಳೆದುಕೊಳ್ಳುವ ಆರ್ಥಿಕ ಧೋರಣೆಗಳನ್ನು ಪೋಲೀಸು ಧೋರಣೆಗಳನ್ನು ಸರಕಾರ ಅನುಸರಿಸುತ್ತಿದೆ.

ಆದ ಕಾರಣ ಜನತಾದಳ ಸರಕಾರದ ನೀತಿಗಳನ್ನು ಬಯಲಿಗೆಳೆದು ಎಚ್ಚರಿಕೆ ಕೊಡಬೇಕಾದ ಪರಿಸ್ಥಿತಿ ಬಂದಿದೆ.

"ಐಕ್ಯತೆ ಮತ್ತು ಹೋರಾಟ"ದ ಗುರಿಸಾಧನೆಯಲ್ಲಿ.....

ಪುಟ 5ರಿಂದ

ಎಡಪಂಥೀಯರ ಸಮುದಾಯಶೀಲ ವಿಭಾಗವಾದ ಸಿಪಿಐ(ಎಂ) ನ ಬಲ ಹೆಚ್ಚುತ್ತಾ ಬಂದುದನ್ನು ಕಂಡ ಇಂದಿರಾಗಾಂಧಿ ಪಶ್ಚಿಮ ಬಂಗಾಳದಲ್ಲಿ 1972ರ ಚುನಾವಣೆಯಲ್ಲಿ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿದರು. ಇದರಲ್ಲಿ ದಾರಿತಪ್ಪಿದ ಸಿಪಿಐನಂತಹ ಎಡಪಕ್ಷಗಳ, ಇತರ ವಿಚ್ಛಿದ್ರಕಾರಿಗಳ ಅವರ ಗೂಂಡಾ ಪಡೆಗಳ, ನಕ್ಸಲೀಯರ ಸಹಾಯವೂ ಇಂದಿರಾಗಾಂಧಿಗೆ ದೊರೆಯಿತು. ಹಿಂದೆ ಗೆದ್ದಿದ್ದ ಎಲ್ಲಾ 121 ಸ್ಥಾನಗಳಲ್ಲಿ ಸಿಪಿಐ(ಎಂ) ಸೋತಿದೆಯೆಂದು ಸಿದ್ಧಾರ್ಥ ಶಂಕರ್ ರಾಯ್‌ರವರನ್ನು ಮುಖ್ಯಮಂತ್ರಿಯಾಗಿ ಹೇರಲಾಯಿತು. ಒಂದು ಕುತೂಹಲದ ಸಂಗತಿಯೆಂದರೆ ಅದೇ ಚುನಾವಣೆಯಲ್ಲಿ ಕೆಲವು ಅರೆ-ಫ್ಯಾಸಿಸ್ಟ್ ಗಳು ಸಿಪಿಐ(ಎಂ) ಗೆಲ್ಲಲಾರದು ಎಂದು ನಿರೀಕ್ಷಿಸಿದ್ದ 18 ಇತರ ಸ್ಥಾನಗಳಲ್ಲಿ ಸಿಪಿಐ(ಎಂ) ಗೆದ್ದಿತು. ಅಂದರೆ ಜನಗಳಿಗೆ ಮುಕ್ತ ಆಯ್ಕೆಗೆ ಅವಕಾಶ ಕೊಟ್ಟಿದ್ದರೆ ಚುನಾವಣೆ ಫಲಿತಾಂಶ ಬೇರೆಯೇ ಆಗುತ್ತಿತ್ತು ಎಂಬುದನ್ನು ಇದು ತೋರಿಸುತ್ತದೆ. ಆಳುವ ವರ್ಗಗಳನ್ನು ಬಲಪ್ರಯೋಗದಿಂದ ಸೋಲಿಸದೆ ಅವರು ಅಧಿಕಾರ ಬಿಟ್ಟು ಕೊಡುವುದಿಲ್ಲ ಎಂದು ಇಲ್ಲಿ ಸಾಬೀತಾದಂತಾಯಿತು.

ಬಂಗಾಳದಲ್ಲಿ 'ಅರೆ-ಫ್ಯಾಸಿಸ್ಟ್ ಭಯೋತ್ಪಾದನೆ' ನಂತರ ಇಡೀ ದೇಶದಲ್ಲಿ ಕಂಡು ಬಂದುದರ ಪೂರ್ವಾಭ್ಯಾಸವಾಗಿತ್ತು. ಬೇರೆಡೆ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನ ವಿಶಾಲಗೊಂಡುದರ ಬಗ್ಗೆ ಈಗಾಗಲೇ ಹೇಳಲಾಗಿದೆ. ಗುಜರಾತ್, ಬಿಹಾರಗಳಲ್ಲಿ ಆದ ನವನಿರ್ಮಾಣ ಆಂದೋಲನದ ರೂಪದಲ್ಲಿ ಸವಾಲು ಬಂದಾಗ, ತನ್ನ ಅಧಿಕಾರಕ್ಕೇ ಸಂಚಕಾರ ಬರುವುದನ್ನು ಕಂಡಾಗ ಇಂದಿರಾಗಾಂಧಿ ಆಂತರಿಕ ತುರ್ತು ಪರಿಸ್ಥಿತಿ ಹೇರಿದರು, ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿದರು, ಮುಷ್ಕರ ನಡೆಯುವುದು ಇತ್ಯಾದಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡಿದರು, ಸಾವಿರಾರು ಮಂದಿಯನ್ನು ಜೈಲಿಗೆಸೆದರು.

ಜನತಾ ಪಕ್ಷ ಸರಕಾರ ಭಿನ್ನ ದಾರಿ ಹಿಡಿಯಲಿಲ್ಲ

ಕೊನೆಯದಾಗಿ 1977ರಲ್ಲಿ ಇಂದಿರಾಗಾಂಧಿ ಮತ್ತು ಆಕೆಯ ಮಿತ್ರರನ್ನು ಮತದಾರರು ಸೋಲಿಸಿದ್ದು ಅವರಿಗೊಂದು ಬಲವಾದ ಆಘಾತವಾಗಿತ್ತು.

ಆದರೆ ನಂತರ ರಚನೆಗೊಂಡ ಜನತಾ ಪಕ್ಷದ ಮಂತ್ರಿಮಂಡಲ ಕಾರ್ಮಿಕ ವರ್ಗದ ಬಗ್ಗೆ ಭಿನ್ನ ದಾರಿಯನ್ನೇನೂ ಹಿಡಿಯಲಿಲ್ಲ. ಅವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ 'ಅಗತ್ಯ ಆಧಾರಿತ ಕನಿಷ್ಠ ಕೂಲಿ' ಎಲ್ಲಾ ಕಾರ್ಮಿಕರಿಗೂ ನೀಡುವುದಾಗಿ ಭರವಸೆ ನೀಡಿದ್ದರು. ಅಧಿಕಾರಕ್ಕೆ ಬಂದ ಮೇಲೆ ಅದರ ಬದಲು ಆದಾಯದ ಅಂತರ ಪ್ರಶ್ನೆಯ ಬಗ್ಗೆ ಪರಿಶೀಲಿಸಬೇಕೆಂಬ ಒಂದು ಸಮಿತಿ ನೇಮಿಸಲಾಯಿತು. ಭೂತಲಿಂಗಂ ನೇತೃತ್ವದ ಸಮಿತಿ ಕೂಲಿಯನ್ನು ಕ್ರಮೇಣ 1979 ರಿಂದ ಐದು ವರ್ಷಗಳಲ್ಲಿ ತಿಂಗಳಿಗೆ ರೂ. 150ಗೆ ತರಬೇಕು ಎಂದು ಶಿಫಾರಸು ಮಾಡಿತು. ಸಂಸತ್ತಿನಲ್ಲಿ ಕುಖ್ಯಾತ 'ಕೈಗಾರಿಕಾ ಸಂಬಂಧಗಳ ಮಸೂದೆ'ಯನ್ನು ಆ ಸರಕಾರ ಮಂಡಿಸಿತು. ಜನತಾ ಸರಕಾರ ನೀಡಿದ ಬಿ.ಪಿ.ಇ. (ಸಾರ್ವಜನಿಕ ವಲಯದ ಉದ್ದಿಮೆ)ಯ ಮಾರ್ಗದರ್ಶನ ಸೂತ್ರಗಳನ್ನು ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳು ವಿರೋಧಿಸಿದವು. ಜನತಾ ಸರಕಾರದ ಕಾಲದಲ್ಲಿ ಇಂಟಕ್ ಕೂಡಾ ಕೈಗಾರಿಕಾ ಸಂಬಂಧಗಳ ಮಸೂದೆಯ ವಿರುದ್ಧ ಪ್ರತಿಭಟನೆಯಲ್ಲಿ ಸೇರಿಕೊಂಡಿತು. ಈ ಬಿ.ಪಿ.ಇ. ನಿರ್ದೇಶನಗಳ ವಿರುದ್ಧ ಹೋರಾಟ ಹಾಗೂ ಭೂತಲಿಂಗಂ ಸಮಿತಿಯ ಶಿಫಾರಸುಗಳ ವಿರುದ್ಧ ಹೋರಾಟ ಜನತಾಪಕ್ಷದ ಸರಕಾರ ಕುಸಿದು ಇಂದಿರಾಗಾಂಧಿ 1980ರಲ್ಲಿ ಅಧಿಕಾರಕ್ಕೆ ಬಂದಾಗಲೂ 1980ರ ದಶಕದಲ್ಲಿ ಮುಂದುವರೆಯಿತು.

ಮೊದಲ ಐ.ಎಂ.ಎಫ್. ಸಾಲ ಎನ್.ಸಿ.ಸಿ. ರಚನೆ

ಅಧಿಕಾರಕ್ಕೆ ಮರಳಿದ ಇಂದಿರಾಗಾಂಧಿ, ತನ್ನ ಹಳೆಯ ನೀತಿಗಳನ್ನೇ ಮುಂದುವರೆಸಿದರಷ್ಟೇ (ತುರ್ತು ಪರಿಸ್ಥಿತಿ ಹೇರುವುದನ್ನು ಬಿಟ್ಟು). ಸಾರ್ವಜನಿಕ ವಲಯದ ಕಾರ್ಮಿಕರಿಗೆ ಒಂದು ಯೋಗ್ಯ ವೇತನ ಹೆಚ್ಚಳವನ್ನು ನಿರಾಕರಿಸಲು ಭಾರೀ ಪ್ರಯತ್ನ ಪಟ್ಟರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಪಿ.ರಾಮಮೂರ್ತಿಯವರು ಸರಕಾರದ ಈ ನೀತಿಯನ್ನು ಐಕ್ಯತೆಯಿಂದ ಎದುರಿಸಬೇಕೆಂದು ಕರೆ ನೀಡಿದರು. ಆದರೆ ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳ ಮುಖಂಡರು ತರಾತುರಿಯಿಂದ ಒಂದು ಒಪ್ಪಂದ ಮಾಡಿಕೊಂಡರು. ಆದರೆ ಮುಖವುಳಿಸಿಕೊಳ್ಳುವ ಒಂದು ಅಂಶವನ್ನೂ ಅದರು ಸೇರಿಸಿಕೊಂಡರು. ಅದೆಂದರೆ ಬಿ.ಹೆಚ್.ಇ.ಎಲ್. ಕಾರ್ಮಿಕರಿಗೆ ಅವರಿಗಿಂತ ಹೆಚ್ಚು ಕೊಟ್ಟರೆ ತಾವೂ ಅದಕ್ಕೆ ಅರ್ಹರಾಗುತ್ತೇವೆ ಎಂದು. ಆದ್ದರಿಂದ ಬಿ.ಹೆಚ್.ಇ.ಎಲ್. ನಲ್ಲಿ ಒಂದು ಉತ್ತಮ ಒಪ್ಪಂದವಾದಾಗ ಸಿಐಟಿಯು ಮತ್ತು ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಮಿಕರ ಒತ್ತಾಯದಿಂದ ಬೆಂಗಳೂರಿನ ಉದ್ದಿಮೆಗಳ ಸಂಘಗಳ ಮುಖಂಡರು ಮುಷ್ಕರದ ಕರೆ ನೀಡಲೇಬೇಕಾಗಿ ಬಂತು. ಹೀಗೆ 1980-81ರಲ್ಲಿ ಬೆಂಗಳೂರಿನ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ನಡೆದ ಮುಷ್ಕರದ ಪರಿಣಾಮವಾಗಿ ಜುಲೈ 4 ರಂದು ಮುಂಬೈನಲ್ಲಿ ದುಡಿಯುವ ಜನಗಳ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ 'ರಾಷ್ಟ್ರೀಯ ಪ್ರಚಾರ ಸಮಿತಿ' (ಎನ್.ಸಿ.ಸಿ) ರಚನೆಗೊಂಡಿತು. ಆ ವೇಳೆಗಾಗಲೇ ಇಂದಿರಾಗಾಂಧಿ ಐ.ಎಂ.ಎಫ್‌ನ ಹಲವು ಶರತ್ತುಗಳಿಗೆ ತಲೆಬಾಗಿ ಸಾಲವನ್ನು ಮೊದಲಬಾರಿಗೆ ಸ್ವೀಕರಿಸಿದ್ದರು. ಬೆಲೆಯೇರಿಕೆ, ನಿರುದ್ಯೋಗ, ಕೈಗಾರಿಕೆಗಳು ರೋಗಗ್ರಸ್ತವಾಗುತ್ತಿದ್ದುದು ಇತ್ಯಾದಿಗಳ ವಿರುದ್ಧ ಎನ್.ಸಿ.ಸಿ. ನೇತೃತ್ವದಲ್ಲಿ ಒಂದಾದ ಮೇಲೊಂದರಂತೆ ಹೋರಾಟಗಳು ನಡೆದವು. ಈ ಅವಧಿಯಲ್ಲಿ ಭಾರತದಾದ್ಯಂತ ದೊಡ್ಡ ಉದ್ದಿಮೆಗಳಲ್ಲೂ ವಿವಿಧ ಹೋರಾಟಗಳು ಕಂಡು ಬಂದವು. 1981ರಿಂದ 1984ರವರೆಗೆ ಹಲವು ರ್‍ಯಾಲಿಗಳು ಸಾರ್ವತ್ರಿಕ ಮುಷ್ಕರಗಳು ನಡೆದವು.

ಇಂದಿರಾಗಾಂಧಿ ಕೊಲೆಯ ನಂತರ ಆಕೆಯ ಮಗ ರಾಜೀವ್ ಗಾಂಧಿ 1985ರಲ್ಲಿ ಅಧಿಕಾರಕ್ಕೆ ಬಂದರು. ಆಮದು ಹೆಚ್ಚಿಸುವ ನೀತಿಯನ್ನು ಬಹಳ ಜೋರಾಗಿ ಅನುಸರಿಸಿದ ಅವರು 21ನೇ ಶತಮಾನಕ್ಕೆ ನೆಗೆಯುವುದು ಇತ್ಯಾದಿ ಘೋಷಣೆಗಳನ್ನು ಮುಂದಿಟ್ಟರು. ಐ.ಎಂ.ಎಫ್. ಸಾಲ, ವಿಪರೀತ ವಿದೇಶೀ ವಿನಿಮಯ ಕೊರತೆ, ಭ್ರಷ್ಟಾಚಾರ ಇತ್ಯಾದಿಗಳಿಂದ ರಾಜೀವ್ ಗಾಂಧಿ ಆಳ್ವಿಕೆಯ ಪತನವಾಯಿತು.

1989ರ ನಂತರ

30.6.1989ರಂದು ಒಂದು ಸಾರ್ವತ್ರಿಕ ಮುಷ್ಕರ ನಡೆಯಿತು. 1989ರ ವರ್ಷಾಂತ್ಯದಲ್ಲಿ ನಡೆದ ಸಾರ್ವಜನಿಕ ಚುನಾವಣೆಗಳಲ್ಲಿ ವಿ.ಪಿ.ಸಿಂಗ್‌ರ ಜನತಾದಳ ಸರಕಾರ ಅಧಿಕಾರಕ್ಕೆ ಬಂತು. ಸ್ವತಃ ಒಂದು ಸ್ಪಷ್ಟ ಬಹುಮತ ಇಲ್ಲದೆ ಒಂದೆಡೆ ಎಡಪಕ್ಷಗಳನ್ನು ಹಾಗೂ ಇನ್ನೊಂದೆಡೆ ಬಿಜೆಪಿಯನ್ನು ಅವಲಂಬಿಸಬೇಕಾಗಿದ್ದ ಈ ಸರಕಾರ ಅದಕ್ಕೆ ಭಾರಿ ಬೆಲೆ ತೆರಬೇಕಾಯಿತು.

ಆದರೆ ವಿ.ಪಿ.ಸಿಂಗ್ ಅಧಿಕಾರಕ್ಕೆ ಅಂಟಿಕೊಳ್ಳಲು ಕೋಮುವಾದದೊಂದಿಗೆ ರಾಜಿ ಮಾಡಿಕೊಳ್ಳುವ ದಾರಿ ಹಿಡಿಯಲಿಲ್ಲ, ರಥಯಾತ್ರೆಯ ಸಮಯದಲ್ಲಿ ಎಲ್.ಕೆ. ಅಡ್ವಾಣಿಯವರನ್ನು ಬಂಧಿಸುವ ಧೈರ್ಯ ತೋರಿದರು ಎಂಬುದು ಮೆಚ್ಚತಕ್ಕದ್ದು.

ಕಾಂಗ್ರೆಸ್ ಊರುಗೋಲಿನಿಂದ ನಿಂತಿದ್ದ ಚಂದ್ರಶೇಖರ್ ಸರಕಾರದ ರಾಜೀನಾಮೆಯ ನಂತರ ಸಾರ್ವತ್ರಿಕ ಚುನಾವಣೆಗಳ ವೇಳೆ ಆತ್ಮಹತ್ಯಾ ಬಾಂಬ್ ತಂಡದ ವ್ಯಕ್ತಿಯಿಂದ ರಾಜೀವ್ ಗಾಂಧಿ ಕೊಲೆಯಾದರು. ಈಗಿನ ಪ್ರಧಾನಿ ನರಸಿಂಹರಾವ್ ಅಧಿಕಾರಕ್ಕೆ ಬಂದರು.

ಚಂದ್ರಶೇಖರ್ ಕೈಗೊಂಬೆ ಸರಕಾರವಾಗಲೀ, ನಂತರದ ಅಲ್ಪಮತದ ನರಸಿಂಹರಾವ್ ಸರಕಾರವಾಗಲೀ ಅಧಿಕಾರದಲ್ಲುಳಿಯಲಿಕ್ಕಾಗಿ ದೇಶದ ಹಿತಾಸಕ್ತಿಯನ್ನು ಮಾರಿ ತಿನ್ನಲೂ ಹಿಂಜರಿಯಲಿಲ್ಲ.

1977 ರಿಂದ 1991ರ ಅವಧಿಯಲ್ಲಿ ಕಾರ್ಮಿಕ ಆಂದೋಲನ ಭಾರೀ ದೊಡ್ಡ ಸವಾಲುಗಳನ್ನು ಎದುರಿಸಬೇಕಾಗಿ ಬಂತು. ಕಾರ್ಮಿಕ ಆಂದೋಲನಕ್ಕೆ ಈ ಅವಧಿ ಐಕ್ಯತೆ ಮತ್ತು ಹೋರಾಟಗಳ ಅವಧಿ. ಇದರಲ್ಲಿ ಆಳುವ ವರ್ಗಗಳ ನೆರವೂ ಇತ್ತು, ವಿರೋಧವೂ ಇತ್ತು.

ಈ ಅವಧಿಯಲ್ಲಿ ಕಾರ್ಮಿಕ ಸಂಘಗಳ ನಡುವಿನ ಸ್ಪರ್ಧೆ ತೀವ್ರ ಸ್ವರೂಪವನ್ನು ಪಡೆದದ್ದನ್ನೂ ಕಾಣಬಹುದು. ಮ್ಯಾನೇಜುಮೆಂಟುಗಳು ಇಂತಹ ಸ್ಪರ್ಧೆ, ಕಿತ್ತಾಟಗಳು ನಡೆಯುವಂತೆ ತಂತ್ರ ಹೂಡಿದವು, ಅಂತಹ ಕಿತ್ತಾಟಗಳು ನಡೆಯುತ್ತಲೇ ಇರುವಂತೆಯೂ ನೋಡಿಕೊಂಡವು. ಅದೇ ವೇಳೆಗೆ ಒಂದಾದ ಮೇಲೊಂದರಂತೆ ನಡೆದ ಐಕ್ಯ ಕಾರ್ಯಾಚರಣೆಗಳು ಹೀಗೆ ಪರಸ್ಪರ ಸ್ಪರ್ಧೆಗಿಳಿದಿದ್ದ ಕಾರ್ಮಿಕ ಆಂದೋಲನದ ವಿವಿಧ ವಿಭಾಗಗಳನ್ನು ಒಂದೇ ವೇದಿಕೆಯ ಮೇಲೆ ಒಟ್ಟುಗೂಡಿಸಬೇಕಾದ ಸಂದರ್ಭವೂ ಇತ್ತು.

ಇದೆಲ್ಲಾ ಒಂದೆಡೆ ಸಿಐಟಿಯು ಸ್ಥಾನಮಾನವನ್ನು ಬಲಪಡಿಸಿದರೆ ಇನ್ನೊಂದೆಡೆ ಆಳುವ ವರ್ಗಗಳೊಂದಿಗೆ ಶಾಮೀಲಾಗಿರುವ ಶಕ್ತಿಗಳನ್ನು ದುರ್ಬಲಗೊಳಿಸಿದವು. ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಗಳ ಹಾಗೂ ಹೊಸ ಕೈಗಾರಿಕಾ ನೀತಿಗಳ ಹಿನ್ನೆಲೆಯಲ್ಲಿ ಇದು ಕಾರ್ಮಿಕ ಆಂದೋಲನದಲ್ಲಿ ಒಂದು ಹೊಸ ಘಟ್ಟಕ್ಕೆ ನಾಂದಿ ಹಾಕಿತು.

ಕಾಂ.ಎ.ವಿ. ಅಪ್ಪಾಸ್ವಾಮಿ ರೆಡ್ಡಿ ನಿಧನ

ಪುಟ 1ರಿಂದ

ಪ್ರವರ್ತನ, ಜನವರಿ 1981ರಲ್ಲಿ ನಡೆದ ಬೃಹತ್ ರೈತ ಜಾಥಾದಲ್ಲಿ ಅಪ್ಪಾಸ್ವಾಮಿ ರೆಡ್ಡಿಯವರು ಪ್ರಮುಖ ಪಾತ್ರ ವಹಿಸಿದರು. ಜೂನ್ 1981ರಲ್ಲಿ ಗುಂಡೂರಾವ್ ಸರಕಾರ ಇವರನ್ನು ಕೋಲಾರ ಜಿಲ್ಲೆಯಿಂದ ಗಡೀಪಾರು ಮಾಡಲು ಪ್ರಯತ್ನಿಸಿತು.

1983ರಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ವಿಧಾನಸಭೆಗೆ ಅಪ್ಪಾಸ್ವಾಮಿ ರೆಡ್ಡಿಯವರು ಆಯ್ಕೆಯಾದರು.

1957ರ ನವೆಂಬರ್‌ನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಸ್ಥಾಪನೆಯಾದಾಗ ಕಾಂ. ಅಪ್ಪಾಸ್ವಾಮಿ ರೆಡ್ಡಿಯವರು ರಾಜ್ಯ ಕಾರ್ಯಕಾರಿ ಸಮಿತಿಗೆ ಆಯ್ಕೆಗೊಂಡರು. ರೈತರ ಹೋರಾಟಗಳು ಮಾತ್ರವಲ್ಲ, ಅಭಾವ ಪರಿಹಾರ ಕಾರ್ಯದಲ್ಲೂ ಆರಂಭದಿಂದಲೂ ಹೋರಾಟ ನಡೆಸಿದವರು ಕಾಂ. ಅಪ್ಪಾಸ್ವಾಮಿ ರೆಡ್ಡಿಯವರು. ಇದರಲ್ಲಿ 1958ರ 'ಅಕಲಿ ಯಾತ್ರೆ'ಯು ಜಾಥಾ ಪ್ರಮುಖವಾದದ್ದು.

ಕಾಂ.ಎ.ವಿ. ಅಪ್ಪಾಸ್ವಾಮಿ ರೆಡ್ಡಿಯವರ ಅಂತಿಮ ಯಾತ್ರೆ ಮೇ 29ರಂದು ನಡೆಯಿತು. ಇದರಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯ ಪರವಾಗಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ. ನಂಜುಂಡಪ್ಪ, ಬಾಗೇಪಲ್ಲಿಯ ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿ, ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಯ್ಯಾರೆಡ್ಡಿ, ಬಾಗೇಪಲ್ಲಿ ತಾಲ್ಲೂಕು ಕಾರ್ಯದರ್ಶಿ ವೆಂಕಣ್ಣ ರೆಡ್ಡಿ, ಇ. ರಾಮಕೃಷ್ಣಪ್ಪ ಹಾಗೂ ಜಿಲ್ಲಾ ಪರಿಷತ್ ಸದಸ್ಯ ಗಂಗುಳಪ್ಪ ಮತ್ತಿತರರು ಭಾಗವಹಿಸಿದ್ದರು.